ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 30 ಮಂಗಳವಾರ 2023

ಸಂಪುಟ: 44 | ಸಂಚಿಕೆ: 44 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಖಾಸಗಿ ಬಸ್–ಇನ್ನೋವಾ ಕಾರು ನಡುವೆ ತಿ.ನರಸೀಪುರ ಬಳಿ ಭೀಕರ ಅಪಘಾತ

ಬಳ್ಳಾರಿ ಮೂಲದ 10 ಮಂದಿ ಸಾವು



ಬಳ್ಳಾರಿಯಿಂದ ಪ್ರವಾಸಕ್ಕೆ ಬಂದಿದ್ದ ಮೂರು ಕುಟುಂಬಗಳ ಸದಸ್ಯರು

● ಪ್ರವಾಸಕ್ಕೆ ಬಂದಿದ್ದ ಮೂರು ಕುಟುಂಬಗಳ ಸದಸ್ಯರು ● ಬಿಳಿಗಿರಿರಂಗನ ಬೆಟ್ಟದಿಂದ ಮೈಸೂರಿಗೆ ಮರಳುವಾಗ ಘೋರ ದುರಂತ ● ಮಕ್ಕಳು, ಮಹಿಳೆಯರ ಶವಗಳು ಚೆಲ್ಲಾಪಿಲ್ಲಿ ● ಬಳ್ಳಾರಿಯಿಂದ ರೈಲಿನಲ್ಲಿ ಬಂದು ಇಲ್ಲಿ ಟ್ಯಾಕ್ಸಿ ಬಾಡಿಗೆಗೆ ಪಡೆದು ವಿಹರಿಸುತ್ತಿದ್ದರು ● ಊರಿಗೆ ಮರಳಲು ಸಂಜೆ ರೈಲು ಟಿಕೆಟ್ ಕೂಡ ಬುಕ್ ಆಗಿತ್ತು ● ತೀವ್ರವಾಗಿ ಗಾಯಗೊಂಡ ನಾಲ್ವರಿಗೆ ಮೈಸೂರು ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ





ಮೈಸೂರು–ಕೊಳ್ಳೇಗಾಲ ಹೆದ್ದಾರಿಯಲ್ಲಿ ತಿ.ನರಸೀಪುರ ಬಳಿ ಭೀಕರ ಅಪಘಾತದಿಂದ ನಜ್ಜು–ಗುಜ್ಜಾಗಿರುವ ಖಾಸಗಿ ಬಸ್ ಹಾಗೂ ಇನ್ನೋವಾ ಕಾರ್.

ತಿ.ನರಸೀಪುರ, ಮೇ 29 (ಕುಮಾರ್, ಆರ್‌ಕೆ)– ಖಾಸಗಿ ಬಸ್‌ಗೆ ಇನ್ನೋವಾ ಕಾರು ಅಪ್ಪಳಿಸಿದ ಹಿನ್ನೆಲೆಯಲ್ಲಿ ಮೂವರು ಮಕ್ಕಳು ಸೇರಿ 10 ಮಂದಿ ಪ್ರವಾಸಿಗರು ಮೃತಪಟ್ಟು, ನಾಲ್ವರು ತೀವ್ರವಾಗಿ ಗಾಯಗೊಂಡ ಭೀಕರ ಅಪಘಾತ ಘಟನೆ ಮೈಸೂರು–ಕೊಳ್ಳೇಗಾಲ ಹೆದ್ದಾರಿಯಲ್ಲಿ ತಿ.ನರಸೀಪುರ ತಾಲೂಕಿನ ಕುರುಬೂರು ಬಳಿ ಸೋಮವಾರ ಮಧ್ಯಾಹ್ನ ಸಂಭವಿಸಿದೆ.

ಬೇಸಿಗೆ ರಜೆ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆ ಸಂಗನಕಲ್ಲು ಗ್ರಾಮದಿಂದ ಮೈಸೂರಿಗೆ ಆಗಮಿಸಿದ್ದ ಮೂರು ಕುಟುಂಬಗಳಿಗೆ ಸೇರಿದ ಮಂಜುನಾಥ್(35), ಇವರ ಪತ್ನಿ ಪೂರ್ಣಿಮಾ(30), ಮಕ್ಕಳಾದ ಪವನ್(10), ಕಾರ್ತಿಕ್(8), ಮತ್ತೊಂದು ಕುಟುಂಬದ ಸಂದೀಪ್(24), ಇವರ ತಂದೆ ಕೊಟ್ರೇಶಿ(46), ತಾಯಿ ಸುಜಾತ(40), ಮತ್ತೊಂದು ಕುಟುಂಬದ ಜನಾರ್ಧನ್, ಅವರ ಪತ್ನಿ ಗಾಯತ್ರಿ, ಪುತ್ರಿ ಶ್ರಾವ್ಯ ಮತ್ತು ಶ್ರೀರಂಗಪಟ್ಟಣದ ಕಾರು ಚಾಲಕ ಆದಿತ್ಯ ಈ ಭೀಕರ ಅಪಘಾತದಲ್ಲಿ ಮೃತಪಟ್ಟಿದ್ದು, ಬಳ್ಳಾರಿ ಜಿಲ್ಲೆಯ ಜನಾರ್ಧನ್(45), ಶಶಿಕುಮಾರ್(24), ಪುನೀತ್(4) ಮತ್ತು ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ತಿ.ನರಸೀಪುರದ ಕಾಲೇಜು ವಿದ್ಯಾರ್ಥಿನಿ ಭಾನು ತೀವ್ರವಾಗಿ ಗಾಯಗೊಂಡಿದ್ದು ಇವರೆಲ್ಲರೂ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಳ್ಳಾರಿಯ ಸಂಗನಕಲ್ಲು ಗ್ರಾಮದಿಂದ ಮೈಸೂರಿಗೆ ಪ್ರವಾಸಕ್ಕೆ ಬಂದಿದ್ದ ಈ ಕುಟುಂಬಗಳು ಪ್ರವಾಸಿ ತಾಣಗಳನ್ನು ವೀಕ್ಷಿಸಿದ ಖುಷಿಯನ್ನು ಪರಸ್ಪರ ಹಂಚಿಕೊಳ್ಳುತ್ತಾ ಸಂಜೆ ರೈಲಿನಲ್ಲಿ ಬಳ್ಳಾರಿಗೆ ಪ್ರಯಾಣ ಬೆಳೆಸಬೇಕಾಗಿತ್ತು ಆದರೆ, ಮಾರ್ಗಮಧ್ಯೆಯೇ ಜವರಾಯ ಕಾದು ಕುಳಿತಿದ್ದ. ಭೀಕರ ಅಪಘಾತದಲ್ಲಿ ಮೂರು ಕುಟುಂಬಗಳ ಬಹುತೇಕ ಸದಸ್ಯರು ಇಹಲೋಕ ತ್ಯಜಿಸಿದ್ದಾರೆ. ಮಂಜುನಾಥ್ ಕುಟುಂಬದಲ್ಲಿ ಅವರೂ ಸೇರಿದಂತೆ ಪತ್ನಿ ಹಾಗೂ ಇಬ್ಬರು ಮಕ್ಕಳು ಮೃತಪಟ್ಟಿದ್ದು, ಇಡೀ ಕುಟುಂಬವೇ ಸಾವಿನ ಮನೆ ಸೇರಿದಂತಾಗಿದೆ. ಸಂದೀಪ್, ತಮ್ಮ ತಂದೆ ಹಾಗೂ ತಾಯಿಯೊಂದಿಗೆ ಇಹಲೋಕ ತ್ಯಜಿಸಿದ್ದಾನೆ. ಜನಾರ್ಧನ್ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿದ್ದು, ಅವರು ಪತ್ನಿ ಮತ್ತು ಮಗುವನ್ನು ಕಳೆದುಕೊಂಡಿದ್ದಾರೆ. ಬೇಸಿಗೆ ರಜೆ ಕಳೆಯಲು ಈ ಕುಟುಂಬಗಳು ಮಕ್ಕಳೊಂದಿಗೆ ಮೇ 27ರಂದು ಬಳ್ಳಾರಿಯಿಂದ ರೈಲಿನಲ್ಲಿ ಮೈಸೂರಿಗೆ ಆಗಮಿಸಿದ್ದವು. ▶ 8ನೇ ಪುಟಕ್ಕೆ

ಮೈಸೂರು ದುರಂತಕ್ಕೆ ಮೋದಿ ಸಂತಾಪ: ಪರಿಹಾರ ಘೋಷಣೆ



ದೆಹಲಿ: ಕರ್ನಾಟಕದ ಮೈಸೂರು ಜಿಲ್ಲೆಯ ತಿ.ನರಸೀಪುರ ಬಳಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟವರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಜೊತೆಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಡಿ ಸಂತ್ರಸ್ತರಿಗೆ ಪರಿಹಾರ ಘೋಷಿಸಿದ್ದಾರೆ. ಈ ಸಂಬಂಧ ಪ್ರಧಾನಮಂತ್ರಿ ಕಚೇರಿ ಟ್ವೀಟ್ ಮಾಡಿದೆ. "ಕರ್ನಾಟಕದ ಮೈಸೂರು ಬಳಿ ಸಂಭವಿಸಿದ ಭೀಕರ ಅಪಘಾತದಿಂದ ತೀವ್ರ ದುಃಖವಾಗಿದೆ. ಮೃತಪಟ್ಟವರಿಗೆ ನನ್ನ ಸಂತಾಪಗಳನ್ನು ಅರ್ಪಿಸುತ್ತೇನೆ. ▶ 8ನೇ ಪುಟಕ್ಕೆ

ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ. ಪರಿಹಾರ



ಬೆಂಗಳೂರು: ಮೈಸೂರು ಜಿಲ್ಲೆಯ ಕುರುಬೂರು ಗ್ರಾಮದ ಪಿಂಜರಾ ಪೋಲ್ ಬಳಿ ಸೋಮವಾರ ಖಾಸಗಿ ಬಸ್ ಮತ್ತು ಕಾರು ಮುಖಾಮುಖಿ ಡಿಕ್ಕಿಯಾಗಿ 10 ಮಂದಿ ಮೃತಪಟ್ಟಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂಪಾಯಿ ಪರಿಹಾರ ಘೋಷಿಸಿದ್ದಾರೆ.

ಮೈಸೂರು ಜಿಲ್ಲೆಯ ತಿ.ನರಸೀಪುರ ಬಳಿ 10 ಅಮಾಯಕರ ಸಾವಿಗೆ ಕಾರಣವಾದ ಭೀಕರ ಅಪಘಾತದ ಸುದ್ದಿ ಕೇಳಿ ಸಂಕಟವಾಯಿತು. ಮೃತರ ಆತ್ಮಕ್ಕೆ ▶ 8ನೇ ಪುಟಕ್ಕೆ

ರಾಷ್ಟ್ರಪತಿ ದ್ರೌಪದಿ ಮುರ್ಮು ಸಂತಾಪ



ದೆಹಲಿ: ತಿ.ನರಸೀಪುರ–ಕೊಳ್ಳೇಗಾಲ ಮುಖ್ಯ ರಸ್ತೆಯಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮೃತಪಟ್ಟವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತೀವ್ರ ಸಂತಾಪ ಸೂಚಿಸಿ ಟ್ವೀಟ್ ಮಾಡಿದ್ದಾರೆ. 'ಮೈಸೂರಿನಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮಕ್ಕಳೂ ಸೇರಿದಂತೆ ಹಲವರ ಪ್ರಾಣಹಾನಿಯಾದ ದುರದೃಷ್ಟಕರ ಘಟನೆ ಬಗ್ಗೆ ತಿಳಿದು ತೀವ್ರ ನೋವಾಯಿತು. ಮೃತರ ಕುಟುಂಬಗಳಿಗೆ ನನ್ನ ಸಂತಾಪಗಳು. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ' ಎಂದು ತಿಳಿಸಿದ್ದಾರೆ.

ಚಾಲಕರ ಅತೀ ವೇಗ, ಹೆದ್ದಾರಿ ಪ್ರಾಧಿಕಾರದ ಬೇಜವಾಬ್ದಾರಿಗೆ ಜನರ ಆಕ್ರೋಶ

ತಿ.ನರಸೀಪುರ, ಮೇ 29–ತಾಲೂಕಿನ ಮೂಗೂರು ಗ್ರಾಮದ ಬಳಿ ಸೋಮವಾರ ನಡೆದ ಭೀಕರ ಅಪಘಾತಕ್ಕೆ ವಾಹನ ಚಾಲಕರ ಅತೀ ವೇಗ ಹಾಗೂ ನಿರ್ಲಕ್ಷ್ಯತೆ ಜೊತೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಬೇಜವಾಬ್ದಾರಿಯೂ ಕಾರಣ ಎಂಬ ಆರೋಪಗಳು ಕೇಳಿಬಂದಿವೆ. ಹೆದ್ದಾರಿಯಲ್ಲಿ ತಿರುವುಗಳಿದ್ದಾಗ ಎದುರು–ಬದುರು ಬರುವ ವಾಹನಗಳು ಚಾಲಕರಿಗೆ ಗೋಚರಿಸುವಂತಿರಬೇಕಾದರೆ ರಸ್ತೆ ಆಜುಬಾಜಲ್ಲಿ ಯಾವುದೇ ಗಿಡ–ಮರ ಇಲ್ಲವೇ ಇನ್ನಿತರ ಮರೆಯಾಗುವಂತಹ ಪರಿಸ್ಥಿತಿ ಇರಬಾರದು. ಒಂದು ವೇಳೆ ಇಂತಹ ಮರೆಯಾಗುವಂತಹ ಸ್ಥಿತಿ ▶ 6ನೇ ಪುಟಕ್ಕೆ

ಪುಸ್ತಕಗಳು ಬಾಳ ಬೆಳಗುವ ಕೈದೀವಿಗೆಗಳು...

■ ಪುಟ–4

ಸಿಎಂ ಸಿದ್ದರಾಮಯ್ಯ ಆಪ್ತರಿಗೆ ಪ್ರಮುಖ ಖಾತೆಗಳ ಬಂಪರ್

ಸಚಿವರಿಗೆ ಖಾತೆ ಹಂಚಿಕೆ ಪಟ್ಟಿಗೆ ರಾಜ್ಯಪಾಲರ ಅಂಕಿತ

ಬೆಂಗಳೂರು, ಮೇ29–(ಕೆಎಂಶಿ) ಹಣಕಾಸು, ಬೃಹತ್ ಕೈಗಾರಿಕೆ, ಇಂಧನ, ಸಮಾಜ ಕಲ್ಯಾಣ, ಲೋಕೋಪಯೋಗಿ, ಕಂದಾಯ, ಆರೋಗ್ಯ ಮತ್ತು ಶಿಕ್ಷಣ ಸೇರಿದಂತೆ ಪ್ರಮುಖ ಇಲಾಖೆ ಖಾತೆಗಳನ್ನು ತಮ್ಮ ಆಪ್ತ ಹಾಗೂ ಬೆಂಬಲಿಗ ಮಂತ್ರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ್ದಾರೆ.

ಕೇಂದ್ರದ ವರಿಷ್ಠರು ಶಿಫಾರಸು ಮಾಡಿದ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಿಗರಿಗೆ ಅಂತಹ ಪ್ರಮುಖ ಖಾತೆಗಳು ದೊರೆತಿಲ್ಲ. ಶಿವಕುಮಾರ್ ಅವರಿಗೆ ಜಲಸಂಪನ್ಮೂಲ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉಸ್ತುವಾರಿ ದೊರೆತಿದ್ದು, ಉಳಿದ ಅವರ ಆಪ್ತರಿಗೆ ಕೃಷಿ, ತೋಟಗಾರಿಕೆ, ಗಣಿ, ಖನಿಜ, ಸಾರಿಗೆ, ಮುಜರಾಯಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕ್ರೀಡೆ, ಯುವಜನ ಸೇವೆ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇನ್ನಿತರ ಖಾತೆಗಳು ದೊರೆತಿವೆ ಸಂಪುಟದ 34 ಸದಸ್ಯರಿಗೂ ಖಾತೆ ಹಂಚಿಕೆ ಮಾಡಿದ ಶಿಫಾರಸ್ಸಿಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಸಿದ್ದರಾಮಯ್ಯ ಆಪ್ತರಾಗಿರುವ ಕೃಷ್ಣ ಬೈರೇಗೌಡರಿಗೆ ಕಂದಾಯ, ಕೆ.ಜೆ.ಜಾರ್ಜ್‌ಗೆ ಇಂಧನ, ಎಂ.ಬಿ. ಪಾಟೀಲ್‌ಗೆ ಬೃಹತ್ ಮತ್ತು ಕೈಗಾರಿಕೆ, ಜಮೀರ್ ಅಹ್ಮದ್‌ಗೆ ವಸತಿ, ಸತೀಶ್ ಜಾರಕಿಹೊಳಿಗೆ ಲೋಕೋಪಯೋಗಿ, ಭೈರತಿ ಸುರೇಶ್‌ಗೆ ನಗರಾಭಿವೃದ್ಧಿ ದೊರೆತಿದೆ. ▶ 8ನೇ ಪುಟಕ್ಕೆ

ನಾಳೆ ಶಾಲೆಗಳ ಪುನರಾರಂಭ: ಸರ್ಕಾರದಿಂದ ಮಾರ್ಗಸೂಚಿ

ಮೊದಲ ದಿನ ಸಿಹಿ ನೀಡಿ ಮಕ್ಕಳಿಗೆ ಸ್ವಾಗತ



ಬೆಂಗಳೂರು: ಬೇಸಿಗೆ ರಜೆ ಕಳೆದು ನೂತನ ಶೈಕ್ಷಣಿಕ ವರ್ಷ ಮೇ 31ರಂದು ಬುಧವಾರ ಆರಂಭವಾಗಲಿದೆ. ಈ ನಿಟ್ಟಿನಲ್ಲಿ ಸರ್ಕಾರ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ. ಪ್ರಾಥಮಿಕ ಮತ್ತು ಪ್ರೌಢಶಾಲೆ ತರಗತಿಗಳ ಮೊದಲ ದಿನವೇ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ಜೊತೆಗೆ ಕಡ್ಡಾಯವಾಗಿ ಸಿಹಿ ತಿನಿಸು ನೀಡುವಂತೆ ಎಲ್ಲ ಸರ್ಕಾರಿ ಮತ್ತು ಅನುದಾನಿತ ಶಾಲಾ ಆಡಳಿತ ಮಂಡಳಿ ಗಳಿಗೆ ಸರ್ಕಾರ ಸೂಚನೆ ನೀಡಿದೆ.

ಶಾಲೆಯ ಮೊದಲ ದಿನ, ತರಗತಿಯ ಕೊಠಡಿಗಳು, ಅಡುಗೆ ಪಾತ್ರೆಗಳು, ಆಹಾರ ಧಾನ್ಯಗಳು ಮತ್ತು ನೀರಿನ ಸಂಪ್‌ಗಳು ಸೇರಿದಂತೆ ಶಾಲೆ ಆವರಣವನ್ನು ಸ್ವಚ್ಛಗೊಳಿಸಲು ಮತ್ತು ಅನಗತ್ಯ ವಸ್ತುಗಳನ್ನು ವಿಲೇವಾರಿ ಮಾಡಲು ಶಾಲೆಗಳಿಗೆ ನಿರ್ದೇಶನ ನೀಡಲಾಗಿದೆ. ಪ್ರತಿ ತರಗತಿಗೆ ತಮ್ಮ ವೇಳಾಪಟ್ಟಿಯನ್ನು ▶ 8ನೇ ಪುಟಕ್ಕೆ

ಚೆನ್ನೈ ಐಪಿಎಲ್ ಚಾಂಪಿಯನ್



ಅಹಮದಾಬಾದ್, ಮೇ 29 (ಸಿಎನ್) – ಪ್ರಸಕ್ತ ಸಾಲಿನ ಇಂಡಿಯನ್ ಪ್ರೀಮಿಯರ್ ಲೀಗ್ ಟಿ–20 ಕ್ರಿಕೆಟ್ ಪಂದ್ಯಾವಳಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಚಾಂಪಿಯನ್ ಪಟ್ಟ ಗಿಟ್ಟಿಸಿದೆ. ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಗುಜರಾತ್ ಟೈಟನ್ಸ್ ವಿರುದ್ಧ ರೋಚಕ ಗೆಲುವು ಸಾಧಿಸಿ ಐದನೇ ಬಾರಿಗೆ ಚಾಂಪಿಯನ್ ಪಟ್ಟ ದಕ್ಕಿಸಿಕೊಂಡಿತು. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಗುಜರಾತ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 214 ರನ್ ಗಳಿಸಿತು. ಮಳೆ ಅಡ್ಡಿ ಹಿನ್ನೆಲೆಯಲ್ಲಿ ಚೆನ್ನೈ ಡಕ್‌ವರ್ಥ್ ನಿಯಮದ ಪ್ರಕಾರ 15 ಓವರುಗಳಲ್ಲಿ 171 ರನ್ ಗಳಿಸಿ 2023 ನೇ ಸಾಲಿನ ಐಪಿಎಲ್ ಕಿರೀಟ ತನ್ನದಾಗಿಸಿಕೊಂಡಿತು.

ಕೊನೆಯ ಎರಡು ಎಸೆತದಲ್ಲಿ ರವೀಂದ್ರ ಜಡೇಜಾ ಒಂದು ಸಿಕ್ಸರ್ ಹಾಗೂ 1 ಬೌಂಡರಿ ಗಳಿಸಿ ಚೆನ್ನೈ ತಂಡಕ್ಕೆ ಗೆಲುವು ದಕ್ಕಿಸಿಕೊಟ್ಟರು.


ಜೂ.1ರಂದು ಐದು ಗ್ಯಾರಂಟಿ ಜಾರಿಗೆ ಸಿದ್ದರಾಮಯ್ಯ ಸರ್ಕಾರ ನಿರ್ಧಾರ

ಇಡೀ ದಿನ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚೆ ಸಮಾಲೋಚನೆ; ಪರಿಸ್ಥಿತಿ ಪರಿಶೀಲನೆ

ಬೆಂಗಳೂರು,ಮೇ 29(ಕೆಎಂಶಿ)– ವಿಧಾನಸಭಾ ಚುನಾವಣೆಗೂ ಮುನ್ನ ರಾಜ್ಯದ ಜನತೆಗೆ ನೀಡಿದ್ದ ಗ್ಯಾರಂಟಿಗಳನ್ನು ಜೂನ್ ಒಂದರಿಂದ ಅನುಷ್ಠಾನಗೊಳಿಸಲು ಕಾಂಗ್ರೆಸ್ ಸರ್ಕಾರ ಮುಂದಾಗಿದೆ.

ಪ್ರತಿ ಮನೆಗೆ 200 ಯುನಿಟ್ ವಿದ್ಯುತ್ ಉಚಿತ, ಬಿಪಿಎಲ್ ಪಡಿತರ ಚೀಟಿದಾರರಿಗೆ ಮಾಸಿಕ 10 ಕೆಜಿ ಅಕ್ಕಿ, ಮಹಿಳೆಯರಿಗೆ ಸರ್ಕಾರಿ ಸಾಮಾನ್ಯ ಬಸ್ಸುಗಳಲ್ಲಿ ಉಚಿತ ಪ್ರಯಾಣ, ಮನೆ ಒಡತಿಗೆ ಮಾಸಿಕ 2000 ರೂ. ಡಿಪ್ಲೊಮಾ ಮತ್ತು ಪದವೀಧರ ನಿರುದ್ಯೋಗಿಗಳಿಗೆ ಕ್ರಮವಾಗಿ ಮಾಸಿಕ ತಲಾ 1500 ಹಾಗೂ 3000 ರೂ. ಭತ್ಯೆ ನೀಡುವ ಸಂಬಂಧ ಜೂನ್ ಒಂದರಂದು ನಡೆಯುವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುತ್ತದೆ.

ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪೂರ್ಣ ಪ್ರಮಾಣದಲ್ಲಿ ಮಂತ್ರಿಮಂಡಲ ರಚಿಸಿ, ಸಚಿವರಿಗೆ ಖಾತೆ ಹಂಚಿಕೆ ಮಾಡಿದ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾರಂಟಿ ಅನುಷ್ಠಾನಕ್ಕೆ ಚಾಲನೆ ನೀಡಿದ್ದಾರೆ. ಐದು ಗ್ಯಾರಂಟಿಗಳ ಅನುಷ್ಠಾನ ಸಂಬಂಧ ಮುಖ್ಯಮಂತ್ರಿ ಅವರು ಶಕ್ತಿ ಭವನದಲ್ಲಿ ಇಡೀ ದಿನ ಅಧಿಕಾರಿಗಳೊಂದಿಗೆ ಕಸರತ್ತು ನಡೆಸಿದರು. ಹಣಕಾಸು, ಸಾರಿಗೆ, ಆಹಾರ ಮತ್ತು ನಾಗರಿಕ ಪೂರೈಕೆ, ಯುವ ಸಬಲೀಕರಣ, ಇಂಧನ, ಕಂದಾಯ ಸೇರಿದಂತೆ ವಿವಿಧ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಜೊತೆ ಸಮಾಲೋಚನೆ ನಡೆಸಿದರು. ಜೂನ್ ಒಂದರಿಂದಲೇ ಗ್ಯಾರಂಟಿಗಳು ಅನುಷ್ಠಾನಗೊಳ್ಳಲೇಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿರುವ ಮುಖ್ಯಮಂತ್ರಿ, ಸಂಪುಟ ಸಭೆಗೆ ಬರುವ ಮುನ್ನ ಸಂಬಂಧಪಟ್ಟ ಇಲಾಖೆಯವರು ವರದಿ ನೀಡುವಂತೆ ಆದೇಶಿಸಿದ್ದಾರೆ.



ಯೋಜನೆ ಅನುಷ್ಠಾನಕ್ಕೆ ವಾರ್ಷಿಕ 50 ಸಾವಿರ ಕೋಟಿ ರೂ. ತಗಲುವ ಅಂದಾಜಿದ್ದು, ಇಷ್ಟು ಹಣ ವನ್ನು ವಿವಿಧ ಮೂಲಗಳಿಂದ ಕ್ರೋಢೀಕರಿಸಿ ನೀಡುವುದಾಗಿ ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸಂಪನ್ಮೂಲ ಕ್ರೋಢೀಕರಣ, ನಿರುಪಯುಕ್ತ ಯೋಜನೆಗಳ ಸ್ಥಗಿತಗೊಳಿಸುವುದು ಮತ್ತು ಯೋಜನಾ ಗಾತ್ರವನ್ನು ಇನ್ನು 15 ಸಾವಿರ ಕೋಟಿ ರೂ. ಹೆಚ್ಚಿಸಿ ಜುಲೈನಲ್ಲಿ ಬಜೆಟ್‌ನಲ್ಲಿ ಮಂಡಿಸುವುದಾಗಿಯೂ ಹೇಳಿದ್ದಾರೆ. ಅಲ್ಲದೆ ನಮ್ಮ ಯೋಜನೆಗಳು ಬಡ ಮತ್ತು ಮಧ್ಯಮ ವರ್ಗದವರ ಮನೆ ಬಾಗಿಲಿಗೆ ಮುಟ್ಟಬೇಕು ಎಂದಿದ್ದಾರೆ. ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 17 ದಿನ ಕಳೆದರೂ ಗ್ಯಾರಂಟಿಗಳನ್ನು ಅನುಷ್ಠಾನ ಮಾಡುತ್ತಿಲ್ಲ ಎಂದು ಬಿಜೆಪಿ ಮತ್ತು ಜೆಡಿಎಸ್ ತೀವ್ರ ಟೀಕಾ ಪ್ರಹಾರ ಮಾಡುತ್ತಿವೆ. ಗ್ಯಾರಂಟಿಗಳನ್ನು ತಕ್ಷಣವೇ ಅನುಷ್ಠಾನಗೊಳಿಸಿ ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನ ಗಳಿಸಲು ಪಣ ತೊಟ್ಟಿರುವ ಕಾಂಗ್ರೆಸ್, ಇವುಗಳನ್ನು ಚಾಚೂ ತಪ್ಪದೇ ಅನುಷ್ಠಾನಗೊಳಿಸಿ, ಮತ ಬೇಟೆಗೆ ಸಿದ್ಧವಾಗುತ್ತಿದೆ.

ಡಾ.ಅರವಿಂದ್ ಡಯಾಬಿಟಿಕ್ ಸೆಂಟರ್ ವತಿಯಿಂದ ರಾಷ್ಟ್ರೀಯ ಡಯಾಬಿಟಿಕ್ ಸಮ್ಮಿಟ್



ಬೆಂಗಳೂರು ಬಸವೇಶ್ವರನಗರದ ಡಾ.ಅರವಿಂದ್ ಡಯಾಬಿಟಿಕ್ ಸೆಂಟರ್ ವತಿಯಿಂದ ಏರ್ಪಡಿಸಿದ್ದ ರಾಷ್ಟ್ರೀಯ ಡಯಾಬಿಟಿಕ್ ಸಮ್ಮೇಳನದಲ್ಲಿ ದೆಹಲಿಯ ಖ್ಯಾತ ವೈದ್ಯ ಪದ್ಮಶ್ರೀ ಪುರಸ್ಕೃತ ಡಾ.ಅನೂಪ್ ಮಿಶ್ರ ಅವರನ್ನು ಅಭಿನಂದಿಸಲಾಯಿತು. ಚಿತ್ರದಲ್ಲಿ ಡಾ.ಜೆ.ಅರವಿಂದ್, ಹೈದರಾಬಾದ್‌ನ ಡಾ.ವಸಂತ್‌ಕುಮಾರ್, ಬೆಂಗಳೂರಿನ ಡಾ. ಅನಿಲ್‌ಕುಮಾರ್ ಅವರನ್ನು ಕಾಣಬಹುದು.

ಬೆಂಗಳೂರು: ಹಿತ ಮಿತ ಆಹಾರ ಸೇವನೆ, ನಿತ್ಯನಡಿಗೆ, ವ್ಯಾಯಾಮ ಹಾಗೂ ವೈದ್ಯರ ಸಲಹೆ ಇತರೆ ಮುಂಜಾಗ್ರತಾ ಕ್ರಮಗಳಿಂದ ಸಕ್ಕರೆ ಕಾಯಿಲೆ ಗಂಭೀರ ರೀತಿ ಹರಡದಂತೆ ತಡೆಯಲು ಸಾಧ್ಯ ಎಂದು ಖ್ಯಾತ ವೈದ್ಯ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ದೆಹಲಿಯ ಪ್ರೊ. ಅನೂಪ್ ಮಿಶ್ರ ಹೇಳಿದರು.

ಬೆಂಗಳೂರಿನ ಬಸವೇಶ್ವರನಗರದ ಡಾ.ಅರವಿಂದ್ ಡಯಾಬಿಟಿಕ್ ಸೆಂಟರ್ ವತಿಯಿಂದ ಮೇ 27, 28ರಂದು 2 ದಿನಗಳ ಕಾಲ ಹೋಟೆಲ್ ಕ್ಯಾಪಿಟಲ್‌ನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಡಯಾಬಿಟಿಕ್ ಸಮ್ಮೇಳನ ಉದ್ಘಾಟಿಸಿ, ಪ್ರೊ. ಮಿಶ್ರಾ ಮಾತನಾಡಿದರು.

ಸಕ್ಕರೆ ಕಾಯಿಲೆ ತಡೆಗಾಗಿ ದೇಶ ವಿದೇಶಗಳಲ್ಲಿ ಹೊಸ ಹೊಸ ಔಷಧ, ಅವಿಷ್ಕಾರಗಳು ನಡೆಯುತ್ತಿವೆ. ಮುಂಜಾಗ್ರತಾ ಕ್ರಮಗಳಿಂದ ಜನರು ಸುರಕ್ಷಿತವಾಗಿರಬಹುದು. ಈ ವಿಷಯದಲ್ಲಿ ಯಾವುದೇ ಗಾಬರಿಯಾಗುವಂತಿಲ್ಲ ಎಂದು ಅವರು ಸಲಹೆ ನೀಡಿದರು. ದೇಶದ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 80 ಡಯಾಬಿಟಿಸ್ ತಜ್ಞ ವೈದ್ಯರ ಪೈಕಿ ಅವದೇಶ್‌ಕುಮಾರ್ ಸಿಂಗ್ (ಕೊಲ್ಕತ್ತ), ಡಾ.ಜ್ಯೋತಿದೇವ್ (ತ್ರಿವೆಂಡ್ರಮ್), ಡಾ.ವಸಂತಕುಮಾರ್ (ಹೈದರಾಬಾದ್), ಡಾ.ಅರವಿಂದ ಗುಪ್ತ (ಜೈಪುರ), ಪ್ರೊ. ಬಸವನಗೌಡ (ಮೈಸೂರು), ಪದ್ಮಶ್ರೀ ಡಾ.ವಿ.ಮೋಹನ್ (ಚೆನ್ನೈ), ಡಾ.ಅನಿಲ್ ಕುಮಾರ್ (ಬೆಂಗಳೂರು) ಸಮ್ಮೇಳನದಲ್ಲಿ ಭಾಗವಹಿಸಿದವರಲ್ಲಿ ಪ್ರಮುಖರು.

ಕೊರೊನಾ ಕಾರಣದಿಂದ ಕಳೆದ ಮೂರು ವರ್ಷಗಳಿಂದ ಡಯಾಬಿಟಿಸ್ ಸಂಬಂಧ ಸಮ್ಮೇಳನ ನಡೆಸಲಾಗಿರಲಿಲ್ಲ. ಡಾ॥ ಅರವಿಂದ್ ಡಯಾಬಿಟಿಸ್ ಸೆಂಟರ್ ಇನ್ನು ಮುಂದೆ ಪ್ರತಿವರ್ಷ ಸಮ್ಮೇಳನ ನಡೆಸಲಿದೆ ಎಂದು ಆಸ್ಪತ್ರೆಯ ಮ್ಯಾನೇಜಿಂಗ್ ಡೈರೆಕ್ಟರ್ ಡಾ.ಅರವಿಂದ್ ಸ್ಪಷ್ಟಪಡಿಸಿದರು.

ಸಿಲಿಕಾನ್ ಸಿಟಿ ಎಂದೇ ಪ್ರಸಿದ್ಧವಾಗಿದ್ದ ಬೆಂಗಳೂರು ಈಗ ಆರೋಗ್ಯಕ್ಕೆ ಕಾಮಧೇನು (ಹೆಲ್ತ್ ಸಿಟಿ) ಆಗಿ ದೇಶ ವಿದೇಶಗಳ ರೋಗಿಗಳಿಗೂ ಚಿಕಿತ್ಸೆ ನೀಡುತ್ತಿದೆ. ಇದು ಬೆಂಗಳೂರು ಹಾಗೂ ಭಾರತ ದೇಶದ ಹೆಮ್ಮೆ ಎಂದು ಡಾ.ಅರವಿಂದ್ ಹೇಳಿದರು. 2 ದಿನಗಳ ಸಮ್ಮೇಳನದಲ್ಲಿ ಸುಮಾರು 500 ವೈದ್ಯಪ್ರತಿನಿಧಿಗಳು ಭಾಗವಹಿಸಿದ್ದರು.

ವಿಶ್ವ ಪುಸ್ತಕ ದಿನ, ಬಸವ ಜಯಂತಿ ಆಚರಣೆ

ಮೈಸೂರು, ಮೇ 29– ಸಾರ್ವಜನಿಕ ಗ್ರಂಥಾಲಯ ಇಲಾಖೆ, ನಗರ ಕೇಂದ್ರ ಗ್ರಂಥಾಲಯ ಕೆ.ಎಸ್.ಆರ್.ಪಿ ಶಾಖೆ ಜಾಕಿಕ್ವಾಟ್ರರ್ಸ್ ವತಿಯಿಂದ ವಿಶ್ವ ಪುಸ್ತಕ ದಿನ ಹಾಗೂ ಬಸವ ಜಯಂತಿ ಆಚರಿಸಲಾಯಿತು.



ಈ ವೇಳೆ ಕನ್ನಡ ಉಪನ್ಯಾಸಕ ಪರಮೇಶ ಕೆ.ಉತ್ತನಹಳ್ಳಿ ಮಾತನಾಡಿ, ಆಧುನಿಕ ಮಾಧ್ಯಮಗಳ ಭರಾಟೆಯಲ್ಲಿ ಓದುಗಾರಿಕೆ ಹೇಗೆ ಕಳೆಗುಂದುತ್ತಿದೆ ಹಾಗೂ ಪುಸ್ತಕಗಳ ಮಹತ್ವವನ್ನು ಅಂತೆಯೇ ಪ್ರಸ್ತುತ ಸಮಾಜಕ್ಕೆ ಬಸವಣ್ಣನವರ ಕ್ರಾಂತಿಕಾರಕ ವಿಚಾರಗಳು ಎಷ್ಟು ಅಗತ್ಯವಾಗಿದೆ ಎಂಬುದನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಗ್ರಂಥಾಲಯದ ಗ್ರಂಥಪಾಲಕರು ಹಾಗೂ ಓದುಗ ಸಹೃದಯರು ಭಾಗವಹಿಸಿದ್ದರು.

ಎಂಎಂಕೆ–ಎಸ್‌ಡಿಎಂನಲ್ಲಿ ರಕ್ತದಾನ ಶಿಬಿರ



ಮೈಸೂರು, ಮೇ 29– ಮೈಸೂರಿನ ಎಂಎಂಕೆ ಮತ್ತು ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ ವೈ.ಆರ್.ಸಿ ರೇಂಜರ್ಸ್ ಘಟಕಗಳು ಮತ್ತು ಲಯನ್ಸ್ ಜೀವಧಾರ ಬ್ಲಡ್ ಬ್ಯಾಂಕ್ ಸಹಯೋಗದೊಂದಿಗೆ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸಾಯಿನಾಥ ಮಲ್ಲಿಗೆಮಾಡು ಅವರು ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಇತರರ ಜೀವ ಉಳಿಸಲು ರಕ್ತದಾನವು ಮುಖ್ಯವಾದುದು ಅಷ್ಟೇ ಅಲ್ಲ ಶ್ರೇಷ್ಠದಾನವಾಗಿದೆ. ಪ್ರತಿಯೊಬ್ಬರು ತಮ್ಮ ಜನ್ಮದಿನಾ ಚರಣೆಯ ಶುಭದಿನದಂದು ರಕ್ತದಾನದ ಸತ್ಕಾರ್ಯದಲ್ಲಿ ತೊಡಗಿಸಿಕೊಳ್ಳುವ ನಿರ್ಧಾರವನ್ನು ಮಾಡಬೇಕೆಂದು ಕರೆ ನೀಡಿದರು.

ಒಂದು ಬಾರಿ ರಕ್ತದಾನದಿಂದ ಮೂರು ಜೀವ ಉಳಿಸಲು ಸಾಧ್ಯವಾಗುತ್ತದೆ. ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಪ್ರತಿ ವರ್ಷವೂ ಜೀವಧಾರ ಬ್ಲಡ್ ಬ್ಯಾಂಕ್ ಸಹಯೋಗದಲ್ಲಿ ರಕ್ತದಾನ ಶಿಬಿರ ಮಾಡುತ್ತಿದ್ದು, ಕಳೆದ ಪ್ರತಿವರ್ಷವೂ ನೂರಕ್ಕೂ ಅಧಿಕ ವಿದ್ಯಾರ್ಥಿನಿಯರು ರಕ್ತದಾನ ಮಾಡುವುದರೊಂದಿಗೆ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದು ಸಂಸ್ಥೆಯ ಅಧ್ಯಕ್ಷರಾದ ಡಾ.ವೀರೇಂದ್ರ ಹೆಗ್ಗಡೆ ಅವರ 75ನೇ ವರ್ಷಾಚರಣೆ ಸಂಧರ್ಭದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ ಎಂದರು.

ಜೀವಧಾರ ಬ್ಲಡ್ ಬ್ಯಾಂಕ್ ಮುಖ್ಯಸ್ಥ ಗಿರೀಶ್ ಮಾತನಾಡಿ, ಮೈಸೂರು ನಗರದಲ್ಲಿ ದಿನ ನಿತ್ಯವೂ ರಕ್ತದ ಅನಿವಾರ್ಯತೆ ಹೆಚ್ಚಾಗುತ್ತಿದೆ. ನಗರದ ಮತ್ತು ಜಿಲ್ಲೆಯಾದ್ಯಂತ ರಕ್ತದಾನ ಶಿಬಿರವನ್ನು ಆಯೋಜಿಸುತ್ತಿದ್ದು ಎಸ್.ಡಿ.ಎಂ.ಕಾಲೇಜು ವರ್ಷದಲ್ಲಿ 2 ಬಾರಿ ಶಿಬಿರವನ್ನು ಆಯೋಜಿಸುವ ಮೊದಲ ಮಹಿಳಾ ಕಾಲೇಜಾಗಿದ್ದು ಇತರ ಕಾಲೇಜುಗಳಿಗೆ ಮಾದರಿಯಾಗಿದೆ ಎಂದರು. ಶಿಬಿರದಲ್ಲಿ 45 ವಿದ್ಯಾರ್ಥಿನಿಯರು ರಕ್ತದಾನ ಮಾಡಿದರು. ವೈದ್ಯಾಧಿಕಾರಿ ಡಾ.ಕೃತಿಕಾ, ಕಾಲೇಜಿನ ಐಕ್ಯೂಎಸಿ ಘಟಕದ ಸಂಚಾಲಕರಾದ ಪ್ರೊ.ಕೆ.ಎಸ್. ಸುಕೃತ ವೈಆರ್‌ಸಿ ಘಟಕದ ಪ್ರೊ.ಶಿವಬೀರಪ್ಪ ರೇಂಜರ್ಸ್ ಘಟಕದ ಮಾಲತಿ ಇನ್ನಿತರರು ಉಪಸ್ಥಿತರಿದ್ದರು.

ಹೋಟೆಲ್ ಕಾಂಪೌಂಡ್ ಗ್ರಿಲ್‌ಗೆ ಬೈಕ್ ಡಿಕ್ಕಿ ಯುವಕ ಸಾವು; ಇಬ್ಬರಿಗೆ ತೀವ್ರ ಗಾಯ

ಮೈಸೂರು, ಮೇ 29 (ಆರ್‌ಕೆ)– ಬೈಕೊಂದು ಹೋಟೆಲ್ ಕಾಂಪೌಂಡ್ ಗ್ರಿಲ್‌ಗೆ ಅಪ್ಪಳಿಸಿದ ಪರಿಣಾಮ ಯುವಕ ನೋರ್ವ ಸಾವನ್ನಪ್ಪಿದ್ದು, ಮತ್ತಿಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ಮೈಸೂರಿನ ಎಂ.ಜಿ. ರಸ್ತೆಯಲ್ಲಿ ಕಳೆದ ರಾತ್ರಿ ಸಂಭವಿಸಿದೆ.

ಮೈಸೂರಿನ ರಿಷಿಕೇಶ್ (22) ಸಾವನ್ನಪ್ಪಿದವನಾಗಿದ್ದು, ಗಾಯಗೊಂಡಿರುವ ಗಣೇಶ ಮತ್ತು ರಾಕೇಶ್‌ನನ್ನು ಜೆಎಸ್‌ಎಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಕಡೆಯಿಂದ ಬರುತ್ತಿದ್ದ ಕೆಟಿಎಂ ಡ್ಯೂಕ್ (ಕೆಎ–6, ಹೆಚ್‌ಎಂ 7567) ಬೈಕ್ ಎಂ.ಜಿ. ರಸ್ತೆಯ ರ್‍ಯಾಡಿಸನ್ ಹೋಟೆಲ್ ಕಾಂಪೌಂಡಿನ ಕಬ್ಬಿಣದ ಗ್ರಿಲ್‌ಗೆ ಮಧ್ಯರಾತ್ರಿ ಡಿಕ್ಕಿ ಹೊಡೆದಿದೆ.

ಬೈಕ್ ಅಪ್ಪಳಿಸಿದ ರಭಸಕ್ಕೆ ಅದರ ಮೂವರು ಸವಾರರು ಎಂ.ಜಿ.ರಸ್ತೆಗೆ ಬಿಸಾಡಲ್ಪಟ್ಟಿದ್ದಾರೆ. ಪರಿಣಾಮ ತಲೆಗೆ ತೀವ್ರ ಸ್ವರೂಪದ ಗಾಯಗಳಾಗಿ ರಿಷಿಕೇಶ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದು, ತೀವ್ರವಾಗಿ ಗಾಯಗೊಂಡ ಗಣೇಶ ಮತ್ತು ರಾಕೇಶ್‌ನನ್ನು ಜೆಎಸ್‌ಎಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಸ್ಥಳಕ್ಕೆ ಧಾವಿಸಿದ ಸಿದ್ದಾರ್ಥ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಯೋಗೇಶ್ ಹಾಗೂ ಸಿಬ್ಬಂದಿ, ಮಹಜರು ನಡೆಸಿ ಹೋಟೆಲ್ ಕ್ಯಾಮರಾ ಫುಟೇಜಸ್‌ಗಳನ್ನು ಪರಿಶೀಲಿಸಿದಾಗ ಅತೀ ವೇಗವಾಗಿ ಬಂದ ಬೈಕ್ ಸವಾರನ ನಿಯಂತ್ರಣ ತಪ್ಪಿ ಕಾಂಪೌಂಡ್ ಮೂಲೆಯ ಕಬ್ಬಿಣದ ಗ್ರಿಲ್‌ಗೆ ಅಪ್ಪಳಿಸಿದೆ ಎಂಬುದು ತಿಳಿದುಬಂದಿದೆ.

ಪ್ರಕರಣ ದಾಖಲಿಸಿಕೊಂಡಿರುವ ಸಿದ್ದಾರ್ಥ ಸಂಚಾರ ಠಾಣೆ ಪೊಲೀಸರು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ರಿಷಿಕೇಶ್ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಿದರು.

ಉನ್ನತ ಶಿಕ್ಷಣ, ಸಂಶೋಧನೆಯ ಪರಾಮರ್ಶೆಯಾಗಬೇಕು

ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕ್‌ನಾಥ ಅಭಿಮತ

ಮೈಸೂರು, ಮೇ 29(ಆರ್‌ಕೆ)– ನಮ್ಮ ದೇಶದ ಉನ್ನತ ಶಿಕ್ಷಣ ಮತ್ತು ಸಂಶೋಧನೆ ಸ್ಥಿತಿಯ ಪರಾಮರ್ಶೆಯಾಗಬೇಕಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕ್‌ನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಹಾಗೂ ಪ್ರೊ.ಮಲ್ಲಿನಾಥ್ ಕಂಬಾರ ಅಭಿನಂದನಾ ಸಮಿತಿ ವತಿಯಿಂದ ವಿಜ್ಞಾನ ಭವನದಲ್ಲಿ ಸೋಮವಾರ ಆಯೋಜಿಸಿದ್ದ 'ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದ ಭೂತ, ವರ್ತಮಾನ ಮತ್ತು ಭವಿಷ್ಯತ್ ಸಂಶೋಧನೆ ಕುರಿತ ರಾಷ್ಟ್ರೀಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.





ನಮ್ಮ ದೇಶವು ಹಿಂದಿನಿಂದಲೂ ಹೆಚ್ಚು ಶಿಕ್ಷಣ ಮತ್ತು ಜ್ಞಾನಕ್ಕೆ ಇಲ್ಲಿನ ಭೌತಿಕ ತಳಹದಿ ರೂಪಿಸುವಲ್ಲಿ ಶಿಕ್ಷಣ ಸಂಸ್ಥೆಗಳು ಹಾಗೂ ವಿಶ್ವವಿದ್ಯಾನಿಲಯಗಳು ಶ್ರಮಿಸುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ಉನ್ನತ ಶಿಕ್ಷಣವು ಹೆಚ್ಚು ಸಕ್ರಿಯವಾಗಿದೆಯಾದರೂ ಅಧ್ಯಯನ ಮತ್ತು ಸಂಶೋಧನೆ ಸ್ಥಿತಿ ಬಗ್ಗೆ ಚರ್ಚೆಗಳಾಗಬೇಕು ಎಂದರು.

ಜ್ಞಾನ ಸೃಷ್ಟಿ, ಪ್ರಸರಣ ಹಾಗೂ ಹೊಸತನ್ನು ಹುಟ್ಟು ಹಾಕುವ ಸೃಜನಶೀಲ ಸಾಮರ್ಥ್ಯವನ್ನು ನಮ್ಮ ವಿಶ್ವವಿದ್ಯಾನಿಲಯಗಳು ಸಕ್ರಿಯವಾಗಿವೆಯಲ್ಲದೆ, ಉನ್ನತ ಶಿಕ್ಷಣದ ಸವಾಲುಗಳನ್ನು ನಿಭಾಯಿಸಲು ಸನ್ನದ್ಧವಾಗಿದೆ. ಈ ಸಂದರ್ಭದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರವು ಸದೃಢವಾಗಬೇಕು ಹಾಗೂ ಜ್ಞಾನದ ಪಾಲಕನಾಗಿ, ಜ್ಞಾನಭಂಡಾರಗಳಾಗಿ ಕಾರ್ಯನಿರ್ವಹಿಸಬೇಕಿದೆ ಎಂದು ಪ್ರೊ.ಲೋಕ್‌ನಾಥ್ ನುಡಿದರು. ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ ಟಿ.ಡಿ.ಕೆಂಪರಾಜು, ನಿವೃತ್ತ ಪ್ರಾಧ್ಯಾಪಕ ಪ್ರೊ.ಬಿ.ರಮೇಶ್‌ಬಾಬು, ಪ್ರೊ.ಎನ್.ಎಸ್. ಹರಿನಾರಾಯಣ ಇತರರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಹಲವು ವಿವಿಗಳ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕರು ಭಾಗವಹಿಸಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ–ಲಲಿತಾ ಜಿ.ಟಿ.ದೇವೇಗೌಡರ ವಿವಾಹ ವಾರ್ಷಿಕೋತ್ಸವದ ಹಿನ್ನೆಲೆ ಹಾಗೂ ಹುಣಸೂರು ನೂತನ ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಕಾಮನಕೆರೆ ಹುಂಡಿಯ ರಾಮಚಂದ್ರ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಪುರುಷೋತ್ತಮ್, ಎಪಿಎಂಎಸ್ ನಿರ್ದೇಶಕ ಪುರುಷೋತ್ತಮ್, ಎಪಿಎಂಎಸ್ ನಿರ್ದೇಶಕರಾದ ಎಚ್.ಪ್ರಕಾಶ್, ದೇವರಾಜು, ಮಾದೇವಣ್ಣ, ರಮೇಶ್, ಜನಾರ್ಧನ್‌ಮೂರ್ತಿ, ರಮೇಶ್, ನಾಗೇಶ್, ನಾಗರಾಜು, ಮಾದೇವಸ್ವಾಮಿ, ಮಂಜು, ಮೋಹನ್ ಹಾಜರಿದ್ದರು.

ರಾಷ್ಟ್ರದ ಸಂಪನ್ಮೂಲ ಎಲ್ಲಾ ವರ್ಗಕ್ಕೂ ಸರಿಸಮಾನ ಹಂಚಿಕೆಗೆ ಒತ್ತಾಯ

ಮೈಸೂರು,ಮೇ 29(ಪಿಎಂ)– ರಾಷ್ಟ್ರದ ಸಂಪನ್ಮೂಲವು ದೇಶದ ಎಲ್ಲಾ ವರ್ಗದ ಜನತೆಗೂ ಸರಿ ಸಮಾನವಾಗಿ ತಲಾವಾರು ಹಂಚಿಕೆಯಾಗುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯಗಳು ರೂಪುರೇಷೆ ಸಿದ್ಧಪಡಿಸಿ, ಅನುಷ್ಠಾನಗೊಳಿಸಬೇಕು ಎಂದು ಮಾಜಿ ಶಿಕ್ಷಕ ಕೆ.ಸೋಮಶೇಖರ್ ಮನವಿ ಮಾಡಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಲ್ಲಾ ವರ್ಗಗಳ ಶ್ರೇಯೋಭಿವೃದ್ಧಿಗೆ ಪೂರಕವಾಗಿ ಆರ್ಥಿಕ ಮೀಸಲಾತಿ ಜಾರಿಗೆ ತರಬೇಕು. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿಯಾಗುವ ಹುದ್ದೆಗಳನ್ನು ಸರ್ಕಾರದಿಂದಲೇ ನೇರ ನೇಮಕಾತಿ ಮಾಡಬೇಕೆಂದು ಕೋರಿದರು.

ಜೂ.1ರಂದು ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮೇ 29– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜೂ.1ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ.0821–4259259 ಸಂಪರ್ಕಿಸಬಹುದು.



ಭಾರತೀಯ ಜೀವ ವಿಮಾ ನಿಗಮ, ಶಾರದಾದೇವಿನಗರ ಶಾಖೆಯಲ್ಲಿ ಕಳೆದ 3 ವರ್ಷಗಳಿಂದ ಶಾಖಾಧಿಕಾರಿಯಾಗಿ ಸೇವೆ ಸಲ್ಲಿಸಿ, ಮೈಸೂರಿನ ವಿಭಾಗ ಕಚೇರಿಯ ಮೈಕ್ರೋ ಇನ್ಶೂರೆನ್ಸ್ ಮುಖ್ಯಸ್ಥರಾಗಿ ವರ್ಗಾವಣೆಗೊಂಡ ಕೆ.ಎನ್.ಕಾಂತರಾಜಪ್ಪ ಅವರನ್ನು ಶಾಖೆ ವತಿಯಿಂದ ಆತ್ಮೀಯವಾಗಿ ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ ನಿವೃತ್ತ ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಹಾಗೂ ಶಾಖೆ ಸಿಬ್ಬಂದಿ ವರ್ಗ ಹಾಜರಿದ್ದರು.

ಡಿಇಎಲ್‌ಇಡಿ ದಾಖಲಾತಿ ಪ್ರಾರಂಭ

ಮೈಸೂರು,ಮೇ 29– 2022–23ನೇ ಸಾಲಿನ ಡಿಇಎಲ್‌ಇಡಿ ದಾಖಲಾತಿ ಪ್ರಕ್ರಿಯೆಯು ಪ್ರಾರಂಭಗೊಂಡಿದ್ದು, ಜೂ.26 ಕಡೇ ದಿನ. ಕನ್ನಡ ಮತ್ತು ಇಂಗ್ಲಿಷ್ ಎರಡು ಮಾಧ್ಯಮದಲ್ಲಿಯೂ ವ್ಯಾಸಂಗ ಮಾಡಬಹುದು. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಾಮಾನ್ಯ ಹಾಗೂ ಇತರ ಅಭ್ಯರ್ಥಿಗಳು ಶೇ.50ರಷ್ಟು ಹಾಗೂ ಪ.ಜಾ, ಪ.ವರ್ಗ ವಿದ್ಯಾರ್ಥಿಗಳು ಶೇ.45ರಷ್ಟು ಅಂಕಗಳನ್ನು ಗಳಿಸಿರಬೇಕು. ಸಾಮಾನ್ಯ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ 150 ರೂ. ಹಾಗೂ ಪ.ಜಾತಿ, ಪ.ವರ್ಗ ವಿದ್ಯಾರ್ಥಿಗಳಿಗೆ ಅರ್ಜಿ ಶುಲ್ಕ 50 ರೂ., ಸಾಮಾನ್ಯ ಹಾಗೂ ಇತರೆ ವರ್ಗದವರಿಗೆ ದಾಖಲಾತಿ ಶುಲ್ಕ 3015 ರೂ. ಹಾಗೂ ಪ.ಜಾತಿ, ಪ.ವರ್ಗ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರತಿ ವರ್ಷವೂ ಸರ್ಕಾರದ ವತಿಯಿಂದ ಪ್ರೋತ್ಸಾಹ ಧನ 25,000 ರೂ. ದೊರೆಯುತ್ತದೆ.

ಆಸಕ್ತ ಅಭ್ಯರ್ಥಿಗಳು ಸರ್ಕಾರಿ ಮಹಾರಾಣಿ ಮಹಿಳಾ ಶಿಕ್ಷಣ ಸಂಸ್ಥೆ ಪ್ರಾಂಶುಪಾಲ ನಂಜುಂಡಸ್ವಾಮಿ ಬಿ.ವಿ ಅವರ ಮೊ.ಸಂ. 9448611655, 8618979390 ಹಾಗೂ 9379967612 ಅನ್ನು ಸಂಪರ್ಕಿಸಬಹುದು.

ಅತಿಥಿ ಉಪನ್ಯಾಸಕ ಹುದ್ದೆಗೆ ಅರ್ಹರಿಂದ ಅರ್ಜಿ ಆಹ್ವಾನ

ಮೈಸೂರು,ಮೇ 29– 2023–24ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಪಿರಿಯಾಪಟ್ಟಣ ತಾಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಸಮಾಜ ವಿಜ್ಞಾನ, ಇಂಗ್ಲಿಷ್ ಮತ್ತು ದೈಹಿಕ ಶಿಕ್ಷಣ ಬೋಧನೆಗಾಗಿ ಅತಿಥಿ ಶಿಕ್ಷಕರಿಗಾಗಿ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಜೂ.5 ಕೊನೆಯ ದಿನವಾಗಿದೆ. ಆಸಕ್ತ ಬಿ.ಎ, ಬಿಎಡ್ ಅಥವಾ ಎಂ.ಎ, ಬಿ.ಎಡ್ ಅಭ್ಯರ್ಥಿಗಳು ಕಚೇರಿಗೆ ತಮ್ಮ ವಿವರದೊಂದಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ ದೂ.ಸಂ:0821–2422088, 8861356751 ಅಥವಾ 9611787204 ಅನ್ನು ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಟಿ.ಕೆ.ಲೇಔಟ್ ಅಭಿಮಾನಿಗಳು, ಆಟೋ ಸ್ಟ್ಯಾಂಡ್, ವಿವಿಧ ಸಂಘ ಸಂಸ್ಥೆಗಳು ಹಾಗೂ ಎಳನೀರು ವ್ಯಾಪಾರಿ ಜಯರಾಂ 650 ಎಳನೀರಿನಿಂದ ಸಿದ್ಧಪಡಿಸಿದ ಸುಮಾರು 20 ಅಡಿಯ ಎಳನೀರು ಹಾರವನ್ನು ಶಾಸಕ ಕೆ.ಹರೀಶ್‌ಗೌಡ ಅವರಿಗೆ ಕ್ರೇನ್ ಮೂಲಕ ಹಾಕಿ, ಅಭಿನಂದಿಸಿದರು. ಈ ವೇಳೆ ಪಾಲಿಕೆ ಸದಸ್ಯ ಗೋಪಿ, ಮಾಜಿ ಮೇಯರ್ ಚಿಕ್ಕಣ್ಣ, ಬೀರೇಗೌಡ, ಪರಮೇಶ್ ಇತರರು ಉಪಸ್ಥಿತರಿದ್ದರು.

ನೃತ್ಯ, ಸಂಗೀತ, ಚಿತ್ರಕಲೆ ಉಳಿವಿಗೆ ಮೈಸೂರು ರಾಜರ ಕೊಡುಗೆ ಅಪಾರ

ಶ್ರೀ ಕಪ್ಪಡಿ ಮಠದ ಮಠಾಧಿಪತಿ ಶ್ರೀ ವರ್ಚಸ್ವಿ ಸಿದ್ಧಲಿಂಗರಾಜೇ ಅರಸು ಅಭಿಮತ

ಮೈಸೂರು, ಮೇ 29(ಎಸ್‌ಪಿಎನ್)– ಮೈಸೂರು ಶೈಲಿಯ ನೃತ್ಯ, ಸಂಗೀತ, ಚಿತ್ರಕಲೆ ಸೇರಿದಂತೆ ಇತರೆ ಕಲಾ ಪ್ರಕಾರಗಳ ಉಳಿವಿಗೆ ಮೈಸೂರಿನ ರಾಜ–ಮಹಾರಾಜರ ಕೊಡುಗೆ ಅಪಾರ. ಈ ಪರಂಪರೆಯನ್ನು ಇಂದಿನ ಕಲಾವಿದರೂ ಉಳಿಸಲು ಶ್ರಮಿಸಬೇಕು ಎಂದು ಮಳವಳ್ಳಿ, ಹೊನ್ನಾಯಕಹಳ್ಳಿ ಹಾಗೂ ಕಪ್ಪಡಿ ಮಠದ ಮಠಾಧಿಪತಿ ವರ್ಚಸ್ವಿ ಸಿದ್ಧಲಿಂಗರಾಜೇ ಅರಸು ಇಂದಿಲ್ಲಿ ಅಭಿಪ್ರಾಯಪಟ್ಟರು.



> ಮೈಸೂರು ಸಂಸ್ಥಾನದ ಕಂಠೀರವ ನರಸಿಂಹರಾಜ ಒಡೆಯರ್ ಕಾಲದಿಂದಲೂ ಮೈಸೂರು ಶೈಲಿಯ ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರಕಿತು. ಅಲ್ಲದೆ, ದಕ್ಷಿಣ ಭಾರತದ ರಾಜ್ಯಗಳಲ್ಲಿ ಭರತನಾಟ್ಯ, ಚಿತ್ರಕಲೆ ಹಾಗೂ ಶಾಸ್ತ್ರೀಯ ಸಂಗೀತ ಸೇರಿದಂತೆ ಭಾರತೀಯ ಪರಂಪರೆ, ಸಂಸ್ಕೃತಿ ಉಳಿವಿಗೆ ಚೋಳರು, ಗಂಗರು, ರಾಷ್ಟ್ರಕೂಟರು, ಪಲ್ಲವರು ಹಾಗೂ ಮೈಸೂರು ಸಂಸ್ಥಾನದ ರಾಜರು ಸಹ ಪ್ರೋತ್ಸಾಹ ನೀಡಿದ್ದಾರೆ. –ಸಿದ್ದಲಿಂಗರಾಜೇ ಅರಸ್

ಕುವೆಂಪುನಗರದ ಗಾನ ಭಾರತೀಯ ರಮಾಗೋವಿಂದ ಕಲಾ ವೇದಿಕೆಯಲ್ಲಿ ಜೋಯಿಸ್ ಕಲಾ ಪ್ರತಿಷ್ಠಾನ ಸಾಂಸ್ಕೃತಿಕ ಟ್ರಸ್ಟ್‌ನ ವಾರ್ಷಿಕೋತ್ಸವ ಅಂಗವಾಗಿ ಕಲಾಂಕುರ ಶೀರ್ಷಿಕೆಯಡಿ ಆಯೋಜಿಸಿದ್ದ ನೃತ್ಯ ಪ್ರದರ್ಶನಕ್ಕೆ ಚಾಲನೆ ನೀಡಿ, ಮಾತನಾಡಿದರು.

ಮೈಸೂರು ಶೈಲಿಯ ಕಲೆಗಳಿಗೆ ಮೈಸೂರು ಸಂಸ್ಥಾನದ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮತ್ತಷ್ಟು ಬೆಂಬಲ ಸಿಕ್ಕಿತು. ತದನಂತರ 10ನೇ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್, ಜಯ ಚಾಮರಾಜ ಒಡೆಯರ್ ಕಾಲದಲ್ಲಿ ಇಲ್ಲಿನ ಕಲೆಗಳ ಪ್ರದರ್ಶನ ಉತ್ತುಂಗ ತಲುಪಿತು. ಅಂದಿನಿಂದ ಮೈಸೂರು ಸಾಂಸ್ಕೃತಿಕ ರಾಜಧಾನಿಯೆಂದೇ ದೇಶ್ಯಾದ್ಯಂತ ಪ್ರಸಿದ್ಧಿ ಪಡೆದಿದೆ. ಅಲ್ಲದೆ, ಒಂದು ಕಾಲಕ್ಕೆ ಬೆಂಗಳೂರು ಸಹ ಮೈಸೂರು ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿತ್ತು ಎನ್ನುವ ಸಂಗತಿ ಪ್ರಸ್ತುತ ಬೆಂಗಳೂರಿನಲ್ಲಿ ವಾಸಿಸುತ್ತಿರುವವರಿಗೆ ಗೊತ್ತಿಲ್ಲ. ಆದರೆ, ಮೈಸೂರಿಗರಿಗೆ ರಾಜಾಶ್ರಯದಲ್ಲಿ ಕಲೆಗಳಿಗೆ ಸಿಗುತ್ತಿದ್ದ ಮಹತ್ವ ಪರಿಚಯವಿದೆ ಎಂದು ತಿಳಿಸಿದರು.

ಈ ವೇಳೆ ವಿದ್ಯಾರ್ಥಿನಿಯರಾದ ಬಿ. ಪ್ರೇರಣಾ, ಕೆ.ತನ್ವಿತ, ಸಿ.ಕೀರ್ತನ, ಹೆಚ್.ವಿ. ನಯನ, ಜಿ.ನೈರಿತ, ಎಸ್.ದಿವ್ಯ, ಚರಿತ ಆಚಾರ್ಯ, ಧ್ವನಿ ಅರಸ್, ಸ್ವರ ಅರಸ್, ಎಸ್.ವಿಭಾ, ಬಿ.ಗಾನವಿ, ಎಸ್.ಮೇಘನಾ, ಎನ್.ಕಾವ್ಯ, ಕೆ.ನಕ್ಷ, ಡಿ.ವಿ.ವೇದಶ್ರೀ, ಬಿ.ರೌನಿಕ, ಎಸ್.ಸಂಪದ, ಎಸ್.ಶ್ರೀಯ, ಎಸ್.ಪಾವನಿ, ಅಂಜನಾ ಮಠಂ, ಎ.ಚಿನ್ಮಯಿ, ಎಸ್.ಎಸ್.ಶಿವಾನಿ, ಯು.ರಾಘವೀ, ಜೆ.ಎಚ್. ಖುಷಿ, ಎಂ.ಪೂರ್ವಿಕ, ಕಾಶ್ವಿ ಅರಸ್ ನೃತ್ಯ ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚುಗೆಗಳಿಸಿದರು.

ಹಿಮ್ಮೇಳನದಲ್ಲಿ ವಿದುಷಿ ನಮ್ರತಾ ಜೋಯಿಸ್(ನಟುವಾಂಗ), ವಿದುಷಿ ಶೃತಿ ರಂಜನಿ(ಹಾಡುಗಾರಿಕೆ), ವಿದ್ವಾನ್ ಎಂ.ಆರ್.ರಾಜೇಶ್(ಕೊಳಲು), ವಿದ್ವಾನ್ ದಾಸಪ್ಪ (ಮೃದಂಗ), ಡಾ.ಭುವನೇಶ್ವರಿ ನಿರೂಪಿಸಿದರು. ಈ ವೇಳೆ ಜಯ ಚಾಮರಾಜೇಂದ್ರ ಎಜುಕೇಷನಲ್ ಟ್ರಸ್ಟ್‌ನ ಉಪಾಧ್ಯಕ್ಷ ಎಂ.ಆರ್.ಭಾರತಿ ಶ್ರೀಧರರಾಜೇ ಅರಸು, ವಿದುಷಿ ರಂಜಿನಿ ಕೌಶಿಕ್, ಜೋಯಿಸ್ ಕಲಾ ಪ್ರತಿಷ್ಠಾನದ ಅಧ್ಯಕ್ಷ ಸತ್ಯನಾರಾಯಣ ಜೋಯಿಸ್, ವಿದುಷಿ ನಮ್ರತಾ ಜೋಯಿಸ್, ಕಾರ್ಯದರ್ಶಿ ಎಂ.ಸುಶೀಲ ಅರಸ್, ಕವಿತಾ ಅರಸ್, ಸುಬ್ರಮಣ್ಯ ರಾಜೇ ಅರಸ್, ಸಾಧನಾ ಜೋಯಿಸ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.5.2023 ಮಂಗಳವಾರ, ಮಳೆ ನಕ್ಷತ್ರ: ರೋಹಿಣಿ, 25.05.2023ರಿಂದ 07.06.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2023, ಸಿಲ್ಕ್, ಕಾಟನ್ ಮತ್ತು ಇತರ ಸೀರೆಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10.30ರಿಂದ ರಾತ್ರಿ 8.30ರವರೆಗೆ.

■ **ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ಮೈಸೂರು ಜಿಲ್ಲಾ ಸಮಿತಿ :** ಸಿಐಟಿಯು ಸ್ಥಾಪನೆ ದಿನ ಆಚರಣೆ, ಸ್ಥಳ: ಬುದ್ಧ ವಿಹಾರ, ಅಶೋಕ ವೃತ್ತ, ಬೆಳಗ್ಗೆ 10.30ಕ್ಕೆ.

■ **ಶ್ರೀ ಉತ್ತರಾದಿ ಮಠ–ರೋಗ ಮೋಚನಾ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಧನ್ವಂತರಿ ಪ್ರಾದುರ್ಭಾವೋತ್ಸವ, ಬೆಳಗ್ಗೆ 7 ಗಂಟೆಯಿಂದ ಶ್ರೀಮದ್ಭಾಗವತತಾತ್ಪರ್ಯಪಾಠದ ಮಂಗಳ ಹಾಗೂ ಗುರುವಂದನೆ, ಬೆಳಗ್ಗೆ 8.30 ರಿಂದ ಶ್ರೀಪಾದಂಗಳವರಿಂದ ಸಂಸ್ಥಾನ ಪೂಜೆ, ಬೆಳಗ್ಗೆ 10.30ಕ್ಕೆ ಶ್ರೀ ಧನ್ವಂತರಿ ದೇವರಿಗೆ ಕಲಶಾಭಿಷೇಕ ಹಾಗೂ ಮಧು ಅಭಿಷೇಕ ಮತ್ತು ವಿಶೇಷ ಪಂಚಾಮೃತ ಅಭಿಷೇಕ, ಬೆಳಗ್ಗೆ 11.30ಕ್ಕೆ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರಿಂದ ನೂತನ ಅಲಂಕೃತ ಗೋಡೆಯ ಲೋಕೇಶಾರ್ಪಣೆ, ಉಪಸ್ಥಿತರು : ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತೀರ್ಥಪ್ರಸಾದದೊಂದಿಗೆ ಕಾರ್ಯಕ್ರಮ ಸಮರ್ಪಣೆ, ಸ್ಥಳ: ಧನ್ವಂತರಿ ಸನ್ನಿಧಾನ, ಉತ್ತರಾದಿ ಮಠ, ಅಗ್ರಹಾರ.

■ **ಎಸ್. ಪ್ರಕಾಶ್ ಪ್ರಿಯಾದರ್ಶನ್ ಸ್ನೇಹ ಬಳಗ :** ಉಚಿತ ಕುರಿತ ಮರಿಗಳ ವಿತರಣಾ ಕಾರ್ಯಕ್ರಮ, ಸ್ಥಳ: ಆರಾಧ್ಯ ಮಹಾಸಭಾ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.45ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಸಂಗೀತ ಕಲಾನಿಧಿ ಮೈಸೂರು ವಾಸುದೇವಚಾರ್ಯ ಸಂಸ್ಮರಣಾ ಕಾರ್ಯಕ್ರಮ, ವಿದುಷಿ ವಾರಿಜಾಶ್ರೀ ವೇಣುಗೋಪಾಲ್ ಅವರಿಂದ ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ, ವಿದುಷಿ ಸಿಂಧು ಸುಚೇತನ್–ಪಿಟೀಲು, ವಿದ್ವಾನ್ ಬಿ.ಸಿ. ಮಂಜುನಾಥ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟ, ಸ್ಥಳ: ಸಂಗೀತ ಕಲಾನಿಧಿ ಕೆ.ವಾಸುದೇವಚಾರ್ಯ ಭವನ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ –ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ– ಪರಮೇಶ್ವರ ವಿ. ಭಟ್, 7.15ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್.ಎಸ್., 8.30 ಕರೆಗೊಂದು ಗೀತೆ, 10.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ. ನಿರ್ದೇಶನ ಹಾಗೂ ನಿರೂಪಣ ಸಾಹಿತ್ಯ– ಎಸ್. ಶಂಕರ್, ನಿರ್ಮಾಣ– ಗೀತಾ ರಮಾನಂದ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ರೂಪ ಮತ್ತು ದೀಪ, 12.45 ವನವಾಸಿಗಳ ಶಿಕ್ಷಣ, ಉದ್ಯೋಗ ಕುರಿತು ವನವಾಸಿ ಕಲ್ಯಾಣ ಸಂಸ್ಥೆಯ ಪುಟ್ಟಮ್ಮ ಅವರೊಂದಿಗೆ ಸಂದರ್ಶನ, 1.20 ಭಾವಗೀತೆಗಳು– ವೃಂದಗಾನ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಡಿ.ಬಾಲಕೃಷ್ಣ– ವೀಣಾ ವಾದನ, 4.00 ಕಥಾ ಕಾಲಕ್ಷೇಪ "ಲವ–ಕುಶ", ಪ್ರಸ್ತುತಿ– ವಿದ್ವಾನ್ ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಹೈನುಗಾರಿಕೆಯಲ್ಲಿ ಕಂಡ ಯಶಸ್ಸು ಕುರಿತು ಎ.ಪ್ರಭಾಕರ್ ಹಾಗೂ ಮಹಾಲಕ್ಷ್ಮಿ ಅವರೊಂದಿಗೆ ಮಾತುಕತೆ, 9.15 Regional version of Spot Light,, 9.30 ಡಾ. ಆರ್.ಎನ್. ಶ್ರೀಲತಾ–ಹಾಡುಗಾರಿಕೆ, 10.30 ಗಮಕ ವ್ಯಾಖ್ಯಾನ, ವಾಚನ– ಪದ್ಮಾ ಶ್ರೀವತ್ಸ್, ವ್ಯಾಖ್ಯಾನ– ಡಾ.ಎನ್.ಕೆ.ರಾಮಶೇಷನ್

■ **ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿ ವರ್ಗದವರ ಸಂಘ :** ಉದ್ಯೋಗಿಗಳ ದಿನಾಚರಣೆ ಮತ್ತು ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅವರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸನ್ಮಾನಿತರು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ಅತಿಥಿಗಳು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಕುಲಸಚಿವ ಪ್ರೊ. ಮಹದೇವನ್, ಹಣಕಾಸು ಅಧಿಕಾರಿ ಡಾ. ಸಂಗೀತ ಗಜಾನನ ಭಟ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಪಿ. ಮೆರವಣ್ಣ, ಸ್ಥಳ: ಕ್ರಾಫರ್ಡ್ ಭವನ, ಮಧ್ಯಾಹ್ನ 3ಕ್ಕೆ.

■ **ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ :** ವಾರ್ಷಿಕೋತ್ಸವ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ತುಮಕೂರು ವಿಶೇಷ ಭೂಸ್ವಾಧೀನಾಧಿಕಾರಿ, ಎ.ಇ. ರಘು, ಕರ್ನಾಟಕ ಸ್ಕೂಲ್ ಎಕ್ಸಾಮಿನೇಷನ್ ಅಂಡ್ ಅಸೆಸ್‌ಮೆಂಟ್ ಬೋರ್ಡ್ ಜಂಟಿ ನಿರ್ದೇಶಕ ಎಂ. ರೇವಣ್ಣಸಿದ್ದಪ್ಪ, ಪ್ರೊ. ಎಂ. ರಂಗಸ್ವಾಮಿ, ಡಾ. ಆರ್. ಸುಮ, ಅಧ್ಯಕ್ಷತೆ : ಪಾಲಿಟೆಕ್ನಿಕ್ ಪ್ರಿನ್ಸಿಪಾಲ್ ಬಿ. ಇಳಂಗೋವನ್, ಸ್ಥಳ: ಪಾಲಿಟೆಕ್ನಿಕ್ ಆವರಣ, ಜೆಎಸ್‌ಎಸ್ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಆವರಣ, ಸಂಜೆ 4.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಸನ್ನಿಧಾನ :** ಶ್ರೀ ರಾಘವೇಂದ್ರ ಸ್ವಾಮಿಗಳ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ ಜ್ಞಾನಸತ್ರ, ಪಂಡಿತ್ ಶ್ರೀ ರಘೋತ್ತಮಾಚಾರ್ಯ ನಾಗಸಂಪಿಗೆ, ಬಾಗಲಕೋಟೆ ಅವರಿಂದ ಶ್ರೀಮದ್ ರಾಮಾಯಣ ಪ್ರವಚನ, ಸ್ಥಳ: ತತ್ವಜ್ಞಾನ ಮಂದಿರ, ಮಠದ ಆವರಣ, ಸಂಜೆ 6ಕ್ಕೆ

ತಾಪಂ, ಜಿಪಂ ಚುನಾವಣೆ: 4 ವಾರ ಸಮಯ ಕೋರಿದ ಸರ್ಕಾರ



ಬೆಂಗಳೂರು: ಅವಧಿ ಪೂರ್ಣಗೊಂಡ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ನಿಗದಿತ ಸಮಯದಲ್ಲಿ ಚುನಾವಣೆ ನಡೆಸಲು ಅನುವು ಮಾಡಿಕೊಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್ ನಿರ್ದೇಶನ ಪಾಲಿಸಲು ರಾಜ್ಯ ಸರ್ಕಾರ 4 ವಾರಗಳ ಕಾಲಾವಕಾಶ ನೀಡುವಂತೆ ಮನವಿ ಮಾಡಿದೆ.

ಈ ಸಂಬಂಧ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ ಹಾಜರಾಗಿ, ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು ಸಂಬಂಧಿಸಿದ ಇಲಾಖೆಗಳ ಸಚಿವರು ಈಗಷ್ಟೇ ಅಧಿಕಾರ ವಹಿಸಿಕೊಂಡಿದ್ದಾರೆ. ಜಿಪಂ–ತಾಪಂ ಚುನಾವಣೆ, ಕ್ಷೇತ್ರ ಮರುವಿಂಗಡಣೆ ಮತ್ತು ಮೀಸಲಾತಿ ನಿಗದಿಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಆದೇಶದಲ್ಲಿನ ಅಂಶಗಳ ಬಗ್ಗೆ ಅಧ್ಯಯನ ನಡೆಸಬೇಕಿದೆ. ಹೀಗಾಗಿ, ಆದೇಶ ಪಾಲಿಸಲು 4 ವಾರಗಳ ಕಾಲಾವಕಾಶ ನೀಡಬೇಕು ಎಂದು ಮನವಿ ಮಾಡಿದರು.

ಈ ಮನವಿಗೆ ರಾಜ್ಯ ಚುನಾವಣಾ ಆಯೋಗದ ಪರ ಹಾಜರಿದ್ದ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಅವರೂ ಸಹಮತ ವ್ಯಕ್ತಪಡಿಸಿದರು. ಅಂತೆಯೇ, ಈ ಮನವಿಯನ್ನು ಪರಿಗಣಿಸಿದ ನ್ಯಾಯಪೀಠ, ವಿಚಾರಣೆಯನ್ನು ಜೂನ್ 28ಕ್ಕೆ ಮುಂದೂಡಿತು. ರಾಜ್ಯದಲ್ಲಿ ತಾ.ಪಂ–ಜಿ.ಪಂ ಚುನಾವಣೆ ನಡೆಸಲು ಸಮಯಾವಕಾಶ ಕೋರುತ್ತಲೇ ಬಂದಿದ್ದ ಈ ಹಿಂದಿನ ಸರ್ಕಾರಕ್ಕೆ ಹೈಕೋರ್ಟ್ ಚಾಟಿ ಬೀಸಿತ್ತು. ರೂ. 5 ಲಕ್ಷ ದಂಡವನ್ನೂ ವಿಧಿಸಿತ್ತು. ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ನಿಗದಿ ಪ್ರಕ್ರಿಯೆಯನ್ನು 2023ರ ಫೆಬ್ರವರಿ 1ರೊಳಗೆ ಮುಗಿಸಬೇಕು ಎಂದು ತಾಕೀತು ಮಾಡಿ 2022ರ ಡಿಸೆಂಬರ್ 14ರಂದು ಆದೇಶ ಹೊರಡಿಸಿತ್ತು. ಆದರೆ, ಪುನಃ ಕಾಲಾವಕಾಶ ಕೇಳಿದ್ದ ಅಂದಿನ ಸರ್ಕಾರ ಅಂತಿಮವಾಗಿ ಮಾರ್ಚ್ 1ರಂದು ಕ್ಷೇತ್ರ ಪುನರ್‌ವಿಂಗಡಣೆ ಅಧಿಸೂಚನೆ ಹೊರಡಿಸಿತ್ತು. ಏತನ್ಮಧ್ಯೆ, ವಿಧಾನಸಭೆ ಚುನಾವಣೆಗೆ ದಿನಾಂಕ ಘೋಷಣೆಯಾಗಿ ನೀತಿ ಸಂಹಿತೆ ಜಾರಿಗೆ ಬಂದ ಕಾರಣ ಮುಂದಿನ ಪ್ರಕ್ರಿಯೆ ನೆನೆಗುದಿಗೆ ಬಿದ್ದಿತ್ತು.



ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಸಮೀಪವಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಂನಲ್ಲಿ ವಿಶ್ವ ಹಸಿವು ಮುಕ್ತ ದಿನ ಆಚರಿಸಲಾಯಿತು. ಈ ವೇಳೆ ನಗರಪಾಲಿಕೆ ಸದಸ್ಯ ರಂಗಸ್ವಾಮಿ, ರೋಟರಿ ಹೆರಿಟೇಜ್ ಕ್ಲಬ್ ಸರಸ್ವತಿಪುರಂ ಕಾರ್ಯದರ್ಶಿ ಕೇಶವ ಬಿದ್ರೆ, ಜಂಟಿ ಕಾರ್ಯದರ್ಶಿ ರಾಜಣ್ಣ, ಶೋ ರೂಂ ಹೆಡ್ ಶರಫುದ್ದೀನ್ ಹಾಜರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 29– ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು 2022–23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಪತ್ರಕರ್ತರ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಕನಿಷ್ಠ ಶೇ. 80 ಅಂಕ ಗಳಿಸಿರಬೇಕು. ಅರ್ಜಿ ಸಲ್ಲಿಸಲು ಜೂ.8 ಕೊನೆಯ ದಿನ. ಅಭ್ಯರ್ಥಿಗಳು ಕೈಬರಹದ ಅರ್ಜಿಯೊಂದಿಗೆ 2 ಭಾವಚಿತ್ರ, ಅಂಕ ಪಟ್ಟಿ ನಕಲು ಪ್ರತಿ ನೀಡಬೇಕು. ಮಾಹಿತಿಗೆ ಮೊ. 9900557388 ಸಂಪರ್ಕಿಸಬಹುದು.

ಚಾಮರಾಜ ಕ್ಷೇತ್ರದ ಬಡವರಿಗೆ ಸೂರು ಕಲ್ಪಿಸುವುದು ನನ್ನ ಮೊದಲ ಆದ್ಯತೆ

–ಕೆ.ಹರೀಶ್‌ಗೌಡ, ಶಾಸಕ



ಕೆ.ಹರೀಶ್‌ಗೌಡ
ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ

> “ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದ ನನ್ನನ್ನು ಕ್ಷೇತ್ರದ ಮತದಾರರು ಗೆಲ್ಲಿಸಿದ್ದಾರೆ. ಹಲವರು ದೇವರಲ್ಲಿ ಹರಕೆ ಕಟ್ಟಿ ನನ್ನ ಗೆಲುವಿಗೆ ಪ್ರಾರ್ಥನೆ ಸಲ್ಲಿಸಿದ್ದಾರೆ. ಸಾವಿರಾರು ಮಂದಿ ತೆರೆಮರೆಯಲ್ಲಿ ಶ್ರಮಿಸಿದ್ದಾರೆ. ಅವರೆಲ್ಲರ ಸೇವೆ ಮಾಡುವ ಮೂಲಕ ಋಣ ತೀರಿಸುತ್ತೇನೆ.

■ ಸಂದರ್ಶನ: ಮೋಹನ್ ಕಾಯಕ

ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಐದು ವರ್ಷದ ಬಳಿಕ ಮತ್ತೆ ಕಾಂಗ್ರೆಸ್ ಜಯ ಸಾಧಿಸಿದೆ. ನೂತನ ಶಾಸಕ ಕೆ.ಹರೀಶ್‌ಗೌಡ, ತಮ್ಮ ಚೊಚ್ಚಲ ಗೆಲುವು, ಮಹದುದ್ದೇಶಿತ ವಿಧಾನ ಸೌಧ ಪ್ರವೇಶ, ಮುಂದಿನ ಕಾರ್ಯ ಯೋಜನೆಗಳ ಕುರಿತು 'ಮೈಸೂರು ಮಿತ್ರ'ನಲ್ಲಿ ಮುಕ್ತವಾಗಿ ಮಾತನಾಡಿದ್ದಾರೆ.

'ಮೈಸೂರು ಮಿತ್ರ': ಶಾಸಕರಾಗಿ ಮೊದಲ ಬಾರಿ ವಿಧಾನಸೌಧ ಪ್ರವೇಶ ಮಾಡಿದ ಅನುಭವ ಹೇಗಿತ್ತು?

ಕೆ.ಹರೀಶ್‌ಗೌಡ: ವಿಧಾನಸೌಧಕ್ಕೆ ಮೊದಲ ಹೆಜ್ಜೆ ಇಟ್ಟಾಗ ನನ್ನ ಜೀವನ ಸಾರ್ಥಕವಾಯ್ತು ಎಂಬ ಧನ್ಯತಾ ಭಾವ. ನನ್ನ ಪರಿಶ್ರಮಕ್ಕೆ ತಕ್ಕಂತೆ ಕ್ಷೇತ್ರದ ಜನತೆ ನನ್ನನ್ನು ವಿಧಾನಸೌಧಕ್ಕೆ ಕಳುಹಿಸಿದ್ದಾರೆ. ಅವರಿಗೆಲ್ಲಾ ನಾನು ಕೃತಜ್ಞನಾಗಿರುತ್ತೇನೆ. ಹಾಗೆಯೇ ಅವರೆಲ್ಲರೂ ನನ್ನ ಮೇಲೆ ನಂಬಿಕೆ ಇಟ್ಟು ಕಳುಹಿಸಿಕೊಟ್ಟಿದ್ದಾರೆ. ಅವರ ಋಣ ತೀರಿಸುವ ಕೆಲಸವನ್ನು ನೂರಕ್ಕೆ ನೂರರಷ್ಟು ಮಾಡುತ್ತೇನೆ.

'ಮಿತ್ರ': ರಾಜಕೀಯ ಹಿನ್ನೆಲೆ ಇಲ್ಲದ ತಮಗೆ ಕಾಂಗ್ರೆಸ್ ಟಿಕೆಟ್ ದೊರೆತದ್ದು ಹೇಗೆ?

ಕೆ.ಹರೀಶ್‌ಗೌಡ: ಕಾಂಗ್ರೆಸ್‌ನಿಂದ ಟಿಕೆಟ್ ಕೊಟ್ಟೇ ಕೊಡುತ್ತಾರೆ ಎಂಬ ಬಲವಾದ ನಂಬಿಕೆ ಇತ್ತು. ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮೂವರು ಸೇರಿ ನನಗೆ ಬಿ–ಫಾರಂ ಕೊಟ್ಟಿದ್ದಾರೆ. ನನ್ನ ರಾಜಕೀಯ ಜೀವನ ಹೇಗೆ ಆರಂಭವಾಯಿತು ಎಂಬುದೇ ನನಗೆ ಗೊತ್ತಿಲ್ಲ. ಇದು ನನಗೂ ಒಂದು ರೀತಿ ಸೋಜಿಗದ ಸಂಗತಿ. ನಮ್ಮದು ರೈತ ಕುಟುಂಬ. ನನ್ನ ತಂದೆ ಸರ್ಕಾರಿ ನೌಕರರಾಗಿದ್ದರು. ನಮ್ಮ ಕುಟುಂಬಕ್ಕೆ ರಾಜಕೀಯದ ನಂಟು ಇರಲಿಲ್ಲ. ಜನರ ಮಧ್ಯೆ ಇದ್ದು, ಅವರ ಕಷ್ಟ–ಸುಖದಲ್ಲಿ ಭಾಗಿಯಾಗುತ್ತಾ ಸಮಾಜಮುಖಿ ಕೆಲಸ–ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದರ ಫಲವೇ ಇಂದು ನನ್ನನ್ನು ಶಾಸಕನ ಸ್ಥಾನಕ್ಕೆ ತಂದು ನಿಲ್ಲಿಸಿದೆ.

'ಮಿತ್ರ': ತಮ್ಮ ಗೆಲುವಿಗೆ ಪ್ರಮುಖ ಕಾರಣಗಳೇನು?

ಕೆ.ಹರೀಶ್‌ಗೌಡ: ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಎಂಬುದೇ ನನ್ನ ಗೆಲುವಿಗೆ ಮೊದಲ ಪ್ರಮುಖ ಕಾರಣವಾಗಿದೆ. 15 ವರ್ಷ ಕ್ಷೇತ್ರದ ಜನರೊಂದಿಗೆ ಇಟ್ಟುಕೊಂಡಿದ್ದ ನಿರಂತರ ಸಂಪರ್ಕ. ಅವರ ಕಷ್ಟ–ಸುಖಗಳಲ್ಲಿ ಭಾಗಿಯಾಗುತ್ತಿರುವುದೆಲ್ಲವೂ ನನಗೆ ಪ್ಲಸ್ ಪಾಯಿಂಟ್ ಆಯಿತು. ಉತ್ತಮವಾದಂತಹ ಸಹಕಾರ ಸಿಕ್ಕಿತ್ತು. ಸ್ನೇಹಿತರು, ಹಿತೈಷಿಗಳು, ಪಕ್ಷದ ಮುಖಂಡರಿಂದ ಉತ್ತಮ ಸಹಕಾರ ದೊರೆಯಿತು. ಅಲ್ಲದೆ ಸ್ವಯಂ ಪ್ರೇರಿತವಾಗಿ ಸಾವಿರಾರು ಜನರು ನನ್ನ ಪರವಾಗಿ ಕೆಲಸ ಮಾಡಿದ್ದಾರೆ. ಅದೆಲ್ಲವೂ ಚುನಾವಣೆಯಲ್ಲಿ ಗೆದ್ದ ಬಳಿಕ ನನಗೆ ತಿಳಿಯುತ್ತಿದೆ. ನನ್ನ ಗೆಲುವಿಗೆ ಸಾವಿರಾರು ಜನ ದೇವರ ಮೊರೆ ಹೋಗಿ ಹರಕೆ ಕಟ್ಟಿಕೊಂಡಿದ್ದಾರೆ ಎಂಬುದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಅವರ ಋಣ ತೀರಿಸುವ ಶಕ್ತಿಯನ್ನು ತಾಯಿ ಚಾಮುಂಡೇಶ್ವರಿ ನನಗೆ ಕೊಡಲಿ ಎಂದು ಪ್ರಾರ್ಥಿಸಿದ್ದೇನೆ.

'ಮಿತ್ರ': ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳನ್ನು ನೋಡಿ ಕ್ಷೇತ್ರದ ಜನತೆ ನಿಮಗೆ ಮತ ನೀಡಿದ್ದಾರೆ ಎಂಬುದು ನಿಜವೇ?

ಕೆ.ಹರೀಶ್‌ಗೌಡ: ಚಾಮರಾಜ ವಿಧಾನ ಸಭಾ ಕ್ಷೇತ್ರದಲ್ಲಿ 2.45 ಲಕ್ಷ ಮತದಾರರಿದ್ದಾರೆ. ಆದರೆ ಕ್ಷೇತ್ರದಲ್ಲಿನ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಣೆ ಮಾಡಿರುವುದು ಕೇವಲ 5–6 ಸಾವಿರ ಮನೆಗಳಿಗಷ್ಟೇ. ಕ್ಷೇತ್ರದ ಮತದಾರರು ಕಾಂಗ್ರೆಸ್ ಗ್ಯಾರಂಟಿ ಕಾರ್ಡ್‌ಗಿಂತಲೂ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕು ಹಾಗೂ ಹರೀಶ್ ಗೌಡನನ್ನು ಗೆಲ್ಲಿಸಬೇಕೆಂದು ಮತ ನೀಡಿದ್ದಾರೆ ಎಂಬುದು ನನ್ನ ಭಾವನೆಯಾಗಿದೆ.

'ಮಿತ್ರ': ನೀವು ಹುಕ್ಕಾ ಬಾರ್‌ಗಳಿಗೆ ಬೆಂಬಲ ನೀಡುತ್ತಿದ್ದೀರಾ ಎಂಬ ಆರೋಪಕ್ಕೆ ತಮ್ಮ ಪ್ರತಿಕ್ರಿಯೆ ಏನು?

ಕೆ.ಹರೀಶ್‌ಗೌಡ: ಚಾಮರಾಜ ವಿಧಾನ ಸಭಾ ಕ್ಷೇತ್ರದಲ್ಲಿರುವ ಹುಕ್ಕಾ ಬಾರ್‌ಗಳಿಗೆ ಬೆಂಬಲ ನೀಡುವ ಪ್ರಶ್ನೆಯೇ ಇಲ್ಲ. ಈಗಾಗಲೇ ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಕ್ಷೇತ್ರದಲ್ಲಿದ್ದ ಎಲ್ಲಾ ಹುಕ್ಕಾ ಬಾರ್‌ಗಳ ಬಾಗಿಲು ಮುಚ್ಚಿಸಲಾಗಿದೆ.

'ಮಿತ್ರ': ಚಾಮರಾಜ ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಮುಂದಿನ ಮಹತ್ವದ ಯೋಜನೆಗಳೇನು?

ಕೆ.ಹರೀಶ್‌ಗೌಡ: ಕ್ಷೇತ್ರದ ಅಭಿವೃದ್ಧಿ ನನ್ನ ಮೊದಲ ಆದ್ಯತೆ. ಅದರಲ್ಲೂ ಸೂರಿಲ್ಲದವರಿಗೆ ಸೂರು(ಮನೆ) ನೀಡುವುದು ಮೊದಲ ಆದ್ಯತೆಯಾಗಿದೆ.

ಕಳೆದ 20 ವರ್ಷಗಳಿಂದ ಚಾಮರಾಜ ಕ್ಷೇತ್ರದಲ್ಲಿ ಒಬ್ಬರಿಗೂ ಸೂರು ಕೊಡಲು ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ ಮೊದಲು ಮನೆ ಕೊಡಿಸುವ ಕೆಲಸ ಮಾಡುತ್ತೇನೆ. ಹಾಗೆಯೇ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಕಾರ್ಯ ಯೋಜನೆಗಳನ್ನು ರೂಪಿಸುತ್ತಿದ್ದೇನೆ. ಕ್ಷೇತ್ರದ ಯುವ ಜನತೆಯ ಜೀವನ ಶೈಲಿಯನ್ನು ಉತ್ತಮಪಡಿಸುವುದು ಮುಖ್ಯ ಗುರಿಯಾಗಿದೆ. ಈ ನಿಟ್ಟಿನಲ್ಲಿ ಸಾಕಷ್ಟು ಯೋಜನೆಗಳಿದ್ದು, ಹಂತ ಹಂತವಾಗಿ ಮಾಡುತ್ತೇನೆ.

'ಮಿತ್ರ': ಕ್ಷೇತ್ರದ ಜನತೆ ತಮ್ಮನ್ನು ಭೇಟಿಯಾಗುವುದೆಲ್ಲಿ?

ಕೆ.ಹರೀಶ್‌ಗೌಡ: ತುಂಬಾ ಸುಲಭ. ಕ್ಷೇತ್ರದ ವ್ಯಾಪ್ತಿಯಲ್ಲಿನ 19 ವಾರ್ಡ್‌ಗಳಲ್ಲಿಯೂ ಕಚೇರಿ ತೆರೆಯುತ್ತೇನೆ. ವಾರಕ್ಕೆ ಅಥವಾ 15 ದಿನಕ್ಕೊಮ್ಮೆ ಒಂದೊಂದು ಕಚೇರಿಯಲ್ಲಿ ಇಡೀ ದಿನ ಆಯಾ ಭಾಗದ ಜನರಿಗೆ ಸಿಗುತ್ತೇನೆ. ಜಲದರ್ಶಿನಿಯಲ್ಲಿ ಇನ್ನೊಂದು ವಾರದಲ್ಲಿ ಕಚೇರಿ ತೆರೆಯಲಿದ್ದು, ಅಲ್ಲಿಯೂ ನನ್ನನ್ನು ಭೇಟಿ ಮಾಡಬಹುದು. ಸೇವೆ ಮಾಡಲೆಂದೇ ಗೆಲ್ಲಿಸಿ ಶಾಸಕನನ್ನಾಗಿ ಮಾಡಿರುವ ಕ್ಷೇತ್ರದ ಮತದಾರರ ಕೆಲಸ ಮಾಡುವುದೇ ನನ್ನ ಕೆಲಸವಲ್ಲವೇ?

ಶಾಲೆ ಬಿಟ್ಟ ಮಕ್ಕಳ ಮರಳಿ ಕರೆತನ್ನಿ

ಶಿಕ್ಷಕರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಸಲಹೆ

ಮೈಸೂರು: ಮಕ್ಕಳ ಹಾಜರಾತಿಯನ್ನು ಹೆಚ್ಚಿಸಬೇಕು. ಪೋಷಕರ ಮನವೊಲಿಸಿ ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಕರೆತರಬೇಕು ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಸಲಹೆ ನೀಡಿದರು.

ಕನಕಗಿರಿ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ಕ್ಷೇತ್ರ ಶಿಕ್ಷಣಾಧಿಕಾರಿ, ಮುಖ್ಯೋಪಾಧ್ಯಾಯರ ಜತೆಗೆ ಸಮಾಲೋಚನೆ ನಡೆಸಿ ಶಾಲೆಗಳು ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಸಿದ್ಧತೆಗಳ ಬಗ್ಗೆ ಸೂಚನೆ ನೀಡಿದರು. ಕ್ಷೇತ್ರದ ವ್ಯಾಪ್ತಿಗೆ ಬರುವ ಸರ್ಕಾರಿ, ಅನುದಾನಿತ, ಅನುದಾನ ರಹಿತ ಶಾಲಾ, ಕಾಲೇಜುಗಳಲ್ಲಿ ಹಾಜರಾತಿ ಪ್ರಮಾಣ ಕಾಯ್ದುಕೊಳ್ಳಬೇಕು. ಕನಕಗಿರಿ, ವಿದ್ಯಾರಣ್ಯಪುರಂ, ಅಶೋಕಪುರಂ, ನಾಚನಹಳ್ಳಿಪಾಳ್ಯ ಮೊದಲಾದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಜಾಸ್ತಿ ಇರಬೇಕು. ಮುಖ್ಯೋಪಾಧ್ಯಾಯರು ಮನೆಗೆ ತೆರಳಿ ಮಕ್ಕಳನ್ನು ಕರೆತರಬೇಕು ಎಂದರು.



ಕನಕಗಿರಿಯಲ್ಲಿ ನಿರ್ಮಿಸಿರುವ ಹೊಸ ಕಟ್ಟಡಗಳನ್ನು ಶೀಘ್ರದಲ್ಲೇ ಉದ್ಘಾಟಿಸುವ ಜತೆಗೆ ಬೇಕಾದ ಪರಿಕರಗಳನ್ನು ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಅಪ್ರಾಪ್ತ ವಯಸ್ಸಿನ ಬಾಲಕಿಗೆ 20 ಬಾರಿ ಇರಿದು ಹತ್ಯೆ

ದೆಹಲಿಯಲ್ಲಿ ಪೈಶಾಚಿಕ ಕೃತ್ಯ, ರಕ್ಕಸ ಪ್ರೇಮಿ ಸೆರೆ

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಮತ್ತೊಂದು ಪೈಶಾಚಿಕ ಕೃತ್ಯ ನಡೆದಿದೆ. 16 ವರ್ಷದ ಅಪ್ರಾಪ್ತೆಗೆ 20 ಬಾರಿ ಚಾಕುವಿನಿಂದ ಇರಿದು ಹತ್ಯೆ ಮಾಡಲಾಗಿದೆ.

ನವದೆಹಲಿಯ ಶಹಾಬಾದ್ ಡೈರಿ ಪ್ರದೇಶದಲ್ಲಿ ಭಾನುವಾರ ಆಕೆಯ ಬಾಯ್ ಫ್ರೆಂಡ್‌ನಿಂದಲೇ ಈ ಘಟನೆ ನಡೆದಿದ್ದು, ಆರೋಪಿ ಸಾಹಿಲ್‌ನನ್ನು ಉತ್ತರ ಪ್ರದೇಶದ ಬುಲಂದ್ ಶಹರ್ ಬಳಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ಸಾಹಿಲ್ ಮತ್ತು ಮೃತ ಅಪ್ರಾಪ್ತೆ ನಡುವೆ ಸಂಬಂಧವಿತ್ತು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ನಿನ್ನೆ ದಿನ ಇಬ್ಬರಿಗೂ ಜಗಳವಾಗಿದೆ. ನಂತರ ಆಕೆ ಬೀದಿಯಲ್ಲಿ ಹೋಗುತ್ತಿದ್ದಾಗ ಎದುರಾದ ಸಾಯಿಲ್ 20 ಬಾರಿ ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದಾನೆ ಎಂದು ಉಪ ಪೊಲೀಸ್ ಆಯುಕ್ತ ರವಿಕುಮಾರ್ ಸಿಂಗ್ ತಿಳಿಸಿದ್ದಾರೆ.



ತಲೆಮರೆಸಿಕೊಂಡಿದ್ದ ಆರೋಪಿಯ ಬಂಧನಕ್ಕಾಗಿ ಆರು ತಂಡಗಳನ್ನು ರಚಿಸಲಾಗಿತ್ತು. ಉತ್ತರ ಪ್ರದೇಶದ ಬುಲಂದ್ ಶಹರ್ ಬಳಿ ಇಂದು ಪೊಲೀಸರ ಕೈಗೆ ಆರೋಪಿ ಸಿಕ್ಕಿಬಿದ್ದಿದ್ದಾನೆ. ಮೃತಳ ತಂದೆ ನೀಡಿದ ದೂರಿನ ಮೇರೆಗೆ ಶಹಬಾದ್ ಡೈರಿ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 302 ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗೆ ಕಠಿಣ ಶಿಕ್ಷೆ ನೀಡುವ ನಿಟ್ಟಿನಲ್ಲಿ ಸಾಧ್ಯವಿರುವ ಎಲ್ಲ ಸಾಕ್ಷ್ಯಗಳನ್ನು ಸಂಗ್ರಹಿಸುತ್ತೇವೆ ಎಂದು ದೆಹಲಿ ಪೊಲೀಸ್ ಅಧಿಕಾರಿ ದೇವೇಂದ್ರ ಪಾಠಕ್ ಹೇಳಿದ್ದಾರೆ.

ಆಕೆಯ ತಲೆಯನ್ನು ತುಂಡುಗಳಾಗಿ ಕತ್ತರಿಸಲಾಗಿದ್ದು, ಆರೋಪಿಗೆ ಕಠಿಣ ಶಿಕ್ಷೆಯಾಗಬೇಕೆಂದು ಅಪ್ರಾಪ್ತ ಬಾಲಕಿಯ ತಂದೆ ಒತ್ತಾಯಿಸಿದ್ದಾರೆ.

ಮಕ್ಕಳ ಮನಸ್ಸಿಗೆ ವಿಷ ತುಂಬುವ ಪಠ್ಯ, ಪಾಠಗಳಿಗೆ ಅವಕಾಶ ಕೊಡುವುದಿಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ



ಬೆಂಗಳೂರು: ಮಕ್ಕಳ ಮನಸ್ಸಿಗೆ ವಿಷ ತುಂಬುವ ಪಠ್ಯ ಮತ್ತು ಪಾಠಗಳಿಗೆ ಅವಕಾಶ ಕೊಡುವುದಿಲ್ಲ. ಭಯದ ವಾತಾವರಣ ಅಳಿಸಿ ನೆಮ್ಮದಿಯ ವಾತಾವರಣ ಸೃಷ್ಟಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ಹೇಳಿದರು.

ಗೃಹ ಕಚೇರಿ ಕೃಷ್ಣದಲ್ಲಿ ಸುಮಾರು 40ಕ್ಕೂ ಹೆಚ್ಚು ಮಂದಿ ಸಾಹಿತಿ, ಬರಹಗಾರರು ಹಾಗೂ ನಾನಾ ಜನಪರ ಸಂಘಟನೆಗಳ ಮುಖ್ಯಸ್ಥರ ಜತೆಗೆ ನಡೆದ ಸಭೆಯಲ್ಲಿ ಈ ಭರವಸೆ ನೀಡಿದರು. ಕನ್ನಡ ನಾಡಿನ ಸೌಹಾರ್ದ ಮತ್ತು ಜಾತ್ಯತೀತ ಪರಂಪರೆಯ ರಕ್ಷಣೆ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ದ್ವೇಷ ರಾಜಕಾರಣವನ್ನು ಬಲಿ ಹಾಕಿ, ಭಯದ ವಾತಾವರಣ ಅಳಿಸಲಾಗುವುದು ಎಂದು ತಿಳಿಸಿದರು.

ದೇಶವನ್ನು ಅಪಾಯದ ಸುಳಿಗೆ ದೂಡುತ್ತಾ, ಈ ಮಣ್ಣಿನ ಬಹುತ್ವವನ್ನು ನಾಶ ಮಾಡುತ್ತಿರುವ ಬಿಜೆಪಿ ಪರಿವಾರದ ವಿರುದ್ಧ ಖಚಿತ ನಿಲುವು ತೆಗೆದುಕೊಂಡು ಸ್ವಯಂಪ್ರೇರಿತವಾಗಿ ಈ ಚುನಾವಣೆಯಲ್ಲಿ ಜನರನ್ನು ಎಚ್ಚರಿಸುವ ಕೆಲಸ ಮಾಡಿದ್ದಕ್ಕಾಗಿ ಸಾಹಿತಿ–ಬರಹಗಾರರಿಗೆ ಸಿದ್ದರಾಮಯ್ಯ ಅಭಿನಂದನೆ ಸಲ್ಲಿಸಿದರು.

ಸುಳ್ಳು ಮೊಕದ್ದಮೆ ವಾಪಸ್: ಸಾಹಿತಿ, ಬರಹಗಾರ, ಕನ್ನಡ ಹೋರಾಟಗಾರರು, ದಲಿತ ಚಳವಳಿಗಳ ಹೋರಾಟಗಾರರು, ರೈತ–ಕಾರ್ಮಿಕರ ಮೇಲೆ ಹಾಕಿದ್ದ ಸುಳ್ಳು ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲಾಗುವುದು. ಮಕ್ಕಳ ಮನಸ್ಸನ್ನು ಕಲುಷಿತಗೊಳಿಸಲು ನಡೆಸಿರುವ ಕೃತ್ಯವನ್ನು ಕ್ಷಮಿಸಲು ಸಾಧ್ಯವಿಲ್ಲ. ಶೈಕ್ಷಣಿಕ ವರ್ಷ ಆರಂಭ ಆಗಿರುವುದರಿಂದ ಮಕ್ಕಳ ಶಿಕ್ಷಣಕ್ಕೆ ತೊಂದರೆ ಆಗದಂತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು. ಹೊಸ ಶಿಕ್ಷಣ ನೀತಿ ಹೆಸರಲ್ಲಿ ಶಿಕ್ಷಣ ಕ್ಷೇತ್ರವನ್ನು ಗಬ್ಬೆಬ್ಬಿಸಲು ಅವಕಾಶ ಕೊಡುವುದಿಲ್ಲ. ಈ ಬಗ್ಗೆ ಮತ್ತೊಮ್ಮೆ ಪ್ರತ್ಯೇಕವಾದ ಸಭೆ ಚರ್ಚಿಸಿ ನಿಷ್ಠುರ ತೀರ್ಮಾನ ತೆಗೆದುಕೊಳ್ಳಲಾಗುವುದು.

ಅನೈತಿಕ ಪೊಲೀಸ್ ಗಿರಿ, ದ್ವೇಷದ ರಾಜಕಾರಣ, ತೇಜೋವಧೆ ಮಾಡುವ ಟ್ರೋಲ್‌ಗಳು, ಸಾಹಿತಿಗಳಿಗೆ ಬೆದರಿಕೆ ಹಾಕುವವರ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಪೊಲೀಸ್ ಮಹಾ ನಿರ್ದೇಶಕರಿಗೆ ಖಡಕ್ ಸೂಚನೆ ನೀಡಿದ್ದೇನೆ. ಬರಹಗಾರರು ನೀಡಿರುವ ಮನವಿ ಪತ್ರದಲ್ಲಿನ ಸಂಗತಿಗಳನ್ನು ಗಂಭೀರವಾಗಿ ಪರಿಗಣಿಸುತ್ತೇನೆ ಎಂದು ಹೇಳಿದರು.

ಸಿಎಂ ಸಿದ್ದರಾಮಯ್ಯ ಭರವಸೆಗಳು

- ಪಠ್ಯ ಮತ್ತು ಪಾಠಗಳ ಮೂಲಕ ಮಕ್ಕಳ ಮನಸ್ಸನ್ನು ಕಲುಷಿತಗೊಳಿಸಲು ನಡೆಸಿರುವ ಕೃತ್ಯವನ್ನು ಕ್ಷಮಿಸಲು ಸಾಧ್ಯವಿಲ್ಲ. ಶೈಕ್ಷಣಿಕ ವರ್ಷ ಆರಂಭ ಆಗಿರುವುದರಿಂದ ಮಕ್ಕಳ ಶಿಕ್ಷಣಕ್ಕೆ ತೊಂದರೆ ಆಗದಂತೆ ಚರ್ಚಿಸಿ ಕ್ರಮ ಕೈಗೊಳ್ಳುತ್ತೇವೆ.
- ಕನ್ನಡ ಹೋರಾಟಗಾರರು, ರೈತ–ಕಾರ್ಮಿಕ–ದಲಿತ ಚಳವಳಿಗಳ ಹೋರಾಟಗಾರರು ಮತ್ತು ಸಾಹಿತಿ, ಬರಹಗಾರರ ಮೇಲೆ ಹಾಕಿರುವ ಸುಳ್ಳು ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲಾಗುವುದು.
- ಹೊಸ ಶಿಕ್ಷಣ ನೀತಿ ಹೆಸರಲ್ಲಿ ಶಿಕ್ಷಣ ಕ್ಷೇತ್ರವನ್ನು ಗಬ್ಬೆಬ್ಬಿಸಲು ಅವಕಾಶ ಕೊಡುವುದಿಲ್ಲ. ಈ ಬಗ್ಗೆ ಮತ್ತೊಮ್ಮೆ ಪ್ರತ್ಯೇಕವಾದ ಸಭೆ ಕರೆದು ಸಮಗ್ರವಾಗಿ ಚರ್ಚಿಸಿ ನಿಷ್ಠುರವಾದ ಮತ್ತು ಖಚಿತವಾದ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುವುದು.
- ಅನೈತಿಕ ಪೊಲೀಸ್‌ಗಿರಿ, ದ್ವೇಷದ ರಾಜಕಾರಣ, ತೇಜೋವಧೆ ಮಾಡುವ ಟ್ರೋಲ್‌ಗಳು ಮತ್ತು ಸಾಹಿತಿಗಳಿಗೆ ಬೆದರಿಕೆ ಹಾಕುವವರ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಈಗಾಗಲೇ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಖಡಕ್ ಸೂಚನೆ ನೀಡಿದ್ದೇನೆ.
- ಉಳಿದಂತೆ ಸಾಹಿತಿ ಬರಹಗಾರರು ನೀಡಿರುವ ಮನವಿ ಪತ್ರದಲ್ಲಿನ ಸಂಗತಿಗಳನ್ನು ಗಂಭೀರವಾಗಿ ಪರಿಗಣಿಸುತ್ತೇನೆ. ಅಗತ್ಯಕ್ಕೆ ತಕ್ಕಂತೆ ನಮ್ಮ ಸರ್ಕಾರ ಕ್ರಮ ಕೈಗೊಳ್ಳಲಿದೆ.

ಮೈಸೂರು ಜಿಲ್ಲೆ ಮಲೇರಿಯಾ ಮುಕ್ತ ಘೋಷಣೆ ಸಂಬಂಧ

ಮೌಲ್ಯಮಾಪನ ಪ್ರಕ್ರಿಯೆ ಆರಂಭಿಸಿದ ತಜ್ಞರ ತಂಡ

ಮೈಸೂರು,ಮೇ 29(ಪಿಎಂ)– 'ಮೈಸೂರು' 'ಮಲೇರಿಯಾ ಮುಕ್ತ ಜಿಲ್ಲೆ' ಎಂದು ಘೋಷಿಸುವ ಸಂಬಂಧ ಮೌಲ್ಯಮಾಪನ ನಡೆಸಲು ತಜ್ಞರ ತಂಡ ಸೋಮವಾರ ಮೈಸೂರಿಗೆ ಆಗಮಿಸಿ, ನಜರ್‌ಬಾದಿನಲ್ಲಿರುವ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿಯಲ್ಲಿ ಮಲೇರಿಯಾ ನಿಯಂತ್ರಣ ಕಾರ್ಯ ಚಟುವಟಿಕೆಗಳ ಸಂಬಂಧ ಮಾಹಿತಿ ಕಲೆ ಹಾಕಿತು.

ಕೇಂದ್ರ ಸರ್ಕಾರದ ಇಬ್ಬರು ಪ್ರತಿನಿಧಿಗಳು, ರಾಜ್ಯ ಸರ್ಕಾರದ ಮೂವರು ಪ್ರತಿನಿಧಿಗಳನ್ನು ಒಳಗೊಂಡ 'ಇಂಡಿಪೆಂಡೆಂಟ್ ಅಸೆಸ್‌ಮೆಂಟ್ ಕಮಿಟಿ'ಯು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ ಅವರಿಂದ ಮಾಹಿತಿ ಪಡೆಯಿತು.

ಸರ್ಕಾರ ನಿಗದಿಪಡಿಸಿ ಮಾನದಂಡಗಳ ಪ್ರಕಾರವೇ ಮಲೇರಿಯಾ ಶೂನ್ಯದಲ್ಲಿಯೇ? ಶೂನ್ಯಕ್ಕೆ ತರಲು ಜಿಲ್ಲೆಯಲ್ಲಿ ನಡೆದಿರುವ ಕಾರ್ಯಾಚರಣೆ, ರಕ್ತಲೇಪನ ಸಂಗ್ರಹ ಮತ್ತು ಅವುಗಳ ಪರೀಕ್ಷೆ ಪ್ರಮಾಣ ಸಮರ್ಪಕವಾಗಿ ನಡೆದಿದೆಯೇ? ಎಂಬುದು ಸೇರಿದಂತೆ ಮೊದಲಾದ ಅಂಶಗಳ ಸಂಬಂಧ ತಜ್ಞರ ತಂಡ ಪರಿಶೀಲಿಸಿತು. ಅಲ್ಲದೆ, ಈ ಸಂಬಂಧ ನಿರ್ವಹಿಸಿರುವ ದಾಖಲೆಗಳನ್ನು ಅವಲೋಕಿಸಿತು.

ಕೇಂದ್ರ ಸರ್ಕಾರದ ಪ್ರಾಂತೀಯ ಆರೋಗ್ಯ ಕಚೇರಿಯ ಹಿರಿಯ ಆರೋಗ್ಯ ಅಧಿಕಾರಿ ಡಾ.ಸ್ಮಿತಾ ರಾವತ್ ನೇತೃತ್ವದ ತಂಡ ಪರಿಶೀಲನಾ ಪ್ರಕ್ರಿಯೆ ಆರಂಭಿಸಿದೆ. ಕೇಂದ್ರ ಸರ್ಕಾರದ ಪ್ರಾಂತೀಯ ಆರೋಗ್ಯ ಕಚೇರಿ ಪ್ರಯೋಗಾಲಯ ತಂತ್ರಜ್ಞ ಕೆ.ರವಿಕುಮಾರ್, ರಾಜ್ಯ ಸರ್ಕಾರದ ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗ ನಿಯಂತ್ರಣ ಕಾರ್ಯಕ್ರಮದ ಸಂಶೋಧನಾಧಿಕಾರಿ ಡಾ.ನಾಗರಾಜ್, ಕೀಟ ಶಾಸ್ತ್ರಜ್ಞೆ ಡಾ.ಉಷಾ, ಆರೋಗ್ಯ ಮೇಲ್ವಿಚಾರಣಾಧಿಕಾರಿ ಕೆ.ಪಿ.ಶ್ರೀನಿವಾಸಮೂರ್ತಿ, ಆರೋಗ್ಯ ನಿರೀಕ್ಷಣಾಧಿಕಾರಿ ಬಿ.ಸಿ.ದಯಾನಂದ ಅವರು ಈ ಇಂಡಿಪೆಂಡೆಂಟ್ ಅಸೆಸ್‌ಮೆಂಟ್ ಕಮಿಟಿಯಲ್ಲಿದ್ದು, ಮೌಲ್ಯಮಾಪನಾ ಪ್ರಕ್ರಿಯೆ ನಡೆಸಿದರು.

ಸೋಮವಾರ ಮಧ್ಯಾಹ್ನದವರೆಗೆ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿಯಲ್ಲಿ ದಾಖಲೆಗಳ ಪರಿಶೀಲನೆ ನಡೆಸಿದ ತಂಡವು ಬಳಿಕ ಮೈಸೂರಿನ ಮೈಸೂರು ವೈದ್ಯಕೀಯ ಕಾಲೇಜು, ಜೆಎಸ್‌ಎಸ್ ವೈದ್ಯಕೀಯ ಕಾಲೇಜುಗಳಿಗೆ ಭೇಟಿ ನೀಡಿ, ಅಲ್ಲಿ ಯಾವುದಾದರೂ ಮಲೇರಿಯಾ ಪ್ರಕರಣ ದಾಖಲಾಗಿರುವ ಬಗ್ಗೆ ಪರಿಶೀಲನೆ ನಡೆಸಿತು.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ತಜ್ಞರ ತಂಡದಲ್ಲಿರುವ ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗ ನಿಯಂತ್ರಣ ಕಾರ್ಯಕ್ರಮದ ಸಂಶೋಧನಾಧಿಕಾರಿ ಡಾ.ನಾಗರಾಜ್, 2025ರೊಳಗೆ ರಾಜ್ಯವನ್ನು ಮಲೇರಿಯಾ ಮುಕ್ತಗೊಳಿಸುವ ಗುರಿಯನ್ನು ರಾಜ್ಯ ಸರ್ಕಾರ ಹೊಂದಿದೆ. ಒಂದು ವೇಳೆ ಹೊರ ರಾಜ್ಯದಿಂದ ಬಂದು ಇಲ್ಲಿ ಪಾಸಿಟಿವ್ ಆದರೂ ಈ ವೇಳೆಗೆ ರಾಜ್ಯದಲ್ಲಿ ಸ್ಥಳೀಯವಾಗಿ ಮಲೇರಿಯಾ ಪ್ರಕ ರಣಗಳು ಕಾಣಿಸಿಕೊಳ್ಳದಂತೆ ಕಾರ್ಯ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎಂದರು.

100 ಮಂದಿ ಒಂದು ಆಸ್ಪತ್ರೆಗೆ ಭೇಟಿ ನೀಡಿದ್ದರೆ ಅವರಲ್ಲಿ 15 ಮಂದಿ ಜ್ವರಪೀಡಿತರು ಎಂಬುದು ಅಧ್ಯಯನದಿಂದ ಬೆಳಕಿಗೆ ಬಂದಿದೆ. ಹಾಗಾಗಿ 15 ಮಂದಿಗೆ ಮಲೇರಿಯಾ ಪರೀಕ್ಷೆ ನಡೆಸಬೇಕು ಎಂಬುದನ್ನು ಕಡ್ಡಾಯಗೊಳಿಸಲಾಗಿದೆ. ಈ ಬಗ್ಗೆ ಮೈಸೂರು ಜಿಲ್ಲೆಯಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲಿಸಲಿದ್ದೇವೆ. ಆಶಾ ಕಾರ್ಯಕರ್ತೆಯರು, ಸಮುದಾಯ ಆರೋಗ್ಯ ಅಧಿಕಾರಿಗಳು, ಆರೋಗ್ಯ ನಿರೀಕ್ಷಕರು ಮಲೇರಿಯಾ ನಿಯಂತ್ರಣದಲ್ಲಿ ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸಲಿದ್ದೇವೆ ಎಂದರು.

ಜಿಲ್ಲೆಯಲ್ಲಿ ಮಲೇರಿಯಾ ಪ್ರಕರಣ ಮುಕ್ತವೆಂದು ಘೋಷಿಸಲು ಸಲ್ಲಿಸಿರುವ ಪ್ರಸ್ತಾವನೆ ಸಂಬಂಧ ಮೌಲ್ಯಮಾಪನ ನಡೆಯಲಿದ್ದು, ಸರ್ಕಾರದ ನಿಗದಿಪಡಿಸಿರುವ ಮಾನದಂಡಗಳ ಸೂಕ್ತ ಪಾಲನೆ ಬಗ್ಗೆ ಪರಿಶೀಲನೆ ನಡೆಸಲಾಗುವುದು. ಎಲ್ಲಾ ರೀತಿಯ ಪರಿಶೀಲನೆಯಲ್ಲಿ ಸಮರ್ಪಕ ಎಂದು ಕಂಡು ಬಂದರೆ ಮಲೇರಿಯಾ ಮುಕ್ತವೆಂದು ವರದಿ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು. ಆ ಬಳಿಕ ಕೇಂದ್ರ ಸರ್ಕಾರದ ಮತ್ತೊಂದು ತಜ್ಞರ ತಂಡ ಮತ್ತೊಮ್ಮೆ ಪರಿಶೀಲನೆ ನಡೆಸಲಿದೆ. ನಮ್ಮ ಮೌಲ್ಯಮಾಪನ ಪ್ರಕ್ರಿಯೆ ಬಗ್ಗೆ ಪರಿಶೀಲಿಸಿ ಅಂತಿಮ ವರದಿ ಸಿದ್ಧಪಡಿಸಲಿದೆ. ಈ ತಂಡ ನೀಡುವ ವರದಿ ಆಧಾರದಲ್ಲಿ ಕೇಂದ್ರ ಸರ್ಕಾರ ಘೋಷಣೆ ಸಂಬಂಧ ನಿರ್ಧಾರ ಪ್ರಕಟಿಸಲಿದೆ ಎಂದು ವಿವರಿಸಿದರು.

ನಮ್ಮ ತಂಡದ ಪರಿಶೀಲನೆ ವೇಳೆ ಸಣ್ಣಪುಟ್ಟ ನ್ಯೂನತೆಗಳು ಕಂಡುಬಂದರೆ ಸರಿಪಡಿಸಿಕೊಳ್ಳಲು ಒಂದು ತಿಂಗಳ ಕಾಲಾವಕಾಶವಿದೆ. ಆ ಬಳಿಕ ಮತ್ತೊಮ್ಮೆ ಮೌಲ್ಯ ಮಾಪನ ನಡೆಸಬೇಕಾಗುತ್ತದೆ. ಕರ್ನಾಟಕದಲ್ಲಿ ಈವರೆಗೆ ಯಾವುದೇ ಜಿಲ್ಲೆ ಮಲೇರಿಯಾ ಮುಕ್ತ ಎಂದು ಘೋಷಣೆ ಆಗಿಲ್ಲ. ಆದರೆ ಕಳೆದ 3 ವರ್ಷಗಳಲ್ಲಿ ಮೈಸೂರು ಜಿಲ್ಲೆಗಳಲ್ಲಿ ಸ್ಥಳೀಯವಾಗಿ ಮಲೇರಿಯಾ ಪ್ರಕರಣ ಕಂಡುಬಂದಿಲ್ಲ ಎಂದರು.



ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ, ತಮ್ಮ ಕಚೇರಿಯಲ್ಲಿ ಸೋಮವಾರ ತಜ್ಞರ ತಂಡಕ್ಕೆ ಮಲೇರಿಯಾ ನಿಯಂತ್ರಣ ಸಂಬಂಧ ಜಿಲ್ಲೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸಿದರು.

ಇಂದು ವಿವಿಧ ತಾಲೂಕುಗಳಿಗೆ ಭೇಟಿ

ಮಂಗಳವಾರ (ಮೇ 30) ನಂಜನಗೂಡು, ತಿ.ನರಸೀಪುರ, ಕೆಆರ್ ನಗರ ಮತ್ತು ಹುಣಸೂರು ತಾಲೂಕುಗಳಲ್ಲಿ ತಜ್ಞರ ತಂಡ ಪ್ರವಾಸ ಕೈಗೊಂಡು ಮೌಲ್ಯಮಾಪನ ಪ್ರಕ್ರಿಯೆ ಮುಂದುವರೆಸಲಿದೆ. ಮಲೇರಿಯಾ ಸೋಂಕು ಹರಡುವ ಹೆಣ್ಣು ಅನಾಫಿಲಿಸ್ ಸೊಳ್ಳೆ ಕೆರೆಕಟ್ಟೆಯಂತಹ ದೊಡ್ಡ ನೀರಿನ ಮೂಲಗಳನ್ನೇ ವಾಸಸ್ಥಳ ಮಾಡಿಕೊಳ್ಳುವುದು ಹೆಚ್ಚು. ಈ ಹಿನ್ನೆಲೆಯಲ್ಲಿ ಇಂತಹ ಸೊಳ್ಳೆಗಳ ನಿಯಂತ್ರಣಕ್ಕೆ ಕೆರೆಕಟ್ಟೆಗಳಿಗೆ ಗ್ಯಾಂಬ್ಯೂಸಿಯಾ ಮತ್ತು ಗಪ್ಪಿ ಮೀನುಗಳನ್ನು ಬಿಟ್ಟಿರುವ ಬಗ್ಗೆ ಪರಿಶೀಲನೆ ನಡೆಸಲಿದೆ. ಅಲ್ಲದೆ, ಆಯ್ದ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಮೌಲ್ಯಮಾಪನ ಪ್ರಕ್ರಿಯೆ ನಡೆಸಲಿದೆ.

ನಕ್ಕರೆ ಅದೇ ಸ್ವರ್ಗ

ಆತ : 'ಕೆಲವು ಹೋಟೆಲ್‌ಗಳಿಗೆ ಹೋಗಿ ಕುಳಿತು ವೇಟರ್ ಬಳಿ ತಿಂಡಿಗೆ ಆರ್ಡರ್ ಮಾಡಿ ತಾಸುಗಟ್ಟಲೆ ಕಾಯುವಾಗ ಒಂದು ಪ್ರಶ್ನೆ ಎದುರಾಗುತ್ತದೆ."

ಈತ : "ಯಾವುದು ಅಂಥ ಪ್ರಶ್ನೆ?"

ಆತ : "ನಿಜವಾದ ವೇಟರ್ ಯಾರು? ತಿಂಡಿ ತಂದುಕೊಡುವವರಾ ಅಥವಾ ಕಾಯುವ ನಾವಾ....?

ಮೈಸೂರು ಮಿತ್ರ

ಮಂಗಳವಾರ, 30 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಮೌನ ಆವರಿಸುವವರೆಗೆ ಬುದ್ಧಿವಂತನಾದವನು ಮಾತನಾಡಲು ಮುಂದಾಗುವುದಿಲ್ಲ. – ಬಸವರಾಜ ಕಟ್ಟೀಮನಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗೆದ್ದರೆ ಆಡೋದಕ್ಕೆ ಅನ್ನೋದು / ಸೋತರೆ ನೋಡೋದಕ್ಕೆ ಅನ್ನೋದು

ನಿಮ್ಮ ಪತ್ರಗಳು

ಕೈ ಭದ್ರಕೋಟೆಯಾದ ಗಡಿ ಜಿಲ್ಲೆ ಚಾಮರಾಜನಗರಕ್ಕೆ ಸಚಿವ ಸ್ಥಾನ ಏಕಿಲ್ಲ?

ಮಾನ್ಯರೆ,

ಕರ್ನಾಟಕ ಸರ್ಕಾರದ 2023ನೇ ವಿಧಾನಸಭೆ ಚುನಾವಣೆಯಲ್ಲಿ ಬಹುಮತದೊಂದಿಗೆ ಅಧಿಕಾರದ ಗದ್ದುಗೆಯನ್ನು ಹಿಡಿದಿರುವ ಕಾಂಗ್ರೆಸ್ ಸರ್ಕಾರ ಜಿಲ್ಲಾವಾರು ಸಚಿವ ಸ್ಥಾನವನ್ನು ಹಂಚಿಕೆ ಮಾಡುವುದರಲ್ಲಿ ತಾರತಮ್ಯ ಮಾಡಿರುವುದು ಎದ್ದು ಕಾಣುತ್ತಿದೆ. ಹಲವು ದಶಕಗಳಿಂದಲೂ ಚಾಮರಾಜನಗರ ಎಂದರೆ ಕಾಂಗ್ರೆಸ್ ಪಕ್ಷವನ್ನು ಹೊರತುಪಡಿಸಿ ಬೇರೆ ಪಕ್ಷಗಳಿಗೆ ನೆಲೆ ಇಲ್ಲ ಎಂಬುದು ಅನೇಕ ಚುನಾವಣೆಯಲ್ಲಿ ಸಾಬೀತು ಮಾಡಿದೆ. ಅದರಲ್ಲೂ ಈ ಬಾರಿಯ ಚುನಾವಣೆಯಲ್ಲಿ ಮೂರು ಕ್ಷೇತ್ರದಲ್ಲಿ ಗೆದ್ದು, ಇನ್ನೂ ವಿಶೇಷವಾಗಿ ಶಾಸಕ ಪುಟ್ಟರಂಗಶೆಟ್ಟಿ ಸತತ ನಾಲ್ಕು ಬಾರಿ ಗೆದ್ದು ಕಾಂಗ್ರೆಸ್ ಪಕ್ಷವನ್ನು ನಗರದಲ್ಲಿ ಶಾಶ್ವತವಾಗಿ ಬೇರೂರುವಂತೆ ಮಾಡಿದ್ದಾರೆ. ಹಾಗೂ ಅನುಭವಿ ರಾಜಕಾರಣಿ ಎ.ಆರ್.ಕೃಷ್ಣಮೂರ್ತಿ ಮತ್ತು ಮಾಜಿ ಸಚಿವ ದಿವಂಗತ ಮಹದೇವಪ್ರಸಾದ್ ಅವರ ಪುತ್ರ ಗಣೇಶ ಪ್ರಸಾದ್ ಅವರು ಕೂಡ ಈ ಬಾರಿ ಗೆದ್ದಿದ್ದಾರೆ. ಇದನ್ನು ಪರಿಗಣಿಸದೆ, ಪುಟ್ಟರಂಗಶೆಟ್ಟಿ ಅವರ ಪಕ್ಷ ನಿಷ್ಠೆಯನ್ನು ಗಮನಿಸದೆ ಕೈ ಭದ್ರಕೋಟೆಯಾಗಿರುವ ಚಾಮರಾಜನಗರಕ್ಕೆ ಸಚಿವ ಸ್ಥಾನ ನೀಡದೇ ಇರುವುದು ಮಹಾ ಅನ್ಯಾಯವಾಗಿದೆ. ಅನ್ಯ ಜಿಲ್ಲೆಯ ವ್ಯಕ್ತಿಯು ಚಾಮರಾಜನಗರದ ಉಸ್ತುವಾರಿಯನ್ನು ವಹಿಸಿಕೊಂಡು ಜಿಲ್ಲೆಯ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಕ್ಷೇತ್ರದ ಹಿನ್ನೆಲೆಯನ್ನು ತಿಳಿದುಕೊಳ್ಳುವುದರಲ್ಲಿ ಅಧಿಕಾರದ ಅವಧಿಯೇ ಮುಗಿದು ಹೋಗುತ್ತದೆ. ಇದೇ, ಜಿಲ್ಲೆಯ ಮೂರು ಶಾಸಕರ ಪೈಕಿ ಒಬ್ಬರನ್ನಾದರೂ ಸಚಿವ ಸ್ಥಾನಕ್ಕೆ ಸೇರಿಸಿಕೊಂಡು ಉಸ್ತುವಾರಿಯನ್ನು ನೀಡಿದ್ದರೆ ಜಿಲ್ಲೆಯ ಚಿತ್ರಣ ಸ್ವಲ್ಪ ಮಟ್ಟಿಗೆ ಬದಲಾವಣೆಯಾಗುತ್ತಿತ್ತು. ದುರಂತ ಎಂದರೆ ಅಧಿಕಾರ ಹಿಡಿದ ಪ್ರತಿಯೊಂದು ಸರ್ಕಾರವು ಚಾಮರಾಜನಗರಕ್ಕೆ ಮಾಡುತ್ತಿರುವುದು ಅನ್ಯಾಯದ ಮೇಲೆ ಅನ್ಯಾಯನೇ ಹೊರತು ನ್ಯಾಯ ಇಲ್ಲ....

–ಪವನ್ ಜಯರಾಂ, ಕರಾಮುವಿವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ನಿರ್ದೇಶಕರು, ಮೈಸೂರು.

ಪ್ರಮಾಣವಚನ ಸಂದರ್ಭದಲ್ಲಿ ಧ್ವನಿವರ್ಧಕದ ಅವ್ಯವಸ್ಥೆ

ಮಾನ್ಯರೆ,

ದಿನಾಂಕ 27 ರಂದು ನಡೆದ ನೂತನ ಸಚಿವರುಗಳ "ಪ್ರತಿಜ್ಞಾ ವಿಧಿ" ಸಮಾರಂಭದಲ್ಲಿ ಧ್ವನಿವರ್ಧಕ ವ್ಯವಸ್ಥೆ ತೀರ ಅಭಾಸವಾಗುವಂತಿತ್ತು ಮೊದಲು ನಾಲ್ಕು ಜನರನ್ನು ಪ್ರಮಾಣ ವಚನ ಸ್ವೀಕರಿಸುವಂತೆ ಕರೆದು, ಅದು ಸಾಧ್ಯವಾಗದೇ ಮೂವರನ್ನು ಕೆಳಗಿಳಿಸಿ, ನಂತರ ಒಬ್ಬೊಬ್ಬರಾಗಿ ಕರೆದು ಪ್ರತಿಜ್ಞಾವಿಧಿ ಬೋಧಿಸುತ್ತಾರೆ. ನಂತರವೂ ಆಗಾಗ್ಗೆ ವೇದಿಕೆ ಮೇಲೆ ಬಂದು, ಧ್ವನಿವರ್ಧಕ ಸರಿಪಡಿಸುವುದು ಅವ್ಯವಸ್ಥೆ ಎನಿಸಿತು. ಇಂತಹ ಬಹು ಮುಖ್ಯ ಸಮಾರಂಭದಲ್ಲಿ ಧ್ವನಿವರ್ಧಕ ವ್ಯವಸ್ಥೆ ಹೇಗಿರಬೇಕು ಎಂಬ ಕನಿಷ್ಠ ಜ್ಞಾನವೂ ನಮ್ಮ ಅಧಿಕಾರಿಗಳಿಗೆ ಇಲ್ಲವೇ. **–ಬೂಕನಕೆರೆ ವಿಜೇಂದ್ರ, ಮೈಸೂರು.**

ಸಂಪುಟ ರಚನೆ ಎಂಬ ಹುಲಿ ಸವಾರಿ!

ಮಾನ್ಯರೆ,

ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಳೆದು ಸುರಿದು, ಹೈಕಮಾಂಡ್ ನಿರ್ದೇಶನದಂತೆ ತಮ್ಮ ಸಂಪುಟವನ್ನು ರಚಿಸಿದ್ದಾರೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸೇರಿದಂತೆ, ರಾಜ್ಯ ಸಚಿವ ಸಂಪುಟದಲ್ಲಿ 34 ಮಂದಿ ಇದ್ದು, ಸಚಿವ ಸಂಪುಟ ಭರ್ತಿಯಾಗಿದೆ. ದೇಶದ ಯಾವುದೇ ಮುಖ್ಯಮಂತ್ರಿಗೆ ತುಂಬಾ ಕಠಿಣವಾದ ಕೆಲಸ ಎಂದರೆ, ಸಂಪುಟ ರಚನೆ ಅಥವಾ ಪುನರ್ರಚನೆ. ಸಂಪುಟದಲ್ಲಿ ಅವಕಾಶ ಸಿಗದ ಅನೇಕ ಹಿರಿಯ ಶಾಸಕರು ಗರಂ ಆಗುವುದು, ಬೇರೆ ಪಕ್ಷಕ್ಕೆ ಹಾರುವುದು, ಗುಂಪುಗಾರಿಕೆ ಮಾಡುವುದು ಇತ್ಯಾದಿ ಇತ್ಯಾದಿ... ದೇವರಾಜ ಅರಸರ ಕಾಲದಿಂದಲೂ ನಡೆಯುತ್ತಲೇ ಬಂದಿದೆ. ಮಂತ್ರಿ ಮಂಡಲದಲ್ಲಿ ತಮಗೆ ಸ್ಥಾನ ನೀಡಲಿಲ್ಲ ಎಂಬ ಕೋಪದಿಂದ ಕೆರಳಿ ಹಿರಿಯ ಶಾಸಕ ಬಿ.ಕೆ.ಹರಿಪ್ರಸಾದ್ ತೀಕ್ಷ್ಣವಾದ ಮಾತುಗಳ ಮೂಲಕ ಪರೋಕ್ಷವಾಗಿ ಮುಖ್ಯಮಂತ್ರಿಗಳನ್ನು ತಿವಿದಿದ್ದಾರೆ. ಹಿರಿಯ ಶಾಸಕರಾದ ಚಾಮರಾಜನಗರದ ಪುಟ್ಟರಂಗಶೆಟ್ಟಿ, ತುಮಕೂರಿನ ಟಿ.ಬಿ.ಜಯಚಂದ್ರ, ಮೈಸೂರಿನ ನರಸಿಂಹರಾಜ ಕ್ಷೇತ್ರದ ತನ್ವೀರ್ ಸೇಠ್ ಸೇರಿದಂತೆ ಹಲವಾರು ಮಂತ್ರಿಗಿರಿಯ ಆಕಾಂಕ್ಷಿಗಳು ಸಹ ಬೇಸರಗೊಂಡಿದ್ದಾರೆ ಎಂದು ಹೇಳಲಾಗಿದ್ದು, ಇವರ ಪೈಕಿ ಕೆಲವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬಹುದು.

ಬಿಜೆಪಿ ಟಿಕೆಟ್‌ನಿಂದ ವಂಚಿತರಾಗಿ, ಕೊನೆ ಗಳಿಗೆಯಲ್ಲಿ ಕಾಂಗ್ರೆಸ್ ಸೇರಿದ್ದ ಲಕ್ಷ್ಮಣ ಸವದಿ ಹಾಗೂ ಜಗದೀಶ್ ಶೆಟ್ಟರ್ ಇವರಿಗೂ ಸಹ ಪುನರ್ವಸತಿ ಕಲ್ಪಿಸಬೇಕಾಗಿದೆ. ಇನ್ನು ಒಂದೆರಡು ಬಾರಿ ಗೆದ್ದು ಬಂದವರಿಗೆ, ನಿಗಮ ಮಂಡಳಿಗಳ ಆಶ್ರಯ ಇದ್ದೇ ಇದೆ. ಪ್ರಥಮ ಬಾರಿಗೆ ಆಯ್ಕೆಯಾದವರನ್ನು ಹೇಗೋ ನಿಭಾಯಿಸಬಹುದು ಬಿಡಿ.

ಎಲ್ಲಾ ಶಾಸಕರನ್ನು ಮಂತ್ರಿ ಮಾಡಲು ಸಾಧ್ಯವಿಲ್ಲ. ಜಿಲ್ಲಾವಾರು, ಜಾತಿವಾರು ಪ್ರಾತಿನಿಧ್ಯಗಳ ಜೊತೆಗೆ ಇನ್ನೂ ಹಲವಾರು ಮಾನದಂಡಗಳು ಇರುತ್ತವೆ. ಅದೇನೇ ಇರಲಿ, ಮಂತ್ರಿಗಿರಿಗಾಗಿ ಹಲ್ಲು ಬಾಯಿ ಬಿಡದೆ ಶಾಸಕರು ಜನಸೇವೆಯತ್ತ ಗಮನ ಹರಿಸಿ, ಅವರ ಮೇಲೆ ಮತದಾರರು ಇಟ್ಟಿರುವ ವಿಶ್ವಾಸಕ್ಕೆ ಕುಂದುಂಟಾಗದಂತೆ ಕಾರ್ಯ ನಿರ್ವಹಿಸಲಿ.

– ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು.

ಗ್ಯಾಸ್ ವಿತರಕರಿಗೆ ಬಿಲ್ಲಿನಲ್ಲಿರುವ ಹಣ ಮಾತ್ರ ಪಡೆಯುವಂತೆ ಸೂಚನೆ ನೀಡಲಿ


ಮಾನ್ಯರೆ,

ಅಡುಗೆ ಸಿಲಿಂಡರ್ ಸರಬರಾಜು ಮಾಡುವವರಿಂದ (ಗ್ರಾಹಕರಿಂದ) ವಸೂಲಿ ಮಾಡುವ ಅಧಿಕ ಶುಲ್ಕ ಸ್ಥಗಿತಗೊಳಿಸಲಿ. ಹೊಣೆಗೇಡಿ, ಬೇಜವಾಬ್ದಾರಿ ದುರಹಂಕಾರಿ ಕೇಂದ್ರ ಸರ್ಕಾರ ಬಡ ಜನರ ಪಾಲಿಗೆ ಶತ್ರು ಆಗಿರುವುದು ಖಂಡನೀಯ. ಬಡಜನರು ದಿನನಿತ್ಯ ಬಳಸುವ ಅಡುಗೆ ಸಿಲಿಂಡರ್ ದರವನ್ನು ವಾರದಿಂದ ವಾರಕ್ಕೆ ಏರಿಸಿ ಬಡವರ ಬಾಳು ನಾಶ ಮಾಡುತ್ತಿದೆ. ಗ್ರಾಹಕರಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ಕಳೆದ 2 ವರ್ಷಗಳಿಂದ ನಿಲುಗಡೆ ಮಾಡಿ ಪ್ರಜಾವಿರೋಧಿ ಸರ್ಕಾರವಾಗಿದೆ. ಬಡಜನರಿಗೆ ಇದೇ ಹೊರಲಾರದ ಹೊರೆ ಆಗಿರುವಾಗ ಅಡುಗೆ ಸಿಲಿಂಡರ್ ಸರಬರಾಜು ಮಾಡುವವರು ತಮ್ಮ ಗ್ರಾಹಕರಿಂದ ನಗದು ಬಿಲ್ಲಿನಲ್ಲಿನ ಮೊತ್ತಕ್ಕಿಂತ ತಮಗೆ ಇಷ್ಟ ಬಂದಷ್ಟು ಹಣವನ್ನು ಹಗಲು ದರೋಡೆಯಂತೆ ವಸೂಲಿ ಮಾಡುತ್ತಿರುವುದು ಖಂಡನೀಯ. ಅವರಿಗೆ ಹೆಚ್ಚು ಹಣ ಗ್ರಾಹಕರು ಏಕೆ ನೀಡಬೇಕು. ಗ್ಯಾಸ್ ಕಂಪನಿ ಅವರಿಗೆ ಪ್ರತಿ ತಿಂಗಳು ವೇತನ ನೀಡುತ್ತಿಲ್ಲವೆ?

ಈ ಬಗ್ಗೆ ಸಂಬಂಧಿಸಿದವರು ತುರ್ತಾಗಿ ಗಮನಹರಿಸಿ ಸಿಲಿಂಡರ್ ಸರಬರಾಜು ಮಾಡುವವರಿಗೆ ನಗದು ಬಿಲ್ಲಿನಲ್ಲಿರುವ ಹಣ ಮಾತ್ರ ಪಡೆಯುವಂತೆ ಸೂಚನೆ ನೀಡಲಿ.

–ನೊಂದ ಸಿಲಿಂಡರ್ ಗ್ರಾಹಕರು, ಮೈಸೂರು.

ಪುಸ್ತಕಗಳು ಬಾಳ ಬೆಳಗುವ ಕೈದೀವಿಗೆಗಳು...



ಇತ್ತೀಚೆಗೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವಾಗ ಅಯ್ಯೋ ಬಿಡಿ ಸರ್ ಪಠ್ಯಕ್ರಮಕ್ಕೆ ಇಟ್ಟಿರುವುದನ್ನೇ ಸರಿಯಾಗಿ ಓದಲು ಸಮಯವಿಲ್ಲದ ನಮಗೆ ಇನ್ನೂ ಕಥೆ, ಕಾದಂಬರಿ ಅಂತ ಓದೊಕೆ ಸಾಧ್ಯನಾ....! ಇದು ಕೇವಲ ಒಬ್ಬ ವಿದ್ಯಾರ್ಥಿಯ ಉತ್ತರವಲ್ಲ, ಬಹುತೇಕ ಎಲ್ಲರ ಅಂತರಂಗದಲ್ಲಿಯೂ ಅಡಗಿರುವ ಸತ್ಯ. ಯಾರೋ ಒಬ್ಬ ಧೈರ್ಯ ಮಾಡಿ ಹೇಳಿದ ಅಷ್ಟೇ! ಉಳಿದವರು ಮೇಷ್ಟ್ರು ನೊಂದುಕೊಂಡಾರು ಎಂಬ ಕರುಣೆಯಿಂದಲೋ / ಸುಖಾಸುಮ್ಮನೆ ಬೈಯಿಸಿಕೊಳ್ಳುವ ಉಸಾಬರಿ ನಮಗೆ ಬೇಡ ಎಂದೋ ಸುಮ್ಮನಿದ್ದರು. ಆದರೆ ಗುರುವಾಗಿ ನಾನು ಹಾಗೆ ಸುಮ್ಮನಿರಲು ಸಾಧ್ಯವಿಲ್ಲ.ಅವರಿಗೆಲ್ಲಾ ಪುಸ್ತಕ ಓದುವ ಅವಶ್ಯಕತೆ ಏನು ಎಂಬುದನ್ನು ಮನವರಿಕೆ ಮಾಡಿ ಕೊಡುವ ಜವಾಬ್ದಾರಿ ನನ್ನ ಮೇಲಿದ್ದ ಕಾರಣ ಪುಸ್ತಕ ಓದುವ ಅಭಿರುಚಿ ಬೆಳೆಸಿಕೊಳ್ಳಲು ಇರುವ ಅನಿವಾರ್ಯತೆಯನ್ನು ತಿಳಿಸತೊಡಗಿದೆ.

ಸಿ.ಎಸ್.ರಾಘವೇಂದ್ರ
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲೆ
ಮೈಸೂರು
ಮೊ.9036389640



ಪುಸ್ತಕಗಳು ನಮ್ಮ ವ್ಯಕ್ತಿತ್ವವನ್ನು ಬದಲಿಸಬಲ್ಲ ಅಮೂಲ್ಯ ರತ್ನಗಳು. ಓದಿನೊಂದಿಗೆ ಜ್ಞಾನದ ವಿಕಾಸವು ಆಗಬಲ್ಲ ಶಕ್ತಿ ಅವುಗಳಿಗಿದೆ. ಆದರೆ ಪ್ರಸ್ತುತ ದಿನಗಳಲ್ಲಿ ಓದುವವರ ಸಂಖ್ಯೆ ಕಡಿಮೆಯಾಗುತ್ತಾ ಬಂದಿರುವುದು ದುರಂತವೇ ಸರಿ. ಪಠ್ಯಕ್ರಮ, ಪರೀಕ್ಷೆ, ಅಂಕಗಳ ದೃಷ್ಟಿಗಳಿಂದಲೇ ಅಲ್ಪ ಸ್ವಲ್ಪ ಓದುವಿಕೆ ಉಳಿದುಕೊಂಡಿದೆ. ಇದು ಅಕ್ಷರಶಃ ಸತ್ಯ.

ಕಾಲ ಬದಲಾದಂತೆ ಮನುಷ್ಯನ ಆಲೋಚನೆಗಳು, ನಡವಳಿಕೆಗಳು ಬದಲಾಗುವುದು ಸರ್ವಸಾಮಾನ್ಯ ಹಾಗೂ ಅದು ಅನಿವಾರ್ಯವೂ ಹೌದು. ಆದರೆ ಆ ಬದಲಾವಣೆ ನಮ್ಮತನವನ್ನೇ ಕಳೆದುಕೊಳ್ಳುವಷ್ಟರ ಮಟ್ಟಿಗಿರಬಾರದು.ಪ್ರಸ್ತುತ ದಿನಗಳಲ್ಲಿ ಈ ಜಂಗಮವಾಣಿ (ಮೊಬೈಲ್) ಎಂಬ ಮಾಯೆಯಂತೂ ಬಹುತೇಕವಾಗಿ ಎಲ್ಲರನ್ನೂ ತನ್ನ ಅಧೀನದಲ್ಲಿರಿಸಿಕೊಂಡು ಬಂಧಿಯಾಗಿಸಿಕೊಂಡಿದೆ ಎಂದರೆ ಅದು ಅತಿಶಯೋಕ್ತಿ ಏನಲ್ಲ. ಚಿಕ್ಕ ಮಕ್ಕಳಿಂದ ಹಿಡಿದು ವಯಸ್ಸಾದವರನ್ನು ಸೆಳೆಯಬಲ್ಲ ಚಾಕಚಕ್ಯತೆಯನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡ ಈ ಜಂಗಮವಾಣಿ ಪುಸ್ತಕ ಓದುವ ಅಭಿರುಚಿಯನ್ನು ಕೂಡ ತಿಂದು ತೇಗಿ ಹಾಕಿದೆ.ಇದು ಕಟುವಾದ ನುಡಿಯಾದರೂ ವಾಸ್ತವವೇ ಆಗಿದೆ.

ಒಂದು ಪುಸ್ತಕ ಜೀವನವನ್ನು ಬದಲಿಸಲು, ವ್ಯಕ್ತಿತ್ವವನ್ನು ಮಾರ್ಪಡಿಸಲು ಸಾಧ್ಯ.ಪುಸ್ತಕ ಓದಿದಾಗ ಅಥವಾ ಸಿನಿಮಾ ನೋಡಿದಾಗ ಅಂದುಕೊಳ್ಳುವುದು ಆ ಕ್ಷಣಕ್ಕೆ ಮಾತ್ರ , ಇನ್ನೂ ಹೆಚ್ಚೆಂದರೆ ಅದರ ಗುಂಗು ಇರುವವರೆಗೆ ಮಾತ್ರ ಎಂದು ಹೇಳಲಾಗುತ್ತದೆ.ಆದರೆ ಇದೇ ನಿಜವಲ್ಲ ಎಂದು ತಿಳಿಸಲು ಮೂರು ಘಟನೆಗಳು ನೆನಪಾಗುತ್ತದೆ.

ಘಟನೆ ಒಂದು–ಪ್ರಸಿದ್ಧ ಇಂಗ್ಲಿಷ್ ಪ್ರಾಧ್ಯಾಪಕರೊಬ್ಬರು ತಮ್ಮ ಮಡದಿಯೊಂದಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಒಂದು ಕಡೆ ರೈಲು ನಿಂತಿತು. ಆ ಪ್ರಾಧ್ಯಾಪಕರ ಮಡದಿ ತನಗೆ ಕನ್ನಡ ಪುಸ್ತಕ ತರುವಂತೆ ಒತ್ತಾಯ ಮಾಡಿದ್ದರಿಂದ ಒಲ್ಲದ ಮನಸ್ಸಿನಿಂದ ಆ ಪ್ರಾಧ್ಯಾಪಕರು ಪುಸ್ತಕ ಮಾರುತ್ತಿದ್ದ ಅಂಗಡಿಗೆ ಹೋಗಿ ಯಾವುದಾದರೂ ಒಂದು ಕನ್ನಡ ಪುಸ್ತಕ ಕೊಡಯ್ಯ ಏನಿಲ್ಲದಿದ್ದರೂ, ರೈಲ್ವೆ ಡೈರಿ ಆದರೂ ಪರವಾಗಿಲ್ಲ ಕೊಡು, ಕನ್ನಡದಾಗಿದ್ರೆ ಸಾಕು ಎಂದು ತಾತ್ಸಾರದಿಂದಲೇ ಕೇಳಿದರು. ಅಂಗಡಿಯಾತ ಒಂದು ಪುಸ್ತಕ ಕೊಟ್ಟ, ಆ ಪುಸ್ತಕವನ್ನು ತಂದು ತನ್ನ ಮಡದಿಯ ಮುಂದೆ ಹಿಡಿದು ಓದು. ಇನ್ನೊಮ್ಮೆ ನನ್ನನ್ನು ಕನ್ನಡ ಪುಸ್ತಕ ತರಲು ಹೇಳಬೇಡ ಎಂದು ಕಠೋರವಾಗಿ ನುಡಿದರು. ಅವರ ಮಡದಿ ಸಹನೆಯಿಂದ ಆ ಪುಸ್ತಕವನ್ನು ನೀವೊಮ್ಮೆ ಓದಿ ಎಂದು ಇನ್ನಿಲ್ಲದ ಒತ್ತಾಯ ಮಾಡಿದರು. ಸರಿ ಪುಸ್ತಕ ತಂದ ತಪ್ಪಿಗೆ ಆ ಸಾಹಿತಿ ಮಡದಿಯನ್ನು ನೋಯಿಸಲು ಇಚ್ಛೆಪಡದೆ ಪುಸ್ತಕವನ್ನು ಇಂಗ್ಲಿಷ್ ದಿನಪತ್ರಿಕೆಯ ಒಳಗಿಟ್ಟುಕೊಂಡು ಓದಲು ಪ್ರಾರಂಭಿಸಿದರು (ಕನ್ನಡ ಪುಸ್ತಕ ನಾನು ಓದುವುದನ್ನು ಯಾರಾದರೂ ನೋಡಿದರೆ ಅವಮಾನ ಎಂದು ಭಾವಿಸಿದ್ದರೋ ಏನೋ!) ಪುಸ್ತಕವನ್ನು ಓದುತ್ತಾ ಹೋದಂತೆ ತಮ್ಮನ್ನೇ ತಾವು ಮರೆತಂತೆ ಓದಲು ತೊಡಗಿದರು. ಹಾಗೆ ಓದಿನಲ್ಲಿ ತಲ್ಲೀನರಾಗಿ ಮರೆಮಾಡಿದ್ದ ಇಂಗ್ಲಿಷ್ ಪತ್ರಿಕೆ ಜಾರಿ ಕೆಳಗೆ ಬಿದ್ದರೂ ತಾವು ಹಿಡಿದ ಪುಸ್ತಕವನ್ನು ಓದಿ ಮುಗಿಸಿದರು. ಓದಿದ ನಂತರ ಅವರು ಹೇಳಿದ ಮಾತೆಂದರೆ – ಕನ್ನಡದಲ್ಲು ಹೀಗೂ ಬರೆಯಬಹುದಾ?! ಅಲ್ಲಿಂದ ಮುಂದೆ ಆದದ್ದು ಇತಿಹಾಸ.... ಆ ಸಾಹಿತಿ ಅಲ್ಲಿಂದ ಮುಂದೆ ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದರಂತೆ. ಕನ್ನಡಕ್ಕೆ ಒಬ್ಬ ಸಾಹಿತಿಯನ್ನು ಕೊಟ್ಟ ಆ ಪುಸ್ತಕ **ಅನಕೃ ಅವರ ಸಂಧ್ಯಾರಾಗ**. ಆ ಸಾಹಿತಿ ಬೇರೆ ಯಾರು ಅಲ್ಲ ಹಾಸ್ಯಸಾಹಿತಿ ಎಂದು ಪ್ರಸಿದ್ಧರಾದ **ಬೀಚಿ (ಭೀಮಸೇನರಾವ್)**.

ಘಟನೆ ಎರಡು–ರಾಜಕುಮಾರ್ ಕನ್ನಡಿಗರ ಪಾಲಿಗೆ ಆರಾಧ್ಯದೈವ. ಅವರ ಬಂಗಾರದ ಮನುಷ್ಯ ಸಿನಿಮಾ ನೋಡಿ ಪಟ್ಟಣಗಳಿಂದ ಜನರು ತಮ್ಮ ಹಳ್ಳಿಗಳಿಗೆ ಹೋಗಿ ಕೃಷಿ ಮಾಡುತ್ತಾ ಜೀವನ ಮಾಡಿದರು. ಆ ಸಿನಿಮಾದ ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ... ಈ ಹಾಡು ಎಲ್ಲಾ ಕಾಲಕ್ಕೂ ಎಲ್ಲಾ ಜನರಿಗೂ ಪ್ರೇರಣೆ ನೀಡಬಲ್ಲದು. ಹಲವಾರು ಜನರ ಬಾಳಲ್ಲಿ ಹೊಸ ಚೈತನ್ಯವನ್ನು ತುಂಬಿದ ಬಂಗಾರದ ಮನುಷ್ಯ ಚಲನಚಿತ್ರ ಮೂಡಿಬರಲು ಕಾರಣವಾದದ್ದು ಒಂದು ಪುಸ್ತಕವೇ. ಅದು **ಟಿ.ಕೆ. ರಾಮರಾವ್** ಅವರು ಬರೆದಿರುವ ಕಾದಂಬರಿ **'ಬಂಗಾರದ ಮನುಷ್ಯ'**.

ಘಟನೆ ಮೂರು– ಮೈಸೂರಿನ ಕುಕ್ಕರಹಳ್ಳಿ ಕೆರೆ ವಾಯುವಿಹಾರಿಗಳ ನೆಚ್ಚಿನ ತಾಣ. ಒಮ್ಮೆ ಆ ಕುಕ್ಕರಹಳ್ಳಿ ಕೆರೆಯಲ್ಲಿ ವಾಯುವಿಹಾರ ಮಾಡುತ್ತಿದ್ದ ಹಿರಿಯರೊಬ್ಬರಿಗೆ ತರುಣನೊಬ್ಬ ಏಕಾಂಗಿಯಾಗಿ ಕುಳಿತು ಚಿಂತಿಸುತ್ತಾ, ಕಣ್ಣೀರು ಹಾಕುತ್ತಿದ್ದುದು ಕಾಣಿಸಿತು. ಆ ಹಿರಿಯರು ಜೀವನದಲ್ಲಿ ಕಷ್ಟ, ಸುಖ ಅರಿತವರು, ಹೋಗಿ ಆ ತರುಣನ ಬಳಿ ಕುಳಿತು ಯಾರಪ್ಪ ನೀನು, ಏನಾಯಿತು, ಏಕೆ ಅಳುತ್ತಿರುವೆ... ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿದರಂತೆ. ಅಳುತ್ತಿದ್ದ ತರುಣನಿಗೆ ಈ ಅಪರಿಚಿತರ ಮಾತು ಮತ್ತಷ್ಟು ಕೆರಳುವಂತೆ ಮಾಡಿತು. ನಿಮಗ್ಯಾಕೆ, ಯಾರ್ರೀ ನೀವು, ಸುಮ್ಮನೆ ಹೋಗ್ರಿ... ಎಂದು ದಬಾಯಿಸಿದನಂತೆ. ಆ ಹಿರಿಯರು ಎದ್ದು ಹೋದರು. ಮತ್ತೆ ಬಂದು, ಆ ತರುಣನಿಗೆ ದುಃಖ ಹಂಚಿಕೊಂಡರೆ ಕಡಿಮೆಯಾಗುತ್ತದೆ. ನಾನು ನಿಮ್ಮ ಅಣ್ಣನಿದ್ದಂತೆ ಹೇಳಪ್ಪಾ ಏನಾಯಿತು..... ಎಂದು ಕೇಳಿದ್ರಂತೆ. ಆ ತರುಣನಿಗೆ ಈ ಬಗೆಯ ಮಾತುಗಳು ಸಮಾಧಾನ ತಂದು, ತನ್ನ ಕಷ್ಟವನ್ನು ಆ ಹಿರಿಯರೊಂದಿಗೆ ಹಂಚಿಕೊಂಡರಂತೆ. ಆಗ ಆ ಹಿರಿಯರು ತರುಣನನ್ನು ಸಂತೈಸಿದರು. ಮುಂದೆ ಅದೇ ತರುಣ ಇಡೀ ಸಮಾಜಕ್ಕೆ ಬದುಕುವ ಬಗ್ಗೆ ತಿಳಿಸಿಕೊಟ್ಟದ್ದು ಇತಿಹಾಸ ಆ ತರುಣ ಬೇರೆ ಯಾರು ಅಲ್ಲ **ಮಂಕುತಿಮ್ಮನ ಕಗ್ಗವನ್ನು ಉಣಬಡಿಸಿದ ಡಿವಿಜಿ**, ಆ ಹಿರಿಯರು ಬೇರ್ಯಾರು ಅಲ್ಲ **ಕುವೆಂಪು** ಅಂತಹ ಅನೇಕ ವಿದ್ಯಾರ್ಥಿಗಳ ಬದುಕ ಬದಲಿಸಿದಂತಹ ಕನ್ನಡದ ಮೊಟ್ಟಮೊದಲ ಪ್ರಾಧ್ಯಾಪಕರಾದ **ಟಿ.ಎಸ್.ವೆಂಕಣ್ಣಯ್ಯನವರು**. ಈ ಪ್ರಸಂಗವನ್ನು ಟಿ.ಎಸ್.ವೆಂಕಣ್ಣಯ್ಯನವರ ತಮ್ಮನಾದ **ತ.ಸು. ಶಾಮರಾಯರು 'ಮೂರು ತಲೆಮಾರು'** ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ.

ಈ ಮೂರು ಘಟನೆಗಳು ಕೇವಲ ಉದಾಹರಣೆಗಳು ಮಾತ್ರ. ಇಂತಹ ಎಷ್ಟೋ ಪುಸ್ತಕಗಳು, ಘಟನೆಗಳು ವ್ಯಕ್ತಿಯ ಬಾಳಿನಲ್ಲಿ ಬದಲಾವಣೆಗಳನ್ನು ತರಬಲ್ಲವು ವ್ಯಕ್ತಿಯ ವ್ಯಕ್ತಿತ್ವವನ್ನು ಬದಲಿಸಬಲ್ಲವು. ಕುವೆಂಪು ಅವರ ಕೃತಿಗಳನ್ನು ಓದಿದರೆ ಪ್ರಕೃತಿಯ ಬಗೆಗೆ ಪ್ರೀತಿ, ಬದುಕಿನ ಬಗ್ಗೆ ವೈಚಾರಿಕತೆಯ ಪ್ರಜ್ಞೆ ಮೂಡುತ್ತದೆ.ಡಿವಿಜಿ ಅವರ ಮಂಕುತಿಮ್ಮನ ಕಗ್ಗ ಅನೇಕರಿಗೆ ಸ್ಫೂರ್ತಿ ನೀಡಬಲ್ಲ ಕೃತಿಯಾಗಿದೆ. ಕಾರಂತರ ಕಾದಂಬರಿಗಳನ್ನು ಓದಿದಾಗ ಜೀವನದ ಬಗೆಗಿನ ಪ್ರೀತಿ ಉಂಟಾಗುತ್ತದೆ.ಬೆಟ್ಟದ ಜೀವ, ಮರಳಿಮಣ್ಣಿಗೆ ,ಚೋಮನ ದುಡಿ, ಮೂಕಜ್ಜಿಯ ಕನಸುಗಳು ಈ ಕಾದಂಬರಿಗಳು ಓದುತ್ತಾ ಹೋದಂತೆ ಹೊಸದೊಂದು ಲೋಕಕ್ಕೆ ನಮ್ಮನ್ನು ಕೊಂಡ್ಯೊಯ್ಯಬಲ್ಲದು. ಕಾರಂತರ ಅನೇಕ ಅದ್ಭುತ ಕಾದಂಬರಿಗಳಲ್ಲಿ **'ಚಿಗುರಿದ ಕನಸು'** ಕಾದಂಬರಿಯು ಒಂದು. ಈ ಕಾದಂಬರಿ ಸಿನಿಮಾ ರೂಪದಲ್ಲಿ ಬಂತು. **ಡಾ. ಶಿವರಾಜ್‌ಕುಮಾರ್** ಅವರು ತಮ್ಮ ಅಮೋಘ ನಟನೆ ತೋರಿದರೂ ಕೂಡ ಆ ಸಿನಿಮಾಗೆ ಸಿಗಬೇಕಾದ ಮನ್ನಣೆ ಸಿಗಲಿಲ್ಲ. ವಿಪರ್ಯಾಸ ಎಂದರೆ ಇದೇ ಕಾದಂಬರಿಯ ಕಥೆಯನ್ನು ಇಟ್ಟುಕೊಂಡು ಬಾಲಿವುಡ್‌ನಲ್ಲಿ ಸಿನಿಮಾ ಬಂದಾಗ ಇಡೀ ದೇಶದಾದ್ಯಂತ ಪ್ರೇಕ್ಷಕರು ಸಿನಿಮಾ ಮೆಚ್ಚಿಕೊಂಡು ದೊಡ್ಡ ಗೆಲುವನ್ನು ತಂದುಕೊಟ್ಟರು. ಆ ಸಿನಿಮಾವೇ ಶಾರುಖ್ ಖಾನ್ ಅಭಿನಯದ **'ಸ್ವದೇಶ್'** ಸಿನಿಮಾ.

ಬೇಂದ್ರೆ ಅವರ ಕವನಗಳಲ್ಲಿ ಜೀವನದಲ್ಲಿ ಎದುರಾಗಬಹುದಾದ ಕಷ್ಟಗಳನ್ನು ಎದುರಿಸಿ ಬಾಳೋದು ಹೇಗೆ ಎಂಬುದನ್ನು ತಿಳಿಯಬಹುದು.ಅವರ ಬದುಕೇ ಸ್ಫೂರ್ತಿದಾಯಕವಾದುದು. ಇನ್ನೂ ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ಎಸ್.ಎಲ್. ಭೈರಪ್ಪ ಅವರ ಕಾದಂಬರಿಗಳನ್ನು ಓದುತ್ತಾ ಹೋದಂತೆ ಸಮಾಜದಲ್ಲಿರುವಂತಹ ಜ್ವಲಂತ ಸಮಸ್ಯೆಗಳ ಚಿತ್ರಣ ಸಿಗುತ್ತದೆ. ತಬ್ಬಲಿ ನೀನಾದೆ ಮಗನೆ ಕಾದಂಬರಿ ಗೋವುಗಳ ಸಂರಕ್ಷಣೆಯೊಂದಿಗೆ ತಾಯಿ – ಮಗನ ಬಾಂಧವ್ಯವನ್ನು ಚಿತ್ರಿಸುತ್ತದೆ. ಅವರ ಪ್ರಸಿದ್ಧ ಕಾದಂಬರಿಗಳು ವಂಶವೃಕ್ಷ, ಮಂದ್ರ, ದೂರ ಸರಿದವರು, ಕವಲು, ದಾಟು, ಜಲಪಾತ, ಉತ್ತರಕಾಂಡ ಹೆಚ್ಚೆಚ್ಚು ಮುದ್ರಣಗಳನ್ನು ಕಂಡು ಅವರನ್ನು ಮತ್ತಷ್ಟು ಜನಪ್ರಿಯವಾಗಿಸಿತು.ಜೊತೆಗೆ ಟೀಕೆಗಳಿಗೂ ಗುರಿಯಾಯಿತು. ಬಹುಶಃ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಟೀಕೆಗೆ ಗುರಿಯಾದವರು ಎಂದರೆ ಭೈರಪ್ಪ ಅವರು.ಅವರ ಕೃತಿಗಳನ್ನು ಓದಿ ವಿಮರ್ಶೆ ಮಾಡುವವರಿಗಿಂತ ಓದದೆ ತೆಗಳುವವರು ಹೆಚ್ಚು. ಆದರೂ ಅವರಿಗಿರುವ ಲಕ್ಷಾಂತರ ಅಭಿಮಾನಿಗಳ, ಓದುಗರ ಸಂಖ್ಯೆಗೇನು ಕಡಿಮೆ ಇಲ್ಲ.

ಬೆಂದರೆ ಬೇಂದ್ರೆಯಾದಾನು
ಬೈಯಿಸಿಕೊಂಡರೆ ಭೈರಪ್ಪನಾದೇನು

ಎಂಬ ಮಾತೇ ಪ್ರಚಲಿತದಲ್ಲಿದೆ.

ರವಿ ಬೆಳಗೆರೆ ಅವರ ಬಗ್ಗೆ ಏನೇ ಭಿನ್ನಾಭಿಪ್ರಾಯಗಳಿದ್ದರೂ ಅವರ ಹೇಳಿ ಹೋಗು ಕಾರಣ ಅತಿ ಹೆಚ್ಚು ಜನರ ಮನಸೆಳೆದ ಕಾದಂಬರಿಗಳಲ್ಲಿ ಒಂದು. ಈ ಕಾದಂಬರಿಯಲ್ಲಿ ಬರುವ ಹಿಮವಂತನಂತೆ ನಾನಾಗಬೇಕೆಂದು ಗಂಡು ಮಕ್ಕಳು ಹಂಬಲಿಸಿದರೆ, ಹಿಮವಂತನಂತಹ ಪ್ರೇಮಿ ನಮಗಿರಬೇಕೆಂದು ಹೆಣ್ಣು ಮಕ್ಕಳು ಅಪೇಕ್ಷಿಸಿದರು. ಅಷ್ಟರ ಮಟ್ಟಿಗೆ ಪ್ರಭಾವ ಬೀರಿದ ಕಾದಂಬರಿ ಇದಾಗಿತ್ತು.

ಡಾ.ಗುರುರಾಜ ಕರ್ಜಗಿ ಅವರ **'ಕರುಣಾಳು ಬಾ ಬೆಳಕೆ'** ಹೆಸರಿನಲ್ಲಿ ಪ್ರಕಟವಾಗಿರುವ ಹದಿನೈದು ಭಾಗದ ಪುಸ್ತಕಗಳು ಒಂದೊಂದು ಕೃತಿಯಲ್ಲಿಯೂ ಅನೇಕ ಕಥೆಗಳಿದ್ದು ಅವು ಬದುಕಿಗೆ, ಸಕಾರಾತ್ಮಕ ಆಲೋಚನೆಗಳಿಗೆ ದಾರಿದೀಪವಾಗಬಲ್ಲವಂತಹವು.

ಎಸ್.ಷಡಕ್ಷರಿ ಅವರ ಕ್ಷಣ ಹೊತ್ತು, ಅಣಿ ಮುತ್ತು ಹೆಸರಿನ ಅನೇಕ ಬಿಡಿಭಾಗದ ಕೃತಿಗಳು ಉತ್ತಮ ಸಂದೇಶವನ್ನು ಸಾರಬಲ್ಲಂತಹ ಅಂಶಗಳನ್ನು ಒಳಗೊಂಡಿವೆ.

ರಮೇಶ್ ಅರವಿಂದ್ ಅವರು ಬರೆದಿರುವ **'ಪ್ರೀತಿಯಿಂದ ರಮೇಶ್'** ಯಶಸ್ಸಿನ ಸರಳ ಸೂತ್ರಗಳು ಎಂಬ ಪುಸ್ತಕ ಜೀವನದಲ್ಲಿ ಆತ್ಮಸ್ಥೈರ್ಯ ಕಳೆದುಕೊಂಡ ಯಾವುದೇ ವ್ಯಕ್ತಿಗೂ ಆತ್ಮವಿಶ್ವಾಸ ನೀಡಬಲ್ಲ ಕೃತಿಯಾಗಿದೆ. ಬದುಕಲ್ಲಿ ಏನೇ ಆದರೂ ಛಲದಿಂದ ಮುನ್ನುಗ್ಗುವಂತಹ ಪ್ರೇರಣೆ ನೀಡುವ ಕೃತಿ ಇದಾಗಿದೆ. ಇವಿಷ್ಟೇ ಅಲ್ಲ ಹೆಚ್ಚು ಪ್ರಭಾವ, ಪ್ರೇರಣೆಯನ್ನು ಉಂಟು ಮಾಡಬಲ್ಲ ಅನೇಕ ಕಥೆ, ಕಾದಂಬರಿ, ಕವನಗಳು ಇವೆ. ಆದರೆ ಅದನ್ನು ಓದುವ ಮನಸ್ಸು ಮಾಡಬೇಕು.ನಮ್ಮ ಬದುಕಲ್ಲಿನ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲಂತಹ ಕೃತಿಗಳು ಕನ್ನಡ ಸಾಹಿತ್ಯದಲ್ಲಿವೆ.

ಎರಡು ಸಾವಿರ ವರ್ಷಗಳ ಸುದೀರ್ಘವಾದ ಇತಿಹಾಸವನ್ನು ಹೊಂದಿರುವ ಕನ್ನಡ ಭಾಷೆಗೆ ಅನೇಕ ಸಾಧಕರ, ಮಹಾನ್ ಕವಿಗಳ ಕೊಡುಗೆ ಅಪಾರವಾಗಿದೆ. ಆದಿಕವಿ ಪಂಪ, ಪೊನ್ನ, ರನ್ನ, ನಾಗವರ್ಮ, ನಾಗಚಂದ್ರ ಮೊದಲಾದ ಪ್ರಮುಖ ಹಳಗನ್ನಡ ಕವಿಗಳು, ಜೇಡರ ದಾಸಿಮಯ್ಯ, ಬಸವಣ್ಣ, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಅಲ್ಲಮಪ್ರಭು, ಆಯ್ದಕ್ಕಿಮಾರಯ್ಯ ಮೊದಲಾದ ಶರಣರ ಕಾಲದ ವಚನ ಸಾಹಿತ್ಯದ ಕವಿಗಳನ್ನು, ಹರಿಹರ, ರಾಘವಾಂಕ, ಕುಮಾರವ್ಯಾಸ, ಕುಮಾರ ವಾಲ್ಮೀಕಿ, ರತ್ನಾಕರ ವರ್ಣಿ, ಲಕ್ಷ್ಮೀಶ ಮೊದಲಾದ ನಡುಗನ್ನಡ ಕವಿಗಳನ್ನೂ, ವ್ಯಾಸರಾಯರು ಪುರಂದರದಾಸ, ಕನಕದಾಸ, ವಾದಿರಾಜರು, ವಿಜಯದಾಸರು ಮೊದಲಾದ ದಾಸ ಸಾಹಿತ್ಯದ ದಾಸ ಕವಿಗಳನ್ನು ಮುದ್ದಣ, ಬಿ.ಎಂ.ಶ್ರೀ, ಟಿ.ಎಸ್. ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ಕುವೆಂಪು, ಬೇಂದ್ರೆ, ಮಾಸ್ತಿ, ಗೋಕಾಕ್, ಚಂದ್ರಶೇಖರ ಕಂಬಾರರು ,ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಎಸ್.ಎಲ್.ಭೈರಪ್ಪ, ಡಿ.ವಿ.ಗುಂಡಪ್ಪ, ಪೂರ್ಣಚಂದ್ರ ತೇಜಸ್ವಿ, ಪಿ.ಲಂಕೇಶ್, ತ್ರಿವೇಣಿ, ವೈದೇಹಿ, ಕಮಲಾಹಂಪನ, ವಿಜಯಾದಬ್ಬೆ, ವಾಣಿ, ಸಾಯಿಸುತೆ, ದೇವನೂರ ಮಹಾದೇವ, ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ ಇನ್ನೂ ಮೊದಲಾದ ಪ್ರಮುಖ ಸಾಹಿತಿಗಳ ಸಾಹಿತ್ಯದಿಂದ ಕನ್ನಡ ಸಾಹಿತ್ಯ ಜಗತ್ತು ಸಂಪದ್ಭರಿತವಾಗಿದೆ. ಇವರ ಕೃತಿಗಳಲ್ಲಿ ಕನಿಷ್ಠ ಪಕ್ಷ ಒಂದು ಕೃತಿಗಳನ್ನಾದರೂ ಓದಿ ನಮ್ಮ ಬದುಕಿಗೆ ಬೇಕಾದ ಮೌಲ್ಯಗಳನ್ನು ಅಳವಡಿಸಿಕೊಳ್ಳಬಹುದು.

ಇತ್ತೀಚೆಗೆ ರಾಷ್ಟ್ರೀಯ ವಿಚಾರ ಸಂಕಿರಣವೊಂದರಲ್ಲಿ ಪ್ರಸಿದ್ಧ ಮಹಿಳಾ ಸಾಹಿತಿಯಾದ ಡಾ.ತಮಿಳು ಸೆಲ್ವಿ ಮೇಡಂ ಅವರು ಹೇಳಿದ ವಿಚಾರವೊಂದು ಹೆಚ್ಚು ಗಮನ ಸೆಳೆಯಿತು. ಅವರನ್ನು ಭೇಟಿಯಾಗಲು ಜರ್ಮನ್ ದೇಶದಿಂದ ಸಂಶೋಧನಾ ವಿದ್ಯಾರ್ಥಿಗಳ ತಂಡವೊಂದು ಬಂದಿತ್ತು. ಅವರು ಮಂಗರಾಜ ವಿರಚಿತ ಖಗೇಂದ್ರಮಣಿ ದರ್ಪಣ ಕೃತಿಯನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿ ಕೊಡಿ/ಯಾರಾದರೂ ಕನ್ನಡದಿಂದ ಇಂಗ್ಲಿಷ್‌ಗೆ ಭಾಷಾಂತರ ಮಾಡುವವರನ್ನು ತಿಳಿಸಿಕೊಡಿ ಎಂದು ಕೇಳಿದರಂತೆ. ಕಾರಣ ಖಗೇಂದ್ರಮಣಿ ದರ್ಪಣ ಒಂದು ವೈದ್ಯ ಕೃತಿ. ಅದರಲ್ಲಿ ವಿವಿಧ ಕಾಯಿಲೆಗಳಿಗೆ ಯಾವ ಔಷಧಿಗಳನ್ನು ತೆಗೆದುಕೊಳ್ಳಬೇಕೆಂಬ ವಿಷಯದ ಕುರಿತು ಮಾಹಿತಿಗಳಿವೆ. ಅದನ್ನು ಆ ಜರ್ಮನ್ ವಿದ್ಯಾರ್ಥಿಗಳು ಇಂಗ್ಲಿಷ್‌ಗೆ ಭಾಷಾಂತರ ಮಾಡಿಸಿ ಅದರಲ್ಲಿರುವ ಮಾಹಿತಿಗಳನ್ನು ಪಡೆದು ಹಕ್ಕುಸ್ವಾಮ್ಯ (ಪೇಟೆಂಟ್) ಪಡೆಯುವ ಉದ್ದೇಶದಿಂದ ಬಂದಿದ್ದರಂತೆ. ನೋಡಿ ಎಂತಹ ವಿಪರ್ಯಾಸ! ಕನ್ನಡದ ಕೃತಿ ಬಗ್ಗೆ ಜರ್ಮನ್ ವಿದ್ಯಾರ್ಥಿಗಳು ತಿಳಿದು ಅದನ್ನು ಸದ್ಬಳಕೆ ಮಾಡಿಕೊಳ್ಳುವ ಉದ್ದೇಶವನ್ನು ಇಟ್ಟುಕೊಂಡು ಬಂದಿದ್ದಾರೆ. ಆದರೆ ನಮಲ್ಲಿ ಎಷ್ಟು ಜನರಿಗೆ ಆ ಕೃತಿಯ ಬಗ್ಗೆ ಗೊತ್ತು?! ಇದು ನಮ್ಮ ಪರಿಸ್ಥಿತಿ.ನಮ್ಮತನವನ್ನು ನಾವೇ ಗುರುತಿಸಲು ಅಸಮರ್ಥರಾಗುತ್ತಿದ್ದೇವೆ.

ಪುಸ್ತಕ ಓದುವುದರಿಂದ ಕೇವಲ ಅಂಕಗಳಿಕೆ ಮಾತ್ರ ಆಗುತ್ತದೆ ಎಂದು ಭಾವಿಸುವುದು ತಪ್ಪು ಪುಸ್ತಕ ನಮ್ಮ ಬದುಕನ್ನು ಬದಲಿಸಬಲ್ಲದು, ಅನೇಕ ಬಾರಿ ಅದು ನಮ್ಮ ಕತ್ತಲೆಯ ಬಾಳಿಗೆ ನಂದಾದೀಪವಾಗಬಲ್ಲದು. ಓದುವ ಹವ್ಯಾಸ ಬೆಳೆಯಿಸಿಕೊಳ್ಳಬೇಕು. ಓದುವ ರುಚಿ ನಿಮಗೆ ಬಂದರೆ ಅದು ನಿಮ್ಮ ಎಲ್ಲಾ ಸಾಮಾಜಿಕ ಜಾಲತಾಣಗಳು (ಮುಖಪುಟ, ವಾಟ್ಸ್ ಅಪ್, ಇನ್ಸ್ ಸ್ಟಾಗ್ರಾಂ ಇನ್ನಿತರ ಸಾಮಾಜಿಕ ಮಾಧ್ಯಮಗಳು) ಕೊಡುವ ಖುಷಿಗಿಂತ ಹತ್ತುಪಟ್ಟು ಸಂತೋಷವನ್ನು, ಜ್ಞಾನವನ್ನು, ತಿಳುವಳಿಕೆಯನ್ನು ನೀಡುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ವ್ಯಕ್ತಿತ್ವವನ್ನು ಬದಲಿಸಬಲ್ಲವಂತಹ ಕೃತಿಗಳು ಪ್ರಭಾವವನ್ನು, ಪ್ರೇರಣೆಯನ್ನು ಬೀರುತ್ತವೆ.ಒಮ್ಮೆ ಓದುವ ಅಭಿರುಚಿಯನ್ನು ಮೈಗಂಟಿಸಿಕೊಂಡು ನೋಡಿ, ನಿಮ್ಮನ್ನು ಉನ್ನತ ಸ್ಥಾನಕ್ಕೆ ಕರೆದುಕೊಂಡು ಹೋಗುವ ಕೆಲಸವನ್ನು ಪುಸ್ತಕಗಳು ಮಾಡುತ್ತವೆ, ಜೊತೆಗೆ ನಮ್ಮ ಬದುಕಿಗೆ ಬೆಳಕು ನೀಡುವ ಕೈದೀವಿಗೆಗಳಾಗುತ್ತವೆ. ■ ■ ■

ಕರ್ನಾಟಕ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದ 1,001 ಅಭ್ಯರ್ಥಿಗಳ ಪೈಕಿ 345 ಮಂದಿ ವಿರುದ್ಧ ಕ್ರಿಮಿನಲ್ ಕೇಸ್

ನವದೆಹಲಿ: ಇತ್ತೀಚೆಗೆ ನಡೆದ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ 1,001 ಅಭ್ಯರ್ಥಿಗಳ ಪೈಕಿ ಬಿಜೆಪಿ, ಕಾಂಗ್ರೆಸ್, ಎಎಪಿ ಮತ್ತು ಜೆಡಿಎಸ್ ಸೇರಿದಂತೆ 8 ಪಕ್ಷಗಳಿಗೆ ಸೇರಿದ 345(ಶೇ. 34) ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿವೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್(ಎಡಿಆರ್) ವರದಿ ತಿಳಿಸಿದೆ.

ಎಂಟು ರಾಜಕೀಯ ಪಕ್ಷಗಳಿಗೆ ಸೇರಿದ 1,001 ಅಭ್ಯರ್ಥಿಗಳಲ್ಲಿ 220(ಶೇ. 22) ಮಂದಿ ತಮ್ಮ ವಿರುದ್ಧ ಗಂಭೀರ ಕ್ರಿಮಿನಲ್ ಮೊಕದ್ದಮೆಗಳಿವೆ ಎಂದು ಘೋಷಿಸಿಕೊಂಡಿದ್ದಾರೆ. ಕ್ರಿಮಿನಲ್ ಪ್ರಕರಣಗಳಿರುವ 345 ಅಭ್ಯರ್ಥಿಗಳಲ್ಲಿ 287(ಶೇ.83) ಅಭ್ಯರ್ಥಿಗಳು ಕಾರಣಗಳನ್ನು ನೀಡಿದ್ದಾರೆ. ಗಂಭೀರ ಅಪರಾಧ ಪ್ರಕರಣಗಳಿರುವ 220 ಅಭ್ಯರ್ಥಿಗಳ ಪೈಕಿ 191 ಅಭ್ಯರ್ಥಿಗಳು ಕಾರಣಗಳನ್ನು ನೀಡಿದ್ದರೆ 58 ಅಭ್ಯರ್ಥಿಗಳು ಯಾವುದೇ ಕಾರಣಗಳನ್ನು ನೀಡಿಲ್ಲ ಎಂದು ವರದಿ ಹೇಳಿದೆ.

ವರದಿ ಪ್ರಕಾರ, ಚಿತ್ತಾಪುರ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿದ್ದ ಮಣಿಕಂಠ ರಾಥೋಡ್ ವಿರುದ್ಧ 45 ಪ್ರಕರಣಗಳು ದಾಖಲಾಗಿದ್ದು, 15 ಪ್ರಕರಣಗಳು ಗಂಭೀರ ಸ್ವರೂಪದ್ದಾಗಿವೆ. ಹಾಲಿ ಸಚಿವ ಹಾಗೂ ಬಳ್ಳಾರಿಯಿಂದ 3 ಬಾರಿ ಶಾಸಕರಾಗಿರುವ ಬಿ.ನಾಗೇಂದ್ರ ಅವರ ವಿರುದ್ಧ 42 ಗಂಭೀರ ಸ್ವರೂಪದ ಪ್ರಕರಣಗಳು ದಾಖಲಾಗಿವೆ. ಕ್ರಿಮಿನಲ್ ಹಿನ್ನೆಲೆಯುಳ್ಳ 123 ಕಾಂಗ್ರೆಸ್ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಿದ್ದು, ಬಿಜೆಪಿಯಿಂದ 96, ಜನತಾದಳ–ಸೆಕ್ಯುಲರ್‌ನಿಂದ 71, ಎಎಪಿ 48, ಬಿಎಸ್‌ಪಿ, ಎಐಎಂಐಎಂ ಮತ್ತು ಸಿಪಿಐನಿಂದ ತಲಾ ಇಬ್ಬರು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ ಎಂದು ವರದಿ ತಿಳಿಸಿದೆ.

ಪಶ್ಚಿಮ ಬಂಗಾಳದ ಕಾಂಗ್ರೆಸ್ ಶಾಸಕ ಟಿಎಂಸಿ ಸೇರ್ಪಡೆ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನ ಸಭೆಯ ಏಕೈಕ ಕಾಂಗ್ರೆಸ್ ಶಾಸಕ ಬೇರಾನ್ ಬಿಸ್ವಾಸ್ ಅವರು ಸೋಮವಾರ ಪಶ್ಚಿಮ ಮೇದಿನಿಪುರ ಜಿಲ್ಲೆಯಲ್ಲಿ ಆಡಳಿತ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಸಮ್ಮುಖದಲ್ಲಿ ಟಿಎಂಸಿಗೆ ಸೇರ್ಪಡೆಯಾದರು.

ಮುರ್ಷಿದಾಬಾದ್ ಜಿಲ್ಲೆಯ ಅಲ್ಪಸಂಖ್ಯಾತ ಪ್ರಾಬಲ್ಯದ ಸಾಗರ್ದಿಘಿ ಕ್ಷೇತ್ರದ ಶಾಸಕ ಬಿಸ್ವಾಸ್ ಅವರು ಕಾಂಗ್ರೆಸ್ ತೊರೆದು ಇಂದು ಟಿಎಂಸಿ ಸೇರಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಮಂಗಳವಾರ 30 ಮೇ 2023

ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದು ಗ್ಯಾರಂಟಿ: ಮಹದೇವಪ್ಪ

ಕಾಂಗ್ರೆಸ್ ಪಕ್ಷ ಎಂದರೆ ನುಡಿದಂತೆ ನಡೆಯುವುದು, ಸಮಾಜ ಕಲ್ಯಾಣ ಇಲಾಖೆ ಅಭಿವೃದ್ಧಿಯೇ ನನ್ನ ಆದ್ಯತೆ



ಮೈಸೂರು, ಮೇ 29(ಎಂಟಿವೈ)- ನುಡಿದಂತೆ ನಡೆಯುವುದಕ್ಕೆ ಕಾಂಗ್ರೆಸ್ ಸರ್ಕಾರ ಸದಾ ಬದ್ಧವಾಗಿದೆ. 5 ಗ್ಯಾರಂಟಿ ಕಾರ್ಯಕ್ರಮಗಳನ್ನು ಜಾರಿಗೆ ತಂದೇ ತರುತ್ತೇವೆ. ಆದರೆ, ಚುನಾವಣೆಯಲ್ಲಿ ಸೋಲನುಭವಿಸಿರುವ ಬಿಜೆಪಿ ನಾಯಕರು ಹತಾಶರಾಗಿ ಗೊಂದಲ ಸೃಷ್ಟಿಸಲು ಸಂಚು ನಡೆಸುತ್ತಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆರೋಪಿಸಿದ್ದಾರೆ.

ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮೈಸೂರು ನಗರಕ್ಕೆ ಸೋಮವಾರ ಪ್ರಥಮ ಬಾರಿಗೆ ಆಗಮಿಸಿ ಜಲದರ್ಶಿನಿ ಅತಿಥಿಗೃಹದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದರು.

ಚುನಾವಣೆ ಸಂದರ್ಭದಲ್ಲಿ ರಾಜ್ಯದ ಜನರಿಗೆ ಕಾಂಗ್ರೆಸ್ ಪಕ್ಷ ಕೊಟ್ಟಿರುವ ಮಾತಿನಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಬದ್ಧವಾಗಿದ್ದೇವೆ. ಅದಕ್ಕಾಗಿ ಸಿದ್ಧತೆಯನ್ನೂ ಮಾಡಿಕೊಳ್ಳುತ್ತಿದ್ದೇವೆ. ಐದು ಗ್ಯಾರಂಟಿ ಯೋಜನೆ ಜಾರಿ ವಿಚಾರದಲ್ಲಿ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಬಿಜೆಪಿ ಮತ್ತು ಜೆಡಿಎಸ್ ನಾಯಕರು ರಾಜಕೀಯ ಕಾರಣಕ್ಕಾಗಿ ಮಾತನಾಡಬಾರದು. ಬಡವರ ಖಾತೆಗೆ ಹದಿನೈದು ಲಕ್ಷ ರೂ. ಹಣ, ರೈತರ ಆದಾಯ ದ್ವಿಗುಣ ಮಾಡುತ್ತೇವೆ ಎಂದು ಬಿಜೆಪಿ ನೀಡಿದ್ದ ಭರವಸೆಯನ್ನು ಇದುವರೆಗೂ ಈಡೇರಿಸಿಲ್ಲ. ಈಗ ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಜನರಲ್ಲಿ ಗೊಂದಲ ಮೂಡಿಸುವ ಮೂಲಕ ಅಶಾಂತಿ ವಾತಾವರಣ ಉಂಟು ಮಾಡಿ, ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಂದಾಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಈ ಹಿಂದೆಯೂ ನಾವು ಹೇಳಿದ್ದನ್ನು ಮಾಡಿ ತೋರಿಸಿದ್ದೇವೆ. ಮಾಡಿರುವ ಕೆಲಸವನ್ನು ಜನರ ಮುಂದೆ ಹೇಳುತ್ತೇವೆ. ಸುಳ್ಳನ್ನೇ ಸತ್ಯವೆಂದು ನಂಬಿಸುವ ಜಾಯಮಾನ ಕಾಂಗ್ರೆಸ್‌ನದ್ದು ಅಲ್ಲ. ಚುನಾವಣೆ ವೇಳೆ ಘೋಷಿಸಿರುವ ಗ್ಯಾರಂಟಿಗಳನ್ನು ಜಾರಿಗೊಳಿಸುವುದಿಲ್ಲ ಎಂದು ಹೇಳಿದವರು ಯಾರು? ಆ ಯೋಜನೆಗಳ ಸೌಲಭ್ಯ ಜನರಿಗೆ ನೀಡುವುದಕ್ಕೆ ನಾವು ಬದ್ಧರಾಗಿದ್ದೇವೆ. ಸಚಿವ ಸಂಪುಟದ ಸದಸ್ಯರು ಒಗ್ಗೂಡಿ ಕೆಲಸ ಮಾಡುತ್ತೇವೆ. ಚುನಾವಣೆಯಲ್ಲಿ ಸೋತ ಬಳಿಕ ಎದುರಾಳಿಗಳು ಹತಾಶರಾಗಿದ್ದಾರೆ. ಜನರನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ. ನಮ್ಮ ಬದ್ಧತೆ ಪ್ರಶ್ನೆ ಮಾಡುವ ನೈತಿಕತೆ ಬಿಜೆಪಿಗೆ ಇಲ್ಲ ಎಂದು ಕಿಡಿಕಾರಿದರು.

ಕಾಂಗ್ರೆಸ್ ಸರ್ಕಾರ ರಚನೆಯಾದ ಮೇಲೆ ನಮ್ಮ ಮೇಲೆ ಜನರು ತುಂಬಾ ಭರವಸೆ ಇಟ್ಟಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಜ್ಯದಲ್ಲಿ ಅಭಿವೃದ್ಧಿ ಮರೀಚಿಕೆಯಾಗಿತ್ತು. ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ವ್ಯಾಪಕವಾದ ಭ್ರಷ್ಟಾಚಾರ ತುಂಬಿ ತುಳುಕಿತ್ತು. ನಾಡಿನಲ್ಲಿರುವ ಚಿಂತಕರು, ಬುದ್ಧಿಜೀವಿಗಳು ನಾವು ಏನು ಬೇಕಾದರೂ ಬರೆಯಬಹುದು, ಭಾಷಣ ಮಾಡಬಹುದು ಎಂದು ಹೇಳಿದ್ದಾರೆ. ವಾಕ್ ಸ್ವಾತಂತ್ರ್ಯಕ್ಕೆ ನಿರ್ಬಂಧ ಹೇರಲಾಗಿತ್ತು. ಪ್ರಜಾಪ್ರಭುತ್ವದ ವ್ಯವಸ್ಥೆಯ ಕತ್ತು ಹಿಸುಕುವ ಕೆಲಸ ಮಾಡಲಾಗಿತ್ತು. ಆದರೆ ಇದೀಗ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಜನರಿಗೆ ಮುಕ್ತ ಸ್ವಾತಂತ್ರ್ಯ ಪುನರ್ ಸ್ಥಾಪನೆಯಾಗಿದೆ ಎಂದು ತಿಳಿಸಿದರು.

ನಾವು ದ್ವೇಷದ ಆಡಳಿತ ಮತ್ತು ರಾಜಕಾರಣ ಮಾಡುವುದಿಲ್ಲ. ದ್ವೇಷದ ಆಡಳಿತ ಮಾಡಿದವರು ಯಾರೂ ಎಂಬುದು ಜನರಿಗೆ ಗೊತ್ತಿದೆ. ನಾವು ಕಟ್ಟುವ ಕೆಲಸ ಮಾಡಿದರೆ, ಬಿಜೆಪಿಯವರು ಒಡೆಯುವ ಕೆಲಸ ಮಾಡುತ್ತಾರೆ. ಕೋಮುಭಾವನೆ ಕೆರಳಿಸುವ, ಜಾತಿ-ಜಾತಿಗಳ ನಡುವೆ ವಿಷ ಬೀಜ ಬಿತ್ತುವ ಕೆಲಸ ಮಾಡಿ, ಅಶಾಂತಿ ವಾತಾವರಣ ಸೃಷ್ಟಿಸಿದ್ದು ಬಿಜೆಪಿ ಎಂದು ಎಲ್ಲರಿಗೂ ಮನವರಿಕೆಯಾಗಿದೆ ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಸುನೀತಾ ವೀರಪ್ಪಗೌಡ, ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮುಖಂಡರಾದ ಶಿವಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕ್ಷೇತ್ರದ ಜನತೆ ಬೆಂಬಲ ನೀಡಿದ್ದಾರೆ

ಚುನಾವಣೆಯಲ್ಲಿ ರಾಜ್ಯದ ಜನರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಸರ್ಕಾರ ರಚನೆಗೆ ಕಾರಣಕರ್ತರಾಗಿದ್ದಾರೆ. ಸಾಮಾಜಿಕ ಚಳವಳಿಗಳು, ದಲಿತ ಸಂಘಟನೆಗಳು ಪ್ರಗತಿಪರ ಸಂಘಟನೆಗಳು ಬಿಜೆಪಿ ದುರಾಡಳಿತವನ್ನು, ಭ್ರಷ್ಟಾಚಾರವನ್ನು ವಿರೋಧಿಸಿ ಅಭೂತಪೂರ್ವ ಬೆಂಬಲ ನೀಡಿದ್ದಾರೆ. ಲಕ್ಷಾಂತರ ಕಾರ್ಯಕರ್ತರು ಕೆಲಸ ಮಾಡಿದ್ದಾರೆ. ತಿ.ನರಸೀಪುರ ಕ್ಷೇತ್ರದ ಮತದಾರರು ಪ್ರಚಾರ ಎನ್ನುವ ಭಾವನೆ ಮೂಡಿಸದೆ ಹಬ್ಬದ ವಾತಾವರಣ ಮೂಡಿಸಿ ಪ್ರೀತಿಯಿಂದ ಆಯ್ಕೆ ಮಾಡಿರುವುದು ಮನಸ್ಸಿಗೆ ತುಂಬಾ ಸಂತೋಷ ತಂದಿದೆ.

-ಡಾ.ಹೆಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಇಲಾಖೆ ಸಚಿವ

ತಿಂಗಳಲ್ಲಿ ಕೆಆರ್‌ಎಸ್ ಸಂಗೀತ ಕಾರಂಜಿ ಕಾಮಗಾರಿ ಪೂರ್ಣ



ಮೈಸೂರು, ಮೇ 29(ಆರ್‌ಕೆ)- ವಿಶ್ವ ಖ್ಯಾತಿಯ ಕೃಷ್ಣರಾಜ ಸಾಗರ (KRS)ದ ಬೃಂದಾವನ ಗಾರ್ಡನ್‌ನಲ್ಲಿ ಕೈಗೆತ್ತಿಕೊಂಡಿರುವ ಸಂಗೀತ ಕಾರಂಜಿ (Musical Fountain) ಕಾಮಗಾರಿಯು ಅಂತಿಮ ಹಂತ ತಲುಪಿದೆ.

ಕೆಆರ್‌ಎಸ್ ಅಣೆಕಟ್ಟು ನಿರ್ಮಾಣವಾದ ನಂತರ ಬೃಂದಾವನ ಗಾರ್ಡನ್ ನಿರ್ಮಿಸಿದಾಗ ರೂಪುಗೊಂಡಿದ್ದ ಸಂಗೀತ ಕಾರಂಜಿ ಅತೀ ಹಳೆಯದಾದ್ದರಿಂದ ಆಕರ್ಷಣೆ ಕಳೆದುಕೊಂಡಿತ್ತು. ಕಾವೇರಿ ನೀರಾವರಿ ನಿಗಮ ನಿಯಮಿತವು ಹಳೆಯ ಕಾರಂಜಿ ಜಾಗದಲ್ಲಿ ಅತ್ಯಾಕರ್ಷಕವಾಗಿ ಅತ್ಯಾಧುನಿಕ ಸಂಗೀತ ಕಾರಂಜಿ ನಿರ್ಮಿಸಲು ಯೋಜನೆ ಕೈಗೆತ್ತಿಕೊಂಡಿತ್ತು.

ಎರಡು ತಿಂಗಳ ಹಿಂದೆ 2.2 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಆರಂಭಿಸಿದ್ದ ಕಾಮಗಾರಿಯನ್ನು ಮುಂಬೈ ಮೂಲದ ಸೃಜನಶೀಲ ಗ್ರೀನ್ ಕೇರ್ ಕಂಪನಿಯು ಪಡೆದು ನಿರ್ವಹಿಸುತ್ತಿದ್ದು, ಬಹುತೇಕ ಪೂರ್ಣಗೊಂಡಿದೆ. ಒಂದು ತಿಂಗಳೊಳಗಾಗಿ ಹೊಸ ಮ್ಯೂಸಿಕಲ್ ಫೌಂಟನ್ ಕಾರ್ಯಾರಂಭ ಮಾಡಲಿದೆ.

ಸೆಂಟ್ರಲ್ ನಾಸಲ್ ಅತ್ಯಾಕರ್ಷಕವಾಗಿದ್ದು, ಇಡೀ ದೇಶದಲ್ಲೇ ಪ್ರಥಮ ಅತ್ಯಾಧುನಿಕ ಫೌಂಟೇನ್ ಆಗಿ ದೇಶ-ವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸುವ ತಾಣವಾಗಲಿದೆ. ಕೊರೊನಾ ಹಿನ್ನೆಲೆಯಲ್ಲಿ ಕಳೆಗುಂದಿದ್ದ ಕೆಆರ್‌ಎಸ್ ಈಗ ಚಟುವಟಿಕೆಗಳ ತಾಣ ವಾಗಿದ್ದು, ಪ್ರವಾಸಿಗರೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಬೃಂದಾವನಕ್ಕೆ ಭೇಟಿ ನೀಡುತ್ತಿದ್ದಾರೆ.

ಕೆಲಸದ ದಿನಗಳಲ್ಲಿ 2 ರಿಂದ 3 ಸಾವಿರ, ವಾರಾಂತ್ಯದ ಶನಿವಾರ, ಭಾನುವಾರ ಮತ್ತು ಸರ್ಕಾರಿ ರಜಾ ದಿನಗಳಲ್ಲಿ 5 ರಿಂದ 6 ಸಾವಿರ ಪ್ರವಾಸಿಗರು ಕೆಆರ್‌ಎಸ್‌ಗೆ ಭೇಟಿ ನೀಡುತ್ತಿರುವುದರಿಂದ ಕಾವೇರಿ ನೀರಾವರಿ ನಿಗಮಕ್ಕೂ ಅಧಿಕ ಆದಾಯ ಬರಲಾರಂಭಿಸಿದೆ. ಕಾಮಗಾರಿ ನಡೆಯುತ್ತಿರುವುದರಿಂದ ಬೃಂದಾವನದ ಉತ್ತರ ಭಾಗಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ. ಮ್ಯೂಸಿಕಲ್ ಫೌಂಟನ್ ಕಾರ್ಯಾರಂಭಗೊಂಡಲ್ಲಿ ಮತ್ತಷ್ಟು ಪ್ರವಾಸಿಗರು ಕೆಆರ್‌ಎಸ್‌ಗೆ ಭೇಟಿ ನೀಡಲಿದ್ದಾರೆ.

ವಯಸ್ಕರಿಗೆ 50 ರೂ. ಹಾಗೂ ಮಕ್ಕಳಿಗೆ 10 ರೂ. ಪ್ರವೇಶ ದರವಿದ್ದು, ವಾಹನಗಳ ನಿಲುಗಡೆಗೆ 100 ರೂ. (ಬಸ್ಸು), 50 ರೂ. (ಕಾರು) ಹಾಗೂ 20 ರೂ. ದ್ವಿಚಕ್ರ ವಾಹನ ಪಾರ್ಕಿಂಗ್ ಶುಲ್ಕ ವಾಹನ ನಿಗದಿಯಾಗಿದ್ದು, ಆದಾಯ ಕ್ರೋಢೀಕರಣದಲ್ಲೂ ನಿಗಮವು ಸದೃಢವಾಗುತ್ತಿರುವುದರಿಂದ ಅಭಿವೃದ್ಧಿಗೂ ಹೆಚ್ಚು ಒತ್ತು ನೀಡಲಾಗುತ್ತಿದೆ.

ಸಾರಿಗೆ ಇಲಾಖೆಯೊಂದಿಗೆ ಇಂದು ಸಚಿವ ರಾಮಲಿಂಗಾರೆಡ್ಡಿ ಸಭೆ

ಮಹಿಳೆಯರಿಗೆ ಉಚಿತ ಬಸ್ ಪಾಸ್ ಬಗ್ಗೆ ನಿರ್ಧಾರ



ಬೆಂಗಳೂರು: ಮಹಿಳೆಯರಿಗೆ ಉಚಿತ ಬಸ್ ಪಾಸ್ ಸಂಬಂಧ ಮಂಗಳವಾರ ಬೆಂಗಳೂರಿನ ಶಾಂತಿನಗರದ ಕೆಎಸ್‌ಆರ್‌ಟಿಸಿ ಕಚೇರಿಯಲ್ಲಿ ಸಭೆ ನಡೆಯಲಿದೆ. ಮಹತ್ವದ ಸಭೆ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ನೇತೃತ್ವದಲ್ಲಿ ನಡೆಯಲಿದ್ದು, ಮಧ್ಯಾಹ್ನ 1 ಗಂಟೆಗೆ ಸಾರಿಗೆ ಇಲಾಖೆಯ 4 ನಿಗಮಗಳೊಂದಿಗೆ ಚರ್ಚೆ ಮಾಡಲಿದ್ದಾರೆ. ನಿಗಮಗಳ ಆದಾಯದಲ್ಲಿ ಉಚಿತ ಬಸ್ ಪಾಸ್ ನೀಡಲು ಸಾಧ್ಯವಿಲ್ಲ. ಸರ್ಕಾರದ ಯೋಜನೆಯಾದ್ದರಿಂದ ನಿಗಮಗಳಿಂದ ಹಣ ಭರಿಸಲು ಆಗಲ್ಲ. ಈಗಾಗಲೇ ಈ ಅಂಶಗಳನ್ನು ಸಿಎಂ ಸಿದ್ಧರಾಮಯ್ಯ ಗಮನಕ್ಕೆ ಸಾರಿಗೆ ಸಚಿವರು ಮತ್ತು ಅಧಿಕಾರಿಗಳು ತಂದಿದ್ದಾರೆ.

4 ಸಾರಿಗೆ ನಿಗಮಗಳ ಹಣಕಾಸಿನ ಸ್ಥಿತಿ ಬಗ್ಗೆ ಅವಲೋಕಿಸಲಿರುವ ಸಚಿವರು, ಬಸ್ ಪಾಸ್ ಸಬ್ಸಿಡಿ ಬಗ್ಗೆ ನಿರ್ಧರಿಸಲಿದ್ದಾರೆ.

ಇನ್ನು ಉಚಿತ ಬಸ್ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಯಾಣದ ಮಿತಿಯನ್ನು (ಕಿಲೋಮೀಟರ್) ಮಾನದಂಡ ಹಾಕಲು ಸರ್ಕಾರ ಚಿಂತನೆ ನಡೆಸುತ್ತಿದೆ. ಈ ಕುರಿತಾಗಿ ಸಂಬಂಧಪಟ್ಟ ಅಧಿಕಾರಿಗಳಿಂದ ಸೋಮವಾರ ಸಿಎಂ ಸಿದ್ಧರಾಮಯ್ಯ ಮಾಹಿತಿ ಪಡೆದುಕೊಂಡಿದ್ದಾರೆ. ಜೊತೆಗೆ ಉಚಿತ ಬಸ್ ಪಾಸ್, ಫಲಾನುಭವಿಗಳ ಪಟ್ಟಿ ನೀಡಿ ಎಂದು ಅಧಿಕಾರಿಗಳೊಂದಿಗಿನ ಸಭೆಯಲ್ಲಿ ಸೂಚನೆ ನೀಡಿದ್ದಾರೆ. ಯುವ ನಿಧಿ ಗ್ಯಾರಂಟಿ ಬಗ್ಗೆ ಸಿಎಂ ಮಾಹಿತಿ ಪಡೆದಿದ್ದಾರೆ.

5 ಗ್ಯಾರಂಟಿಗಳಿಗೆ 50 ಸಾವಿರ ಕೋಟಿ ರೂ. ವೆಚ್ಚ ಸಾಧ್ಯತೆ: 5 ಗ್ಯಾರಂಟಿಗಳಿಗೆ ವಾರ್ಷಿಕ ಒಟ್ಟು 50 ಸಾವಿರ ಕೋಟಿ ವೆಚ್ಚ ಸಾಧ್ಯತೆ ಎಂದು ಹಣಕಾಸು ಇಲಾಖೆ ಪ್ರಧಾನ ಕಾರ್ಯದರ್ಶಿ ಪ್ರಸಾದ್‌ರಿಂದ ಸಿಎಂ ಸಿದ್ದರಾಮಯ್ಯ ಮಾಹಿತಿ ಪಡೆದಿದ್ದಾರೆ. ಬಿಪಿಎಲ್ ಕಾರ್ಡ್‌ದಾರರಿಗೆ 'ಗೃಹಲಕ್ಷ್ಮೀ' ಯೋಜನೆಗೆ ವಾರ್ಷಿಕ 12 ಸಾವಿರ ಕೋಟಿ ವೆಚ್ಚ ಸಾಧ್ಯತೆ ಇದೆ. ತೆರಿಗೆ ಹೆಚ್ಚಳ ಸಂಬಂಧ ಸಭೆಯಲ್ಲಿ ಸಮಾಲೋಚನೆ ಮಾಡಲಾಗಿದ್ದು, ಸಂಪನ್ಮೂಲ ಕ್ರೋಢೀಕರಣ ಹೇಗೆ ಎಂಬುದರ ಮಾಹಿತಿ ಸಂಗ್ರಹಿಸಲಾಗಿದೆ.

ಉಚಿತ ವಿದ್ಯುತ್ 2.14 ಕೋಟಿ ಕುಟುಂಬಗಳಿಗೆ ಅನುಕೂಲ: ಸಭೆಯಲ್ಲಿ 200 ಯೂನಿಟ್ ಉಚಿತ ವಿದ್ಯುತ್ ನೀಡುವ ಬಗ್ಗೆ ವಿಸ್ತೃತವಾಗಿ ಚರ್ಚೆ ಆಗಿದ್ದು, ಉಚಿತ ವಿದ್ಯುತ್ ಯೋಜನೆಯಿಂದ 2.14 ಕೋಟಿ ಕುಟುಂಬಗಳಿಗೆ ಅನುಕೂಲವಾಗಲಿದೆ. ವಾರ್ಷಿಕ ಬಳಕೆ ಅಂದಾಜು 13,575 ಮಿಲಿಯನ್ ಯೂನಿಟ್ ಅಗತ್ಯವಾಗಿದೆ. ಈ ಯೋಜನೆಗೆ ಅಂದಾಜು 8,008 ಕೋಟಿ ರೂ. ಇಂಧನ ಶುಲ್ಕ ತಗುಲಿಲಿದ್ದು, ಯೋಜನೆ ಜಾರಿಗೆ ಒಟ್ಟು 12,038 ಕೋಟಿ ರೂಪಾಯಿ ಅಗತ್ಯವಿದೆ ಎನ್ನಲಾಗುತ್ತಿದೆ.

ಸುಧಾರಿತ ನ್ಯಾವಿಗೇಷನ್ ಉಪಗ್ರಹ GSLV-F12 ಉಡಾವಣೆ ಯಶಸ್ವಿ

ಶ್ರೀಹರಿಕೋಟಾ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಸೋಮವಾರ ಶ್ರೀಹರಿಕೋಟಾದಿಂದ ಸುಧಾರಿತ ನ್ಯಾವಿಗೇಷನ್ ಉಪಗ್ರಹ GSLV-F12 ಮತ್ತು NVS-01 ಅನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ.

ಜಿಎಸ್‌ಎಲ್‌ವಿಯ ಉಪಗ್ರಹ ಉಡಾವಣಾ ವಾಹನವು ತನ್ನ 15ನೇ ಹಾರಾಟದಲ್ಲಿ 2,232 ಕೆಜಿ ತೂಕದ ನ್ಯಾವಿಗೇಷನ್ ಉಪಗ್ರಹ NVS-01 ಅನ್ನು ಇಂದು ಬೆಳಿಗ್ಗೆ 10.42ಕ್ಕೆ ಆಂಧ್ರ ಪ್ರದೇಶದ ಶ್ರೀ ಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ ಮಾಡಲಾಗಿದೆ. ರಾಕೆಟ್ ಉಡಾವಣೆಯಾದ 20 ನಿಮಿಷಗಳ ನಂತರ ಸುಮಾರು 251 ಕಿಮೀ ಎತ್ತರದಲ್ಲಿ ಜಿಯೋಸಿಂಕ್ರೋನಸ್ ವರ್ಗಾವಣೆ ಕಕ್ಷೆಯಲ್ಲಿ ಉಪಗ್ರಹವನ್ನು ಸೇರಿಸಿದೆ ಎಂದು ಇಸ್ರೋ ಹೇಳಿದೆ.

NVS-01 ಭಾರತದ ಎರಡನೇ ತಲೆಮಾರಿನ NavIC ಉಪಗ್ರಹಗಳಲ್ಲಿ ಮೊದಲನೆಯದು, ಇದು ವರ್ಧಿತ ವೈಶಿಷ್ಟ್ಯಗಳೊಂದಿಗೆ ಇರುತ್ತದೆ. ಉಡಾವಣೆಯಾದ 20 ನಿಮಿಷಗಳ ನಂತರ ಉಪಗ್ರಹವನ್ನು ಕಕ್ಷೆಯಲ್ಲಿ ಸೇರಿಸಲಾಯಿತು ಎಂದು ಇಸ್ರೋ ಟ್ವೀಟ್‌ನಲ್ಲಿ ಮಾಹಿತಿ ನೀಡಿದೆ. NVS-01 NavIC ಸರಣಿಯಲ್ಲಿ ಎರಡನೇ ತಲೆಮಾರಿನ ಉಪಗ್ರಹಗಳ ಆರಂಭಕ್ಕೆ ಇದು ಸಾಕ್ಷಿಯಾಗಿದೆ. ನ್ಯಾವಿಗೇಷನ್ ಸೇವೆಗಳನ್ನು ಸುಧಾರಿಸಲು ಮತ್ತು ವ್ಯವಸ್ಥೆಗೆ ಹೊಸ ವಿಚಾರಗಳನ್ನು ಪರಿಚಯಿಸಲು ಈ ಉಪಗ್ರಹ ಉಡಾವಣೆ ಮಾಡಲಾಗಿದೆ.

ಹಾಕ್ ವಿಮಾನ ಭ್ರಷ್ಟಾಚಾರ ಪ್ರಕರಣ: ರೋಲ್ಸ್ ರಾಯ್ಸ್ ವಿರುದ್ಧ ಸಿಬಿಐ ಎಫ್‌ಐಆರ್



ನವದೆಹಲಿ: ಹಾಕ್ ವಿಮಾನ ಭ್ರಷ್ಟಾಚಾರ ಪ್ರಕರಣದಲ್ಲಿ ಕೇಂದ್ರೀಯ ತನಿಖಾದಳ ರೋಲ್ಸ್ ರಾಯ್ಸ್ ಹಾಗೂ ಅದರ ಹಿರಿಯ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದೆ.

ಹಾಕ್ 115 ಅತ್ಯಾಧುನಿಕ ತರಬೇತಿ ವಿಮಾನ ಖರೀದಿ ಹಗರಣ ಇದಾಗಿದ್ದು, ರೋಲ್ಸ್ ರಾಯ್ಸ್ ಪಿಎಲ್ ಸಿ, ಟಿಮ್ ಜೋನ್ಸ್, ರೋಲ್ಸ್ ರಾಯ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ನ ನಿರ್ದೇಶಕ, ಆಪಾದಿತ ಶಸ್ತ್ರಾಸ್ತ್ರ ವಿತರಕರು ಸುಧೀರ್ ಚೌಧರಿ ಮತ್ತು ಭಾನು ಚೌಧಿರೆ ಮತ್ತು ಬ್ರಿಟಿಷ್ ಏರೋಸ್ಪೇಸ್ ಸಿಸ್ಟಮ್ಸ್ ಪ್ರಕರಣದ ಪ್ರಮುಖ ಆರೋಪಿಗಳಾಗಿದ್ದಾರೆ. ಸಿಬಿಐ 2016 ರಲ್ಲಿ ಪ್ರಾಥಮಿಕ ತನಿಖೆಯನ್ನು ದಾಖಲಿಸಿತ್ತು, ನಂತರ ಅದನ್ನು ಸಾಮಾನ್ಯ ಪ್ರಕರಣವಾಗಿ ಪರಿವರ್ತಿಸಲಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಆಸ್ಪತ್ರೆಗೆ ಹೆಚ್‌ಸಿ.ಮಹದೇವಪ್ಪ, ಬಿ.ನಾಗೇಂದ್ರ ಭೇಟಿ; ಗಾಯಾಳುಗಳ ಬಗ್ಗೆ ವಿಚಾರಣೆ





ಮೈಸೂರು, ಮೇ 29(ಸಿಎನ್)- ತಿ.ನರಸೀಪುರ ತಾಲ್ಲೂಕಿನ ಕುರುಬೂರು ಬಳಿ ಭೀಕರ ಅಪಘಾತ ಸಂಬಂಧ ನಗರದ ಕೆ.ಆರ್ ಹಾಗೂ ಚೆಲುವಾಂಬ ಆಸ್ಪತ್ರೆಗೆ ಸೋಮವಾರ ಸಂಜೆ ಭೇಟಿ ನೀಡಿದ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಸಚಿವ ಬಿ.ನಾಗೇಂದ್ರ ದಾಖಲಾಗಿರುವ ಗಾಯಾಳುಗಳ ಯೋಗ ಕ್ಷೇಮ ವಿಚಾರಿಸಿದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ, ಹತ್ತು ಮಂದಿ ಮೃತಪಟ್ಟಿರುವುದು ಮನಸ್ಸಿಗೆ ನೋವಾಗಿದೆ. ಈಗಾಗಲೇ ಸರ್ಕಾರದಿಂದ ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ 50 ಸಾವಿರ ರೂ. ಪರಿಹಾರ ಘೋಷಣೆ ಮಾಡಲಾಗಿದೆ ಎಂದರು.

ಮಾನವೀಯ ದೃಷ್ಟಿಯಿಂದ ಆರ್ಥಿಕ ಸಹಕಾರಕ್ಕಾಗಿ ಪರಿಹಾರ ನೀಡುತ್ತಿದ್ದೇವೆ. ವೈದ್ಯರು ವಿಶೇಷ ಕಾಳಜಿ ವಹಿಸಿ ಚಿಕಿತ್ಸೆ ನೀಡುತ್ತಿದ್ದಾರೆ. ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಬಳ್ಳಾರಿಗೆ ರವಾನಿಸಲಾಗುವುದು. ರಸ್ತೆ ಅಪಘಾತ ತಪ್ಪಿಸುವ ಬಗ್ಗೆಯೂ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸುತ್ತೇನೆ ಎಂದರು. ಬಳಿಕ ಸ್ಥಳದಿಂದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರೆ ಮಾಡಿ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡಿದರು.

ಮೂವರನ್ನು ಉಳಿಸುವ ಪ್ರಯತ್ನ: ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಸಚಿವ ಬಿ.ನಾಗೇಂದ್ರ ಮಾತನಾಡಿ, ಆಸ್ಪತ್ರೆಯಲ್ಲಿ ದಾಖಲಾಗಿರುವ ಮೂವರ ಉಳಿಸಿಕೊಳ್ಳುವ ಪ್ರಯತ್ನವನ್ನು ವೈದ್ಯರು ಮಾಡುತ್ತಿದ್ದಾರೆ. ನಮ್ಮ ಕ್ಷೇತ್ರದವರೇ ಆಗಿರುವ ಕುಟುಂಬಸ್ಥರೊಂದಿಗೆ ಮಾತನಾಡಿದ್ದೇನೆ. ಈ ಕುಟುಂಬದವರು ಸಮಾರಂಭಗಳಲ್ಲಿ ರೊಟ್ಟಿ ತಯಾರಿಸುವ ವೃತ್ತಿ ಮಾಡುತ್ತಿದ್ದು, ವೈಯಕ್ತಿಕವಾಗಿ ನನಗೆ ಪರಿಚಯವಿದ್ದಾರೆ. ಚುನಾವಣೆ ಸಂದರ್ಭದಲ್ಲಿ ನಮ್ಮೊಂದಿಗಿದ್ದರು. ಈ ದುರ್ಘಟನೆಯಿಂದ ಮನಸ್ಸಿಗೆ ಬಹಳಷ್ಟು ನೋವಾಗಿದೆ. ಆಸ್ಪತ್ರೆಯಲ್ಲಿ ದಾಖಲಾಗಿರುವ ನಾಲ್ಕು ವರ್ಷದ ಪುನೀತ್ ತಂದೆಯನ್ನು ಕಳೆದುಕೊಂಡಿದ್ದಾನೆ. ಅವನ ಭವಿಷ್ಯದ್ದು ಚಿಂತೆಯಾಗಿದೆ. ಮೃತದೇಹಗಳನ್ನು ಬಳ್ಳಾರಿಗೆ ರವಾನಿಸುವ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ, ಸೂಕ್ತ ವ್ಯವಸ್ಥೆ ಕಲ್ಪಿಸುತ್ತೇನೆ. ಅಂತ್ಯಕ್ರಿಯೆಯಲ್ಲಿ ಭಾಗಿಯಾಗುತ್ತೇನೆ. ಸರ್ಕಾರದ ಜೊತೆಗೆ ವೈಯಕ್ತಿಕವಾಗಿ ಅವರ ಕಷ್ಟಕ್ಕೆ ಸ್ಪಂದಿಸುತ್ತೇನೆ ಎಂದು ಹೇಳಿದರು.

ಅಧಿಕಾರಿಗಳ ಭೇಟಿ ಪರಿಶೀಲನೆ: ಜಿಲ್ಲಾಧಿಕಾರಿ ಡಾ ಕೆ.ವಿ.ರಾಜೇಂದ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪ್ರಸಾದ್ ಸೇರಿದಂತೆ ಹಲವು ಅಧಿಕಾರಿಗಳು ಕೆ.ಆರ್ ಆಸ್ಪತ್ರೆ ಹಾಗೂ ಚೆಲುವಾಂಬ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಮಾಹಿತಿ ಪಡೆದು ಸೂಕ್ತ ಚಿಕಿತ್ಸೆಗೆ ಅವಕಾಶ ಮಾಡಿಕೊಡುವಂತೆ ಆಸ್ಪತ್ರೆ ವೈದ್ಯರು, ಸಿಬ್ಬಂದಿಗಳಿಗೆ ಸೂಚಿಸಿದರಲ್ಲದೆ ಚಿಕಿತ್ಸೆ ಕುರಿತು ಮಾಹಿತಿ ಪಡೆದುಕೊಂಡರು.

ಖಾಸಗಿ ಬಸ್‌ಗಳ ಅತೀ ವೇಗ, ಅವಸರವೂ ಅಪಘಾತಕ್ಕೆ ಕಾರಣವಾಗಿದೆ

ಸಾರ್ವಜನಿಕರ ದೂರು

ತಿ.ನರಸೀಪುರ, ಮೇ 29- ಮೈಸೂರು ಮತ್ತು ಕೊಳ್ಳೇಗಾಲ ಮಾರ್ಗದಲ್ಲಿ ಸಂಚರಿಸುವ ಖಾಸಗಿ ಬಸ್ ಹಾಗೂ ಇನ್ನಿತರೆ ವಾಹನಗಳು ಅತೀ ವೇಗವಾಗಿ ಸಂಚರಿಸುತ್ತಿರುವುದು ಅಪಘಾತಗಳಿಗೆ ಕಾರಣವಾಗುತ್ತಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಖಾಸಗಿ ಬಸ್‌ಗಳ ಚಾಲಕರು ಪೈಪೋಟಿಗೆ ಬಿದ್ದವರಂತೆ ವಾಹನಗಳನ್ನು ಚಾಲನೆ ಮಾಡುತ್ತಾರೆ. ಮಾರ್ಗ ಮಧ್ಯೆ ಗ್ರಾಮಗಳಲ್ಲಿ ಪ್ರಯಾಣಿಕರನ್ನು ಇಳಿಸಿ, ಹತ್ತಿಸುವಾಗಲೂ ಅವಸರವೋ ಅವಸರ. ಕೆಲವೊಮ್ಮೆ ವಯಸ್ಸಾದವರು ಹಾಗೂ ಅನಾರೋಗ್ಯಕ್ಕೊಳಗಾದವರು ಬಸ್ ಹತ್ತುವ ಮುನ್ನವೇ ಚಾಲನೆ ಮಾಡಿಕೊಂಡು ಹೋಗಿಬಿಡುತ್ತಾರೆ ಎಂಬ ಆರೋಪಗಳು ಕೇಳಿ ಬಂದಿವೆ.

ಚಾಲಕರ ಈ ವರ್ತನೆಗೆ ಅವರಿಗೆ ಇರುವಂತಹ ಒತ್ತಡವೇ ಕಾರಣ ಎಂಬ ಮಾತುಗಳು ಕೇಳಿಬಂದಿವೆ. ತಿ.ನರಸೀಪುರ ಬಸ್ ನಿಲ್ದಾಣದಲ್ಲಿ 2 ನಿಮಿಷಕ್ಕೆ ಒಂದು ಖಾಸಗಿ ಬಸ್ ಮೈಸೂರು, ಕೊಳ್ಳೇಗಾಲ ಮತ್ತು ಚಾಮರಾಜನಗರದ ಕಡೆ ತೆರಳಲು ಸಮಯ ನಿಗದಿಪಡಿಸಲಾಗಿದೆ. ನಿಗದಿಪಡಿಸಿರುವ 2 ನಿಮಿಷ ದಾಟಿದ ನಂತರ ಸದರಿ ಬಸ್ ಸ್ಟ್ಯಾಂಡ್‌ನಲ್ಲಿ ಪ್ರಯಾಣಿಕರನ್ನು ಇಳಿಸಬಹುದೇ ಹೊರತು ಹತ್ತಿಸಿಕೊಳ್ಳಲು ಬಿಡುವುದಿಲ್ಲ. ಇದರಿಂದಾಗಿ ವರಮಾನಕ್ಕೆ ಕತ್ತು ಬೀಳುತ್ತದೆ ಎಂಬ ಕಾರಣದಿಂದ ನಿಗದಿತ ಸಮಯಕ್ಕೆ ತಲುಪಬೇಕೆಂಬ ಅನಿವಾರ್ಯತೆಯಿಂದ ಚಾಲಕರು ಅತೀ ವೇಗವಾಗಿ ಬಸ್ ಚಾಲನೆ ಮಾಡುತ್ತಿದ್ದಾರೆ ಎಂದು ಸಾರ್ವಜನಿಕರು ವಿವರಿಸಿದ್ದಾರೆ.

ಇನ್ನು ಮೈಸೂರು ಜಿಲ್ಲೆ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಮೊದಲ ಐದು ಸ್ಥಾನದಲ್ಲಿರಬೇಕು

● ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ ● ಬದ್ಧತೆಯಿಂದ ಕಾರ್ಯ ನಿರ್ವಹಿಸುವಂತೆ ಶಿಕ್ಷಕರಿಗೆ ಸೂಚನೆ ● ಶೇ.100 ಫಲಿತಾಂಶ ಬಂದ ಶಾಲೆ; ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಅಭಿನಂದನೆ



ಮೈಸೂರು, ಮೇ 29(ಎಸ್‌ಬಿಡಿ)- ಪ್ರಸಕ್ತ ಶೈಕ್ಷಣಿಕ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಮೈಸೂರು ಜಿಲ್ಲೆ ಟಾಪ್ ಐದರೊಳಗಿರಬೇಕು. ಈ ಗುರಿ ಸಾಧನೆಗೆ ಶಿಕ್ಷಕರು ಬದ್ಧತೆಯಿಂದ ಶ್ರಮಿಸಬೇಕೆಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹೇಳಿದರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ ಹಾಗೂ ಡಿಡಿಪಿಐ ಕಚೇರಿ ಸಹಯೋಗದಲ್ಲಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದ ಸರ್ಕಾರಿ ಶಾಲೆಗಳ ಶಿಕ್ಷಕರು ಹಾಗೂ ಅತೀ ಹೆಚ್ಚು ಅಂಕ ಗಳಿಸಿದ 10 ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಾರಾಜರಾಳಿದ ಮೈಸೂರು ಅಭಿವೃದ್ಧಿ ಹೊಂದಿರುವ ಜಿಲ್ಲೆ ಎಂದು ಪ್ರಸಿದ್ಧವಾಗಿದೆ. ಹೀಗಿರುವಾಗ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಹಿಂದುಳಿಯುವುದು ಬೇಸರದ ಸಂಗತಿ. ಕಳೆದ ಸಾಲಿನ ಫಲಿತಾಂಶ ಆಶಾದಾಯಕವಾಗಿಲ್ಲ. ಪ್ರಸಕ್ತ ಸಾಲಿನಲ್ಲಿ ಉತ್ತಮ ಫಲಿತಾಂಶ ಸಾಧನೆಗೆ ಪೂರಕವಾದ ಎಲ್ಲಾ ವ್ಯವಸ್ಥೆ ಕಲ್ಪಿಸಲು ಜಿಲ್ಲಾಡಳಿತ ಸಿದ್ಧವಾಗಿದೆ. ಈ ಬಾರಿ ನಮ್ಮ ಜಿಲ್ಲೆ ಟಾಪ್ ಐದರೊಳಗಿರಬೇಕು. ಈ ಗುರಿ ಸಾಧನೆಗೆ ಶಿಕ್ಷಕರ ಪರಿಶ್ರಮ ಮುಖ್ಯ ಎಂದರು.

ಇತರೆ ಸರ್ಕಾರಿ ನೌಕರರಿಗೂ ಶಿಕ್ಷಕರಿಗೂ ವ್ಯತ್ಯಾಸವಿದೆ. ಕೆಲಸದ ಅವಧಿ ಪರಿಮಿತಿ ಮೀರಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ವಿದ್ಯಾರ್ಥಿಗಳ ಉತ್ತಮ ಭವಿಷ್ಯದ ದೃಷ್ಟಿಯಿಂದ ತರಗತಿ ಅವಧಿ ಮುಗಿದ ನಂತರವೂ ಬದ್ಧತೆಯಿಂದ ಅಕ್ಷರ ಕಲಿಸುವ ಶಿಕ್ಷಕರು ದೇವರಿದ್ದಂತೆ. ಈ ಬಾರಿ ಉತ್ತಮ ಫಲಿತಾಂಶ ಸಾಧನೆ ಗುರಿಯೊಂದಿಗೆ ಎಲ್ಲರೂ ಶ್ರಮಿಸಬೇಕು. ಕಲಿಕೆಯಲ್ಲಿ ಹಿಂದುಳಿಯಬಹುದಾದ ವಿದ್ಯಾರ್ಥಿಗಳನ್ನು ಆರಂಭಿಕ ಹಂತದಲ್ಲೇ ಗುರುತಿಸಿ ಅವರ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಬೇಕು. ಮಕ್ಕಳಲ್ಲಿ ನಾಗರಿಕ ಗುಣಗಳನ್ನು ಬೆಳೆಸುವ ಮೂಲಕ ಉತ್ತಮ ವ್ಯಕ್ತಿಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಬೇಕು ಎಂದು ಆಶಿಸಿದರು.

ಕಳೆದ 2022-23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯ 32 ಸರ್ಕಾರಿ ಶಾಲೆಗಳು ಶೇ.100ರಷ್ಟು ಫಲಿತಾಂಶ ಸಾಧಿಸಿರುವುದು ಸಾಧಾರಣ ಸಂಗತಿಯಲ್ಲ. ಇದರಲ್ಲಿ ಪ್ರತಿಯೊಬ್ಬ ಶಿಕ್ಷಕರ ಪರಿಶ್ರಮವಿದೆ. ಪೋಷಕರ ಸಹಕಾರವಿದೆ. ಈ ಫಲಿತಾಂಶವನ್ನು ಮುಂದಿನ ಎಲ್ಲಾ ವರ್ಷಗಳಲ್ಲೂ ಕಾಯ್ದುಕೊಳ್ಳಬೇಕು. ಅತೀ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳನ್ನು ಅಭಿನಂದಿಸಲಾಗುತ್ತಿದೆ. ನಾನು ಎಸ್‌ಎಸ್‌ಎಲ್‌ಸಿಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದೆನೆಂದು ಸುಮಾರು 6 ತಿಂಗಳ ಕಾಲ ವಿವಿಧ ಸಂಘ ಸಂಸ್ಥೆಗಳು ಅಭಿನಂದಿಸಿದವು. ಪರಿಣಾಮ ಪ್ರಥಮ ಪಿಯು ಪರೀಕ್ಷೆ ಸಮೀಪಿಸಿದ್ದೇ ತಿಳಿಯಲಿಲ್ಲ. ಪರೀಕ್ಷೆಯಲ್ಲಿ ನಿರೀಕ್ಷಿತ ಅಂಕಗಳು ಸಿಗಲಿಲ್ಲ. ಹಾಗಾಗಿ ಇಂದಿನ ಅಭಿನಂದನೆ ಮುಂದಿನ ಸಾಧನೆಗೆ ಮುನ್ನುಡಿಯಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಅಭಿನಂದನೆ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಮೈಸೂರಿನ ಯರಗನಹಳ್ಳಿ ಸರ್ಕಾರಿ ಶಾಲೆಯ ಎಸ್.ಅಜಯ್(621 ಅಂಕ), ನಂಜನಗೂಡು ತಾಲೂಕು ಆದರ್ಶ ವಿದ್ಯಾಲಯದ ಆಚುತ್ ಮೌರ್ಯ(616), ಕೆ.ಆರ್.ನಗರ ಆದರ್ಶ ವಿದ್ಯಾಲಯದ ಮೋಕ್ಷ ಹೆಚ್ ಪಾಟೀಲ್ (615), ತಿ.ನರಸೀಪುರ ಆದರ್ಶ ವಿದ್ಯಾಲಯದ ಡಿ.ಮೋನಿಷಾ(614), ಜಿ.ಕೀರ್ತನ್ ಕುಮಾರ್(613), ಕೆ.ಆರ್.ನಗರ ಆದರ್ಶ ವಿದ್ಯಾಲಯದ ವಿ.ಲಿಶಾ(612), ತಿ.ನರಸೀಪುರ ಆದರ್ಶ ವಿದ್ಯಾಲಯದ ಬಿ.ಆರ್.ಪ್ರಜ್ವಲ್ ಗೌಡ(611), ಮೈಸೂರು ಬೆಳವಾಡಿ ಸರ್ಕಾರಿ ಪ್ರೌಢಶಾಲೆಯ ಜಿ.ಕೀರ್ತನಾ(610), ಮೈಸೂರು ದಕ್ಷಿಣ ವಲಯ ಆದರ್ಶ ವಿದ್ಯಾಲಯದ ಆರ್.ಪುಣ್ಯ (609) ಹಾಗೂ ಕೆ.ಆರ್.ನಗರದ ಆದರ್ಶ ವಿದ್ಯಾಲಯದ ಕೆ.ಎಂ.ಸ್ಮಿತಾ(608) ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಜಿಲ್ಲೆಯ 32 ಶಾಲೆಗೆ ಶೇ.100ರಷ್ಟು ಫಲಿತಾಂಶ

2022-23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ, ಕಣಗಾಲು, ಭುವನಹಳ್ಳಿ, ಹಲಗನಹಳ್ಳಿ, ದೊಡ್ಡಕಮರವಳ್ಳಿ, ಮುತ್ತೂರು, ಬೆಣಗಾಲು, ಚಿಕ್ಕನೇರಳೆ, ಹಾರನಹಳ್ಳಿ ಶಾಲೆ, ಮೈಸೂರು ಉತ್ತರ ವಲಯದ ಸರ್ಕಾರಿ ಅಂದ ಮಕ್ಕಳ ಶಾಲೆ, ಕೈಲಾಸಪುರಂ, ಮೇದರ್‌ಬ್ಲಾಕ್, ಪಡುವಾರಹಳ್ಳಿ ಶಾಲೆ, ಹುಣಸೂರು ತಾಲೂಕಿನ ಮುಳ್ಳೂರು, ಧರ್ಮಾಪುರ, ಸಿಂಗನಮಾರನಹಳ್ಳಿ ಶಾಲೆ, ಮೈಸೂರು ದಕ್ಷಿಣ ವಲಯದ ಜಾಕಿಕ್ವಾಟ್ರರ್ಸ್ ಆದರ್ಶ ವಿದ್ಯಾಲಯ, ನಂಜನಗೂಡಿನ ದೇಬೂರು ಆದರ್ಶ ವಿದ್ಯಾಲಯ, ಹುರ ಹಾಗೂ ದೊಡ್ಡಕವಲಂದೆ ಶಾಲೆ, ಹೆಚ್.ಡಿ.ಕೋಟೆಯ ಹಿರೆಹಳ್ಳಿ ಎ-ಕಾಲೋನಿ, ಆದರ್ಶ ವಿದ್ಯಾಲಯ, ತಿ.ನರಸೀಪುರದ ದೊಡ್ಡಮಲಗೂಡು, ಹೆಗ್ಗೂರು, ಮೇದಿನಿ ಶಾಲೆ, ಮೈಸೂರು ಗ್ರಾಮಾಂತರದ ಬೀರಿಹುಂಡಿ, ಹಿನಕಲ್, ಡಿ.ಸಾಲುಂಡಿ, ಎಸ್.ಕಲ್ಲಹಳ್ಳಿ, ಗೋಪಾಲಪುರ, ಪುಟ್ಟೇಗೌಡನಹುಂಡಿ ಹಾಗೂ ಡಿಎಂಜಿ ಹಳ್ಳಿ ಶಾಲೆ ಸೇರಿ ಜಿಲ್ಲೆಯಲ್ಲಿ ಒಟ್ಟು 32 ಶಾಲೆಗಳು ಶೇ.100ರಷ್ಟು ಫಲಿತಾಂಶ ದಾಖಲಿಸಿವೆ.

ಮಂಡ್ಯದ ವಿವಿಧೆಡೆ ರೆಬಲ್‌ಸ್ಟಾರ್ ಅಂಬರೀಶ್ ಹುಟ್ಟುಹಬ್ಬ ಆಚರಣೆ

• ಡಿ.ಎ.ಕೆರೆಯಲ್ಲಿ ಅಂಬಿ ಪುತ್ಥಳಿಗೆ ಸುಮಲತಾ ಪೂಜೆ • ಮಂಡ್ಯದಲ್ಲಿ ವಿಕಲಚೇತನರಿಗೆ ಬೈಕ್ ವಿತರಣೆ • ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಣೆ



ಮಂಡ್ಯ, ಮೇ 29– ಮಾಜಿ ಸಚಿವ ರೆಬಲ್‌ಸ್ಟಾರ್ ಅಂಬರೀಶ್ ಅವರ 71ನೇ ಹುಟ್ಟುಹಬ್ಬವನ್ನು ಜಿಲ್ಲೆಯ ವಿವಿಧೆಡೆ ಸಂಭ್ರಮದಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.

ತ್ರಿಚಕ್ರ ವಾಹನ ವಿತರಣೆ: ಅಂಬರೀಶ್ ಹುಟ್ಟುಹಬ್ಬ ಅಂಗವಾಗಿ ಮಂಡ್ಯದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಸಂಸದೆ ಸುಮಲತಾ ಅಂಬರೀಶ್ ತಮ್ಮ ಸಂಸದರ ನಿಧಿ ಅನುದಾನದಲ್ಲಿ 10 ಮಂದಿ ವಿಕಲ ಚೇತನರಿಗೆ ತ್ರಿಚಕ್ರ ವಾಹನ ವಿತರಿಸಿದರು. ಈ ವೇಳೆ ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ ಸೇರಿದಂತೆ ಅಧಿಕಾರಿಗಳು ಹಾಗೂ ಸುಮಲತಾ ಬೆಂಬಲಿಗರು ಉಪಸ್ಥಿತರಿದ್ದರು.

ಅಂಬಿ ಸ್ಮಾರಕ ಮತ್ತು ಪುತ್ಥಳಿಗೆ ಪೂಜೆ: ಮದ್ದೂರು ತಾಲೂಕಿನ ದೊಡ್ಡರಸಿನಕೆರೆಯಲ್ಲಿ ಅಭಿಮಾನಿಗಳು ನಿರ್ಮಿಸಿರುವ ಅಂಬರೀಶ್ ಪುತ್ಥಳಿಗೆ ಸಂಸದೆ ಸುಮಲತಾ ಅಂಬರೀಶ್ ಪೂಜೆ ಸಲ್ಲಿಸಿದರು. ಗ್ರಾಮದಲ್ಲಿರುವ ಅಂಬಿ ಸರ್ಕಲ್‌ಗೆ ಭೇಟಿ ನೀಡಿದ ಅವರು, ಅಂಬರೀಶ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಕೇಕ್ ಕತ್ತರಿಸಿ ಅಭಿಮಾನಿಗಳಿಗೆ ಸಿಹಿ ತಿನಿಸಿದರು.

ಈ ವೇಳೆ ಸುಮಲತಾ ಮಾತನಾಡಿ, ಮಂಡ್ಯ ಜಿಲ್ಲೆಯ ಜನತೆ ನನ್ನ ಪತಿ ಅಂಬರೀಶ್ ಅವರ ಮೇಲೆ ಇಟ್ಟಿರುವ ಅಭಿಮಾನದಿಂದ ಇಂದು ನಾನು ಸಂಸದೆಯಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗಿದೆ. ಜನತೆಯ ಈ ಋಣವನ್ನು ಎಂದಿಗೂ ನಾನು ಮರೆಯುವುದಿಲ್ಲ. ಅಂಬರೀಶ್ ಹುಟ್ಟುಹಬ್ಬವನ್ನು ಜಿಲ್ಲೆಯ ಅನೇಕ ಕಡೆ ಆಚರಿಸುತ್ತಿರುವುದು ನನಗೆ ಸಂತಸ ತಂದರೂ, ಮತ್ತೊಂದೆಡೆ ನನ್ನ ಪತಿಯನ್ನು ಕಳೆದುಕೊಂಡಿರುವ ನೋವು ನನ್ನನ್ನು ಕಾಡುತ್ತಿದೆ ಎಂದರು.

ಇದಕ್ಕೂ ಮುನ್ನಾ, ಗ್ರಾಮದ ಮುಖ್ಯ ದ್ವಾರದಲ್ಲಿ ನಿರ್ಮಿಸಿರುವ ಅಂಬರೀಶ್ ಸ್ಮಾರಕಕ್ಕೆ ಪೂಜೆ ಸಲ್ಲಿಸಿ ಅಲ್ಲೂ ಸಹ ಅಭಿಮಾನಿಗಳೊಂದಿಗೆ ಅಂಬರೀಶ್ ಹುಟ್ಟುಹಬ್ಬ ಆಚರಿಸಿ ಸಂಭ್ರಮಿಸಿದರು.

ಇದೇ ವೇಳೆ ಅಂಬಿ ಸರ್ಕಲ್ ಅಧ್ಯಕ್ಷ ಮಹೇಶ್, ಪದಾಧಿಕಾರಿಗಳಾದ ಸಂದೀಪ್, ಪ್ರಕಾಶ್, ಅಭಿ, ರವಿ, ಪ್ರದೀಪ್, ಡಿ.ಎಚ್. ಮಹೇಶ, ಮಧು, ಚಿಕ್ಕ, ಮನು, ಜೀವನ್, ಸಾಗರ್, ಸುನೀಲ್, ಡೈರಿ ಶಿವ, ಪ್ರಸನ್ನ, ಅಮರ್, ಮಮತ, ರಮೇಶ್ ಸೇರಿದಂತೆ ಹಲವರಿದ್ದರು. ಸುಮಲತಾ ಗ್ರಾಮದಿಂದ ತೆರಳಿದ 3 ಗಂಟೆ ನಂತರ ಅಂಬಿ ಪುತ್ರ, ನಟ ಅಭಿಷೇಕ್ ಗ್ರಾಮಕ್ಕೆ ಆಗಮಿಸಿ ಅಂಬರೀಷ್ ಪುತ್ಥಳಿಗೆ ಮತ್ತು ಸ್ಮಾರಕಕ್ಕೆ ಮಾಲಾರ್ಪಣೆ ಮಾಡಿದರು.

ಜನತೆ 'ಕೈ' ಗ್ಯಾರಂಟಿಗಳ ಎದುರು ನೋಡುತ್ತಿದ್ದಾರೆ: ಸುಮಲತಾ

ಭಾರತೀನಗರ, ಮೇ 29– ರಾಜ್ಯದ ಜನತೆ ಕಾಂಗ್ರೆಸ್‌ನ 5 ಗ್ಯಾರಂಟಿಗಳನ್ನು ಎದುರು ನೋಡುತ್ತಿದ್ದಾರೆ ಎಂದು ಸಂಸದೆ ಸುಮಲತಾ ಅಂಬರೀಶ್ ತಿಳಿಸಿದರು.

ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ನಾಯಕರು ಚುನಾವಣೆಗೂ ಮುನ್ನಾ 5 ಗ್ಯಾರಂಟಿಗಳನ್ನು ನೀಡಿ ಮತ ಪಡೆದಿದ್ದಾರೆ. ಇದೀಗ ಅಧಿಕಾರಕ್ಕೆ ಬಂದಿರುವ ಅವರು ನುಡಿದಂತೆ ನಡೆಯುವುದು ಒಳ್ಳೆಯ ಬೆಳವಣಿಗೆ. ಕಾಂಗ್ರೆಸ್ ಪಕ್ಷ ಆಶ್ವಾಸನೆ ಈಡೇರಿಸದಿದ್ದರೇ ಜನರೇ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಜಿಲ್ಲೆಯಲ್ಲಿ ಕೆ.ಆರ್.ಪೇಟೆ ಹೊರತುಪಡಿಸಿ ಬಿಜೆಪಿಗೆ ಮೊದಲಿನಿಂದಲೂ ನೆಲೆ ಇರಲಿಲ್ಲ. ನಾವು ಸಹ ಅಧಿಕಾರಕ್ಕೆ ತರಲು ಬಹಳಷ್ಟು ಪ್ರಯತ್ನ ಮಾಡಿದೆವು. ಸಾಧ್ಯವಾಗಲಿಲ್ಲ. ಜಿಲ್ಲೆಯ 7 ತಾಲೂಕಿನಲ್ಲೂ ಗೆಲ್ಲಲು ಸಾಧ್ಯವಾಗದಿದ್ದರೂ ಕಳೆದ ಚುನಾವಣೆಗಿಂತ ಈ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಬಿಜೆಪಿ ಹೆಚ್ಚು ಮತ ಗಳಿಸಿದೆ. ಸುನಾಮಿ ರೀತಿ ಕಾಂಗ್ರೆಸ್ ಪರ ಅಲೆ ಎದ್ದಿದ್ದರಿಂದ ಕಾಂಗ್ರೆಸ್‌ಗೆ ಬಹುಮತ ಬರಲು ಕಾರಣವಾಯಿತು. ಮುಂದಿನ ದಿನಗಳಲ್ಲಿ ಬಿಜೆಪಿ ಜಿಲ್ಲೆಯ 7 ತಾಲೂಕಿನಲ್ಲೂ ನೆಲೆಯೂರುವ ಭರವಸೆ ನನಗಿದೆ ಎಂದರು.

ಮೊದಲು ಮಗನ ಮದುವೆ ಮಾಡೋಣ: ಇದೀಗ ತಾನೇ ವಿಧಾನಸಭಾ ಚುನಾವಣೆ ಮುಗಿದಿದೆ. ಲೋಕಸಭಾ ಚುನಾವಣೆಗೆ ಇನ್ನು ಒಂದು ವರ್ಷ ಬಾಕಿ ಇದ್ದು, ಮೊದಲು ಮಗನ ಮದುವೆ ಮಾಡೋಣ. ಆಮೇಲೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಯೋಚಿಸೋಣ ಎಂದ ಅವರು ಪಕ್ಷಾತೀತವಾಗಿ ಎಲ್ಲಾ ರಾಜಕೀಯ ನಾಯಕರಿಗೆ ಮದುವೆ ಆಹ್ವಾನ ನೀಡಲಾಗಿದೆ ಎಂದರು. ಮಾಜಿ ಪ್ರಧಾನಿ ದೇವೇಗೌಡರು ಹಿರಿಯರು ಅವರು ಸಂಸತ್‌ಗೆ ಬಂದಾಗ ಅವರನ್ನು ಮತನಾಡಿಸಿದೆ. ಅವರಿಗೆ ಗೌರವ ಕೊಡುವುದು ನಮ್ಮ ಆದ್ಯ ಕರ್ತವ್ಯ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಅಂಬಿ ಹೆಸರಲ್ಲಿ ಪ್ರತಿಭಾ ಪುರಸ್ಕಾರ: ನಗರದ ಕರ್ನಾಟಕ ಸಂಘದ ಆವರಣದಲ್ಲಿ ನಟ ಅಂಬರೀಶ್ ಅವರ 71ನೇ ಜನ್ಮದಿನದ ಅಂಗವಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಈ ವೇಳೆ ಮಾತನಾಡಿದ ಅಪರ ಜಿಲ್ಲಾಧಿಕಾರಿ ನಾಗರಾಜು, ನಟ ಅಂಬರೀಶ್ ಸಾಮಾಜಿಕ ಕಳಕಳಿ ಹೊಂದಿದ್ದರು. ಸಿನಿಮಾ ರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಅಪಾರ ಅಭಿಮಾನಿಗಳನ್ನು ಹೊಂದಿದ್ದರು. ಇಷ್ಟಕ್ಕೆ ಸುಮ್ಮನಾಗದ ಇವರು ರಾಜಕೀಯ ಕ್ಷೇತ್ರದಲ್ಲೂ ಉತ್ತಮ ಹೆಸರು ಮಾಡಿದ ಅಂಬರೀಶ್ ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದರು ಎಂದು ಬಣ್ಣಿಸಿದರು.

ವೇದಿಕೆಯಲ್ಲಿ ಮಾಜಿ ಶಾಸಕ ಎಂ. ಶ್ರೀನಿವಾಸ್, ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶಗೌಡ, ಅಖಿಲ ಕರ್ನಾಟಕ ಅಂಬರೀಶ್ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ಬೇಲೂರು ಸೋಮಶೇಖರ್, ಪದವಿ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಸ್.ಉಮೇಶ್, ಮುಖಂಡರಾದ ಅರವಿಂದ್, ಎಚ್.ಪಿ.ಸತೀಶ್, ಕಾರ್ತಿಕ್, ಅರುಣ ಕುಮಾರಿ ಸೇರಿದಂತೆ ಇತರರಿದ್ದರು. ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ ಸೇರಿದಂತೆ ಅನೇಕ ಹಳ್ಳಿಗಳಲ್ಲಿ ಅಭಿಮಾನಿಗಳು ಅಂಬರೀಶ್ ಹುಟ್ಟುಹಬ್ಬವನ್ನು ಆಚರಿಸಿದರು.

ಭಾರೀ ಗಾಳಿ–ಮಳೆ: ಕೆಆರ್‌ಎಸ್‌ನಲ್ಲಿ ಧರೆಗುರುಳಿದ ಮರಗಳು



ಶ್ರೀರಂಗಪಟ್ಟಣ, ಮೇ 29– ಸೋಮವಾರ ಸಂಜೆ ಸುರಿದ ಭಾರೀ ಗಾಳಿ ಸಮೇತ ಆಲಿಕಲ್ಲು ಮಳೆಗೆ ಕೆ.ಆರ್.ಸಾಗರದ ಬೃಂದಾವನದಲ್ಲಿ ಹತ್ತಕ್ಕೂ ಹೆಚ್ಚು ಮರಗಳು ಧರೆಗುರುಳಿದೆ. ಸಂಜೆ 4.30ರ ವೇಳೆಗೆ ಆರಂಭವಾದ ಭಾರೀ ಗಾಳಿ ಸಮೇತ ಆಲಿಕಲ್ಲು ಮಳೆಗೆ ವಿಶ್ವ ವಿಖ್ಯಾತ ಬೃಂದಾವದಲ್ಲಿದ್ದ ಸುರಗಿ, ರೈನ್ ಟ್ರಿ, ಅರಳಿ ಮರ, ಪೆನ್ನಾ, ಫಾರಂ, ಮಹಾನಂದಿ ಸೇರಿದಂತೆ 10ಕ್ಕೂ ಹೆಚ್ಚು ಮರಗಳು ನೆಲಕ್ಕುರುಳಿದೆ. ದೋಣಿ ವಿಹಾರ ಕೇಂದ್ರ ಮುಂಭಾಗದಲ್ಲಿದ್ದ ಭಾರೀ ಗಾತ್ರದ ಅರಳಿ ಮರ ಬುಡಸಮೇತ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಅಂಗಡಿ ಮೇಲೆ ಬಿದ್ದಿದ್ದು, ಈ ವೇಳೆ ಅಲ್ಲಿದ್ದ ಸಿಬ್ಬಂದಿ ಹಾಗೂ ಪ್ರವಾಸಿಗರು ಓಡಿ ಹೋಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎನ್ನಲಾಗಿದೆ. ಅಲ್ಲದೇ ತೋಟಗಾರಿಕೆ ಇಲಾಖೆ ನರ್ಸರಿ ತೋಟದಲ್ಲಿ ಮರಗಳ ಕೊಂಬೆಗಳು ಬಿದ್ದು ವಿವಿಧ ಜಾತಿಯ ಗಿಡಗಳು ನಾಶವಾಗಿದೆ.

ಶ್ರೀರಂಗಪಟ್ಟಣ ಸೇರಿದಂತೆ ಮಂಡ್ಯ ಜಿಲ್ಲೆ ಅಭಿವೃದ್ಧಿಗೆ ಬದ್ಧ

ಮಂಡ್ಯದಲ್ಲಿ ಶಾಸಕರ ಕಚೇರಿ ಉದ್ಘಾಟಿಸಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಭರವಸೆ

ಮಂಡ್ಯ, ಮೇ 29– ಶ್ರೀರಂಗಪಟ್ಟಣ ಸೇರಿದಂತೆ ಮಂಡ್ಯ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ನಾನು ಸೇರಿದಂತೆ ಜಿಲ್ಲೆಯ 6 ಮಂದಿ ಕಾಂಗ್ರೆಸ್ ಶಾಸಕರು ಬದ್ಧರಾಗಿದ್ದೇವೆ ಎಂದು ಶಾಸಕ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ ಭರವಸೆ ನೀಡಿದರು.

ಶ್ರೀರಂಗಪಟ್ಟಣ ಕ್ಷೇತ್ರ ವ್ಯಾಪ್ತಿಯ ಮಂಡ್ಯ ತಾಲೂಕಿನ ಗ್ರಾಮಾಂತರ ಜನರ ಸಮಸ್ಯೆ ಆಲಿಸುವ ಸಲುವಾಗಿ ಮಂಡ್ಯ ನಗರದ ಪೊಲೀಸ್ ಕಾಲೋನಿ ಬಳಿ ಸೋಮವಾರ ನೂತನ ಕಚೇರಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.



ಸಾರ್ವಜನಿಕರ ಸಮಸ್ಯೆ ಆಲಿಸಿ, ಅಹವಾಲು ಸ್ವೀಕರಿಸಲು ಶಾಸಕರ ಕಚೇರಿಯನ್ನು ಮಂಡ್ಯದಲ್ಲಿ ತೆರೆಯಲಾಗಿದ್ದು, ಶ್ರೀಸಾಮಾನ್ಯರ ಕುಂದು ಕೊರತೆ, ಸಮಸ್ಯೆಗಳನ್ನು ಆಲಿಸಿ, ದೂರುಗಳಿಗೆ ಅಧಿಕಾರಿಗಳ ಮೂಲಕ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುತ್ತೇವೆ ಎಂದರು.

ಕ್ಷೇತ್ರ ಮತ್ತು ಜಿಲ್ಲೆ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಿ, ಅಭಿವೃದ್ಧಿಯೆಡೆಗೆ ಎಲ್ಲರನ್ನೂ ಕೊಂಡೊಯ್ಯಲಾಗುವುದು. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಜೊತೆಗೂಡಿ, ಎಲ್ಲರ ಸಹಕಾರದೊಂದಿಗೆ ಜಿಲ್ಲೆಯ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಲಾಗುವುದು. ಜಿಲ್ಲೆಯ ಅಭಿವೃದ್ಧಿಯೇ ನಮ್ಮ ಮುಖ್ಯ ಗುರಿ ಎಂದರು.

ಕ್ಷೇತ್ರ ವ್ಯಾಪ್ತಿ ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ಕಾಯಕಲ್ಪ ನೀಡಲು ಚಿಂತಿಸಲಾಗಿದೆ. ಪಾರಂಪಾರಿಕ, ಐತಿಹಾಸಿಕ ಸ್ಥಳವಾಗಿರುವ ಶ್ರೀರಂಗಪಟ್ಟಣ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಪ್ರವಾಸಿ ತಾಣಗಳಿಗೆ ಹೆಸರುವಾಸಿಯಾಗಿರುವ ಶ್ರೀರಂಗಪಟ್ಟಣದ ಪ್ರವಾಸಿತಾಣಗಳನ್ನು ಮಾದರಿಯಾಗಿ ಅಭಿವೃದ್ಧಿಪಡಿಸಲು ಕಾಂಗ್ರೆಸ್ ಸರ್ಕಾರ ಸಿದ್ಧವಿದೆ ಎಂದರು.

ನನಗೆ ಸಚಿವ ಸ್ಥಾನದ ಆಸೆ ಇಲ್ಲ. ನಮ್ಮ ಪಕ್ಷದ ಸರ್ಕಾರವೇ ಅಧಿಕಾರದಲ್ಲಿರುವ ಕಾರಣ ನನ್ನ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದೇ ನನ್ನ ಗುರಿ. ನಾನು ಯಾರನ್ನು ಸಹ ಟೀಕೆ, ಟಿಪ್ಪಣಿ ಮಾಡದೇ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸುತ್ತೇನೆ. ಈಗಾಗಲೇ ಕ್ಷೇತ್ರಕ್ಕೆ ಯಾವ್ಯಾವ ಅಭಿವೃದ್ಧಿ ಕೆಲಸಗಳಾಗಬೇಕೆಂಬ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದು, ಶೀಘ್ರವೇ ಅಭಿವೃದ್ಧಿ ಕಾರ್ಯಗಳು ಆರಂಭವಾಗಲಿವೆ ಎಂದರು.

ಶ್ರೀರಂಗಪಟ್ಟಣ ಜೊತೆಗೆ ನಾನು ಪ್ರತಿನಿಧಿಸುವ ಮಂಡ್ಯ ತಾಲೂಕಿನ ಕೊತ್ತತ್ತಿ ಹೋಬಳಿಯ ಮೊದಲ ಮತ್ತು ಎರಡನೇ ವೃತ್ತದ ಭಾಗಕ್ಕೆ ಬರುವ ಎಲ್ಲಾ ಹಳ್ಳಿಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಇಂದು ಮತ್ತು ನಾಳೆ ಈ ಭಾಗದ ಅಧಿಕಾರಿಗಳ ಜೊತೆಗೆ ಚರ್ಚಿಸಿ, ಅಭಿವೃದ್ಧಿ ಕಾರ್ಯಗಳ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ಹೇಳಿದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ವೆಂಕಟೇಶ್, ತಿಮ್ಮೇಗೌಡ, ಸುರೇಶ್, ಜಿಪಂ ಮಾಜಿ ಸದಸ್ಯ ಮಂಜುನಾಥ್, ಗ್ರಾಪಂ ಸದಸ್ಯೆ ಸುವರ್ಣವತಿ ಮತ್ತಿತರರಿದ್ದರು.

ಜಯಕುಮಾರ್‌ಗೆ ಶ್ರೇಷ್ಠ ನಾಗರಿಕ ಸೇವಾರತ್ನ ಪ್ರಶಸ್ತಿ




ಮಂಡ್ಯ, ಮೇ 29– ನಗರದ ಪಿಇಎಸ್ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕೆ.ಎಸ್.ಜಯಕುಮಾರ್ ಅವರಿಗೆ ಶ್ರೇಷ್ಠ ನಾಗರಿಕ ಸೇವಾರತ್ನ ರಾಜ್ಯ ಪ್ರಶಸ್ತಿ ಲಭಿಸಿದೆ.

ಮೈಸೂರಿನ ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ವತಿಯಿಂದ ಜಯಕುಮಾರ್ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಗುರುತಿಸಿ ಪ್ರಶಸ್ತಿ ನೀಡಲಾಗಿದೆ.

ಕುನೋ ಕಾಡಿನ ದೊಡ್ಡ ಆವರಣಕ್ಕೆ ಮತ್ತೊಂದು ಚೀತಾ

ಭೋಪಾಲ್: ಕುನೋ ರಾಷ್ಟ್ರೀಯ ಉದ್ಯಾನವನ (ಕೆಎನ್‌ಪಿ)ನಲ್ಲಿ ಮತ್ತೊಂದು ಚೀತಾವನ್ನು ಬೇಟೆಗೆ ಅನುಕೂಲಕರವಾಗಿರುವ ದೊಡ್ಡ ಆವರಣಕ್ಕೆ ಬಿಡುಗಡೆ ಮಾಡಲಾಗಿದೆ.



ಈ ಮೂಲಕ ಉದ್ಯಾನವನದ ದೊಡ್ಡ ಆವರಣದಲ್ಲಿರುವ ಚೀತಾಗಳ ಸಂಖ್ಯೆ 7 ಕ್ಕೆ ಏರಿಕೆಯಾಗಿದೆ. 3–4 ವರ್ಷ ವಯಸ್ಸಾಗಿರುವ ದಕ್ಷಿಣ ಆಫ್ರಿಕಾದ ಹೆಣ್ಣು ಚೀತಾ ನೀರ್ವಾ ಭಾನುವಾರ ಸಂಜೆ ಉದ್ಯಾನವನದ ಬೇಟೆಗೆ ಮುಕ್ತವಾಗಿರುವ ಆವರಣ ಪ್ರವೇಶಿಸಿದೆ ಎಂದು ರಾಷ್ಟ್ರೀಯ ಉದ್ಯಾನವನದ ವಿಭಾಗೀಯ ಅರಣ್ಯಾಧಿಕಾರಿ (ಡಿಎಫ್‌ಒ) ಪ್ರಕಾಶ್ ಕುಮಾರ್ ವರ್ಮಾ ತಿಳಿಸಿದ್ದಾರೆ.

ಇಲ್ಲಿಯವರೆಗೆ, ಏಳು ಚಿರತೆಗಳನ್ನು ಮುಕ್ತ ವಾತಾವರಣಕ್ಕೆ ಬಿಡುಗಡೆ ಮಾಡಲಾಗಿದೆ, ಆದರೆ ಇನ್ನೂ 10 ಚೀತಾಗಳನ್ನು ದೊಡ್ಡ ಆವರಣಗಳಲ್ಲಿ ಇರಿಸಲಾಗಿದೆ ಎಂದು ಅವರು ಹೇಳಿದರು.

ಉಳಿದ ಚಿರತೆಗಳನ್ನು ಕಾಡಿಗೆ ಬಿಡುವ ಕುರಿತು ಕೇಂದ್ರ ರಚಿಸಿರುವ ಸ್ಟೀರಿಂಗ್ ಸಮಿತಿ ನಿರ್ಧಾರ ಕೈಗೊಳ್ಳಲಿದೆ. ಸಮಿತಿಯ ಸದಸ್ಯರು ಮಂಗಳವಾರ ಕೆಎನ್‌ಪಿಗೆ ಭೇಟಿ ನೀಡಲಿದ್ದಾರೆ ಎಂದು ಸ್ಥಳೀಯ ಅಧಿಕಾರಿ ತಿಳಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಹತ್ಯೆಗೈದ ಕಾಮುಕನಿಗೆ ಗಲ್ಲು

15 ದಿನದಲ್ಲೇ ಶಿಕ್ಷೆ ಪ್ರಕಟಿಸಿದ ಕೋರ್ಟ್

ಮಥುರಾ: ಒಂಬತ್ತು ವರ್ಷದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಹತ್ಯೆ ಮಾಡಿದ ವ್ಯಕ್ತಿಗೆ ಮಥುರಾದ ಪೋಕ್ಸೊ ನ್ಯಾಯಾಲಯ ಸೋಮವಾರ ಗಲ್ಲು ಶಿಕ್ಷೆ ವಿಧಿಸಿದೆ ಎಂದು ಸರ್ಕಾರಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೋಕ್ಸೊ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ರಾಮ್ ಕಿಶೋರ್ ಯಾದವ್ ಅವರು, ಎರಡೂ ಕಡೆಯ ವಾದ ಆಲಿಸಿದ ನಂತರ ಆರೋಪಿ ಮೊಹಮ್ಮದ್ ಸೈಫ್‌ಗೆ ಮರಣದಂಡನೆ ಶಿಕ್ಷೆ ವಿಧಿಸಿದ್ದಾರೆ ಎಂದು ವಿಶೇಷ ಜಿಲ್ಲಾ ಸರ್ಕಾರಿ ವಕೀಲ(ಡಿಜಿಸಿ) ಅಲ್ಕಾ ಉಪ್ಮನ್ಯು ಅವರು ಹೇಳಿದ್ದಾರೆ. ನ್ಯಾಯಾಧೀಶರು ಕೇವಲ 15 ದಿನಗಳ ವಿಚಾರಣೆ ಬಳಿಕ ತೀರ್ಪು ಪ್ರಕಟಿಸಿದ್ದಾರೆ. ಪ್ರಾಸಿಕ್ಯೂಷನ್ ಪ್ರಕಾರ, ಏಪ್ರಿಲ್ 9 ರಂದು ಮಥುರಾದ ಔರಂಗಾಬಾದ್ ಪ್ರದೇಶದಲ್ಲಿ ಬಾಲಕ ಕಾಣೆಯಾದ ಬಗ್ಗೆ ಅಪ್ರಾಪ್ತ ಬಾಲಕನ ತಂದೆ ಸದರ್ ಬಜಾರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

ಮರುದಿನ, ಸಿಸಿಟಿವಿ ದೃಶ್ಯಗಳ ಆಧಾರದ ಮೇಲೆ, ಪೊಲೀಸರು ಪ್ರಸ್ತುತ ಔರಂಗಾಬಾದ್‌ನಲ್ಲಿ ವಾಸಿಸುತ್ತಿರುವ ಕಾನ್ಪುರ ನಿವಾಸಿ ಸೈಫ್‌ನನ್ನು ಬಂಧಿಸಿದ್ದರು. ಸೈಫ್ ಮೃತ ಬಾಲಕನ ಚಿಕ್ಕಪ್ಪನ ಅಂಗಡಿಯಲ್ಲಿ ಉದ್ಯೋಗಿಯಾಗಿದ್ದರು.

ವಿಚಾರಣೆಯಲ್ಲಿ, ಆರೋಪಿಯು ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಹತ್ಯೆ ಮಾಡಿದ್ದನ್ನು ಒಪ್ಪಿಕೊಂಡಿದ್ದನು. ಬಳಿಕ ಪೊಲೀಸರು ನಾಪತ್ತೆ ಪ್ರಕರಣವನ್ನು ಹತ್ಯೆ ಪ್ರಕರಣವಾಗಿ ಪರಿವರ್ತಿಸಲಾಯಿತು. ಭಾರತೀಯ ದಂಡ ಸಂಹಿತೆ ಮತ್ತು 6 ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ ಅಡಿ ಕೇಸ್ ದಾಖಲಿಸಲಾಗಿತ್ತು.

ಐಪಿಎಲ್‌ಗೆ ಚೆನ್ನೈ ಸ್ಟಾರ್ ಪ್ಲೇಯರ್ ಅಂಬಾಟಿ ರಾಯುಡು ನಿವೃತ್ತಿ ಘೋಷಣೆ

ಚೆನ್ನೈ: ಚೆನ್ನೈ ತಂಡದ ಸ್ಟಾರ್ ಆಟಗಾರ ಅಂಬಟಿ ರಾಯುಡು ದೊಡ್ಡ ಘೋಷಣೆ ಮಾಡಿದ್ದು, ಅವರು ಐಪಿಎಲ್‌ನಿಂದ ನಿವೃತ್ತಿ ಘೋಷಿಸಿದ್ದಾರೆ.



ಇಂದು ಗುಜರಾತ್‌ನ ಅಹ್ಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಗುಜರಾತ್ ಟೈಟನ್ಸ್ ನಡುವಿನ ಫೈನಲ್ ಪಂದ್ಯವೇ ತಮ್ಮ ಅಂತಿಮ ಪಂದ್ಯ ಎಂದು ಹೇಳಿಕೊಂಡಿದ್ದಾರೆ.

ರಾಯುಡು 2010 ರಲ್ಲಿ ಮುಂಬೈ ಇಂಡಿಯನ್ಸ್ ಪರ ಆಡುವ ಮೂಲಕ ಐಪಿಎಲ್‌ಗೆ ಪಾದಾರ್ಪಣೆ ಮಾಡಿದರು ಮತ್ತು 2017ರ ಋತುವಿನವರೆಗೆ ಮುಂಬೈ ತಂಡಕ್ಕಾಗಿ ಆಡಿದರು. ರಾಯುಡು ಅವರು 2018ರ ಋತುವಿಗಾಗಿ ಸಿಎಸ್‌ಕೆ ತಂಡ ಸೇರಿಕೊಂಡರು. ಟೀಂ ಇಂಡಿಯಾದ ಮಾಜಿ ಆಟಗಾರ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಪ್ಲೇಯರ್ ಅಂಬಟಿ ರಾಯುಡು ಶೀಘ್ರದಲ್ಲೇ ಆಂಧ್ರಪ್ರದೇಶ ರಾಜಕೀಯಕ್ಕೆ ಎಂಟ್ರಿ ಕೊಡಲಿದ್ದಾರೆಯೇ ಎಂಬ ಪ್ರಶ್ನೆ ಮೂಡುತ್ತಿದೆ. ಅವರು ಶೀಘ್ರದಲ್ಲೇ ಎಪಿ ರಾಜಕೀಯಕ್ಕೆ ಪಾದಾರ್ಪಣೆ ಮಾಡುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ. ಇದೇ ಕಾರಣಕ್ಕೆ ಕ್ರಿಕೆಟ್ ನಿಂದ ರಾಯುಡು ವಿಮುಖರಾಗಿದ್ದಾರೆ ಎನ್ನುವ ಮಾತುಗಳು ಕೂಡ ಕೇಳಿಬರುತ್ತಿವೆ



ಮಂಡ್ಯ ಶಾಸಕ ಪಿ. ರವಿಕುಮಾರ್ ಗಣಿಗ ಅವರು ಶ್ರೀ ಸುತ್ತೂರು ಕ್ಷೇತ್ರಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು. ಮೂಗೂರು ನಂಜುಂಡಸ್ವಾಮಿ, ಜ.ಮ.ತಿಪ್ಪೇಸ್ವಾಮಿ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.



ಕೆ.ಆರ್.ನಗರ ಶಾಸಕ ಡಿ.ರವಿಶಂಕರ್, ಶ್ರೀ ಸುತ್ತೂರು ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಿ, ಶ್ರೀಗಳ ಆಶೀರ್ವಾದ ಪಡೆದರು. ಸಿ.ಪಿ.ರಮೇಶ್, ಹಾಡ್ಯ ಮಹದೇವಸ್ವಾಮಿ ಮತ್ತಿತರರಿದ್ದರು.

ಕನ್ನಡ ಮಾಧ್ಯಮದಲ್ಲಿ ಪಿಯುಸಿ ವಿಜ್ಞಾನ ಶಿಕ್ಷಣ ಸಂಪೂರ್ಣ ಉಚಿತ

ಮೈಸೂರು, ಮೇ 29– ನೃಪತುಂಗ ಕನ್ನಡ (ಮಾಧ್ಯಮ) ವಿಜ್ಞಾನ ಮತ್ತು ವಾಣಿಜ್ಯ ಪದವಿಪೂರ್ವ ಕಾಲೇಜು ರಾಜ್ಯದಲ್ಲಿ ಕನ್ನಡ ಮಾಧ್ಯಮದಲ್ಲಿ ಪಿಯುಸಿ ಹಂತದಲ್ಲಿ ವಿಜ್ಞಾನ ವಿಷಯಗಳನ್ನು ಬೋಧಿಸುತ್ತಿರುವ ಏಕೈಕ ಕಾಲೇಜಾಗಿದೆ.

ಪ್ರಸಕ್ತ ಸಾಲಿನಲ್ಲಿ ಪಿಸಿಎಂಬಿ (ಭೌತ ವಿಜ್ಞಾನ, ರಸಾಯನ ವಿಜ್ಞಾನ, ಜೀವ ವಿಜ್ಞಾನ ಹಾಗೂ ಗಣಿತ) ಮತ್ತು ಪಿಸಿಎಂ.ಸಿಎಸ್ (ಭೌತ ವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಹಾಗೂ ಕಂಪ್ಯೂಟರ್ ವಿಜ್ಞಾನ) ಐಚ್ಛಿಕ ವಿಷಯಗಳಾಗಿ ಲಭ್ಯವಿದೆ.

ವಿಶೇಷವೇನೆಂದರೆ ವಿಜ್ಞಾನ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳಿಗೆ ಎರಡು ವರ್ಷವೂ ಸಂಪೂರ್ಣ ಶುಲ್ಕ ವಿನಾಯಿತಿ ನೀಡಲಾಗುತ್ತದೆ.

ಉಚಿತ ವಸತಿ ಸೌಲಭ್ಯವನ್ನು (ಊಟ ಪ್ರತ್ಯೇಕ) ಮೈಸೂರಿನ ಕುದೇರು ಮಠದ ಶಾಖಾ ಮಠದಲ್ಲಿ ಒದಗಿಸಲಾಗುತ್ತದೆ.

ವಾಣಿಜ್ಯ ವಿಷಯವನ್ನು ಐಚ್ಛಿಕವಾಗಿ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಕೈಗೆಟಕುವ ಶುಲ್ಕದಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತದೆ. ಈ ವಿದ್ಯಾರ್ಥಿಗಳಿಗೆ ಐಚ್ಛಿಕ ವಿಷಯಗಳಲ್ಲಿ ಕಂಪ್ಯೂಟರ್ ವಿಜ್ಞಾನದ ಕಲಿಕೆ ಕಡ್ಡಾಯವಾಗಿದ್ದು, ಮಕ್ಕಳ ಭವಿಷ್ಯಕ್ಕೆ ಸಹಕಾರಿಯಾಗಿರುತ್ತದೆ.

ಆಸಕ್ತ ವಿದ್ಯಾರ್ಥಿ ವಿದ್ಯಾರ್ಥಿನಿಯರು ಜೂನ್ ಮೂರ (03.06.2023) ರೊಳಗೆ ಅರ್ಜಿಯನ್ನು ಇ-ಮೇಲ್ ಮೂಲಕ ಸಲ್ಲಿಸಲು ಕೋರಲಾಗಿದೆ. ಇ ಮೇಲ್ ವಿಳಾಸ: kannadavikas1989@gmail.com ಸಂಪರ್ಕಿಸಿ: 6366709737.

ಹಿರಿಯ ವಿದ್ಯಾರ್ಥಿಗಳ ಮೇಲೆ ಶಿಕ್ಷಣದ ಋಣಭಾರವಿದೆ

–ಡಾ.ಡಿ.ಬಿ.ನಟೇಶ್



ಮೈಸೂರು, ಮೇ 29–ಶಾಲಾ ಕಾಲೇಜುಗಳು ಮಾನವನ ಬದುಕಿನಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಿಂದ ಶಿಕ್ಷಣ ಪಡೆದ ನನಗೆ ಶಿಕ್ಷಣದ ಋಣಭಾರ ದೊಡ್ಡದಾಗಿದೆ. ಇದನ್ನು ಅರ್ಥಮಾಡಿಕೊಂಡು ಸಮಾಜಕ್ಕಾಗಿ ದುಡಿಯಬೇಕು. ಬದುಕನ್ನು ಅರ್ಥಪೂರ್ಣಗೊಳಿಸಿಕೊಳ್ಳಬೇಕು. ಇದುವೇ ಋಣಸಂದಾಯದ ಮಾರ್ಗವಾಗಿದೆ ಎಂದು ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆಯ ಉಪಕಾರ್ಯದರ್ಶಿ ಡಾ.ಡಿ.ಬಿ.ನಟೇಶ್ ತಿಳಿಸಿದರು.

ಮೈಸೂರು ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಲ್ಲಿ ನಡೆದ ಹಿರಿಯ ವಿದ್ಯಾರ್ಥಿಗಳ ಸಮಾವೇಶ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಅವರು ಮಾತನಾಡಿದರು. ಪರಮಪೂಜ್ಯರ ಆಶೋತ್ತರಗಳಂತೆ ಇಂದು ಕಾಲೇಜು ಔನ್ನತ್ಯವನ್ನು ಪಡೆದು ಸಾಧನೆಯ ಪಥದಲ್ಲಿ ಇದೆ. ಪ್ರಚಲಿತ ಬದುಕಿಗೆ ಪೂರಕವಾದ ಶಿಕ್ಷಣ ಈ ಕಾಲೇಜಿನಲ್ಲಿ ಸಿಗುತ್ತಿರುವುದು ಸಂತೋಷದ ಸಂಗತಿ. ಕೇವಲ ಶಿಕ್ಷಣವಲ್ಲದೆ ಮೌಲ್ಯಯುತವಾದ ಶಿಕ್ಷಣವನ್ನು ನೀಡುತ್ತಿರುವುದು ಇನ್ನೂ ಸಂತಸದ ಸಂಗತಿಯಾಗಿದೆ. ಇಲ್ಲಿ ಶಿಕ್ಷಣವನ್ನು ಪಡೆದ ಹೆಮ್ಮೆ ನನಗೆ ಸದಾ ಇದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಹಿರಿಯ ವಿದ್ಯಾರ್ಥಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಡಿ.ಎಸ್. ಗುರು ಮಾತನಾಡಿ, ಗ್ರಾಮೀಣ ಪ್ರದೇಶದಿಂದ ಶಿಕ್ಷಣವನ್ನು ಪಡೆಯಲು ಬಂದ ನನಗೆ ಅಮ್ಮನಂತೆ ತಬ್ಬಿದ್ದು ಈ ಜೆಎಸ್‌ಎಸ್ ಕಾಲೇಜು. ಈ ಕಾಲೇಜು ಹಲವಾರು ಗ್ರಾಮೀಣ ವಿದ್ಯಾರ್ಥಿಗಳ ಬದುಕನ್ನು ದೊಡ್ಡ ಮಟ್ಟದಲ್ಲಿ ರೂಪಿಸಿದೆ. ಇಂದಿಗೂ ಈ ಕಾಲೇಜಿನಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯ ಸಿಗುತ್ತಿದೆ. ಅತ್ಯುತ್ತಮ ಪ್ರಾಧ್ಯಾಪಕರು ನೀಡಿದ ಹೆಗ್ಗಳಿಕೆ ಈ ಕಾಲೇಜಿನದು ಎಂದರು.

ತುಮಕೂರು ವಿಶ್ವವಿದ್ಯಾನಿಲಯದ ವಾಣಿಜ್ಯ ನಿರ್ವಹಣಾ ವಿಭಾಗದ ಪ್ರಾಧ್ಯಾಪಕಿಯಾದ ಪ್ರೊ. ನೂರ್ ಅಫ್ಜ, ಮೈಸೂರಿನ ಸೇಫ್ ವೀಲ್ಸ್ ಗ್ರೂಪ್, ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್.ಪ್ರಶಾಂತ್, ಮೈಸೂರಿನ ಇಫೀಮೆಡ್ ಫಾರ್ಮಸ್ಯೂಟಿಕಲ್ಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಎ.ಸುಧೀಂದ್ರ ಮಾತನಾಡಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾಲೇಜಿನ ಮುಖ್ಯಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯನವರು, ಜೆಎಸ್‌ಎಸ್ ಮಹಾವಿದ್ಯಾಪೀಠ ಸ್ಥಾಪಿಸಿದ ಮೊದಲ ಕಾಲೇಜು ಇದು. ಇಂದು ಈ ಕಾಲೇಜು ಹಲವಾರು ಸಾಧನೆಗಳ ಮೈಲಿಗಲ್ಲುಗಳನ್ನು ನಿರ್ಮಿಸಿದೆ. ರಾಷ್ಟ್ರದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾಗಿದೆ. ಇದರಲ್ಲಿ ಹಿರಿಯ ವಿದ್ಯಾರ್ಥಿಗಳ ಪಾತ್ರವೂ ಇದೆ. ಮುಂದೆಯೂ ಇವರ ಸಹಕಾರ ಇರಲಿ ಎಂದು ತಿಳಿಸಿದರು.

ಪ್ರಾಂಶುಪಾಲರಾದ ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್ ಸ್ವಾಗತಿಸಿದರು. ಕು.ರೇಖಾಶ್ರೀ ಮತ್ತು ಕು. ಸಹನ ಪ್ರಾರ್ಥಿಸಿದರು. ಡಾ.ಬಿ.ಪ್ರಭುಸ್ವಾಮಿ ವಂದನಾರ್ಪಣೆ ಮಾಡಿದರು. ಕಾರ್ಯ ಕ್ರಮವನ್ನು ಡಾ.ಆರ್.ಸುಹಾಸ್ ನಿರೂಪಿಸಿದರು.



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರನ್ನು ಶಿವು, 41ನೇ ವಾರ್ಡಿನ ಕಾಂಗ್ರೆಸ್ ಅಧ್ಯಕ್ಷ ನಂಜುಂಡಿ, ಮುಖಂಡರಾದ ನವೀನ್, ರವಿಚಂದ್ರ, ಪ್ರಶಾಂತ್ ಇತರರು ಸನ್ಮಾನಿಸಿದರು.

ಒಂದನೇ ಪುಟದಿಂದ

ಬೇಜವಾಬ್ದಾರಿಗೆ ಜನರ ಆಕ್ರೋಶ

ಇದ್ದಾಗ ಚಾಲಕರಿಗೆ ಎದುರಿನ ವಾಹನ ಗೋಚರಿಸದೇ ಅಪಘಾತ ತಪ್ಪಿದ್ದಲ್ಲ. ಇಂದು ಅಪಘಾತ ನಡೆದ ತಿರುವಿನಲ್ಲಿ ರಸ್ತೆಯ ಬದಿ ಗಿಡಗಂಟಿಗಳು ಆಳುದ್ದಕ್ಕೆ ಬೆಳೆದು ನಿಂತಿದ್ದು, ಎದುರು–ಬದುರು ಬರುವ ವಾಹನಗಳ ಚಾಲಕರಿಗೆ ಹತ್ತಿರ ಬರುವವರೆಗೂ ಏನೂ ಕಾಣಿಸುವುದೇ ಇಲ್ಲ. ಇದೂ ಕೂಡ ಇಂದಿನ ಅಪಘಾತಕ್ಕೆ ಒಂದು ಕಾರಣವಾಗಿದೆ. ವಾಹನಗಳು ಗೋಚರಿಸದಂತೆ ಬೆಳೆದು ನಿಂತಿರುವ ಗಿಡಗಂಟಿಗಳನ್ನು ಜಂಗಲ್ ಕಟ್ಟಿಂಗ್ ಮೂಲಕ ತೆರವುಗೊಳಿಸಬೇಕಾದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಬೇಜವಾಬ್ದಾರಿತನ ಪ್ರದರ್ಶಿಸಿದ್ದಾರೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ತಿರುವುಗಳನ್ನು ಸೂಚಿಸುವ ಫಲಕಗಳನ್ನು ಕಡ್ಡಾಯವಾಗಿ ಅಳವಡಿಸಬೇಕು. ಅದರಿಂದಲೂ ಚಾಲಕರು ಜಾಗೃತೆಯಿಂದ ವಾಹನ ಚಾಲನೆ ಮಾಡುತ್ತಾರೆ. ಆದರೆ, ಈ ಹೆದ್ದಾರಿಯಲ್ಲಿ ಟೋಲ್ ಶುಲ್ಕ ಮಾಡುತ್ತಿದ್ದರೂ ರಸ್ತೆ ನಿರ್ವಹಣೆ ಮಾಡಬೇಕಾದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಅಪಾಯಕರ ತಿರುವುಗಳಲ್ಲಿ ಯಾವುದೇ ರೀತಿಯ ಸೂಚನಾ ಫಲಕಗಳನ್ನು ಅಳವಡಿಸದೇ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿರುವ ರೈತ ಮುಖಂಡ ಕುರುಬೂರು ಶಾಂತಕುಮಾರ್, ಮೃತರ ವಾರಸುದಾರರಿಗೆ ತಲಾ 10 ಲಕ್ಷ ರೂ. ಪರಿಹಾರ ನೀಡಬೇಕೆಂದು ಆಗ್ರಹಿಸಿದ್ದಾರೆ. ಜೊತೆಗೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಜಂಗಲ್ ಕಟ್ಟಿಂಗ್ ಮಾಡಬೇಕು ಹಾಗೂ ಸೂಕ್ತ ಸ್ಥಳಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಬೇಕು ಎಂದು ಒತ್ತಾಯಿಸಿದ್ದಾರೆ.

ವಿರಾಜಪೇಟೆ ಕೊಡವ ಸಮಾಜದ 'ನೂರಾಂಡ್ ನಮ್ಮೆ' ಆಚರಣೆಗೆ ನಿರ್ಧಾರ



ವಿರಾಜಪೇಟೆ, ಮೇ 29– ವಿರಾಜಪೇಟೆ ಕೊಡವ ಸಮಾಜ ನೂರು ವರ್ಷ ಪೂರೈಸಿದ್ದು ಈ ಹಿನ್ನಲೆಯಲ್ಲಿ ಮುಂದಿನ ಸೆ.24 ರಂದು ಸಮಾಜದ 'ನೂರಾಂಡ್ ನಮ್ಮೆ'ಯನ್ನು ಅದ್ಧೂರಿಯಾಗಿ ಆಚರಿಸಲು ನಿರ್ಧರಿಸಲಾಗಿದ್ದು ಇದಕ್ಕೆ ಬೇಕಾದ ತಯಾರಿಗಳ ರೂಪು ರೇಷೆಗಳನ್ನು ಸಿದ್ದಪಡಿಸಲಾಗುತ್ತಿದೆ ಎಂದು ವಿರಾಜಪೇಟೆ ಕೊಡವ ಸಮಾಜದ ಅಧ್ಯಕ್ಷ ಕುಂಬೇರ ಮನು ಕುಮಾರ್ ಹೇಳಿದರು.

ಕೊಡವ ಸಮಾಜದ ಕಚೇರಿಯ ಸಭಾಂಗಣದಲ್ಲಿ ಕರೆದಿದ್ದ ಗೋಷ್ಠಿಯಲ್ಲಿ ಮಾತನಾಡಿದ ಅವರು 1921 ರಲ್ಲಿ ಸಮಾಜ ಸ್ಥಾಪನೆಯಾಗಿದ್ದು, ಕಳೆದ ಸಾಲಿನಲ್ಲಿ ಕೊರೊನಾ ಕಾರಣದಿಂದಾಗಿ ಸಮಾಜದ ನೂರನೇ ವಾರ್ಷಿಕೋತ್ಸವ ನಡೆಸಲು ಸಾಧ್ಯವಾಗಿರಲಿಲ್ಲ. ಇದೀಗ ನಮ್ಮ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡು ಒಂದು ವರ್ಷ ಪೂರೈಸಿದ್ದು ಈಗ ನಾವು 'ನೂರಾಂಡ್ ನಮ್ಮೆ' ಎಂಬ ಹೆಸರಿನಲ್ಲಿ ನೂರನೇ ವರ್ಷದ ಸಂಭ್ರಮಾಚರಣೆ ಮಾಡಲು ನಿರ್ಧರಿಸಿದ್ದು ಈ ವೇಳೆ ಸಾಧಕರಿಗೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮ ಇತ್ಯಾದಿಗಳನ್ನು ನಡೆಸಲು ಸಿದ್ದತೆ ನಡೆಸುತ್ತಿದ್ದೇವೆ. ಸಂಭ್ರಮಾಚರಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಆಹ್ವಾನಿಸಲಾಗುವುದು.

ಅಂದು ವಿರಾಜಪೇಟೆ ನಗರದಲ್ಲಿ ಅದ್ಧೂರಿಯ ಮೆರವಣಿಗೆ ನಡೆಸುವ ಚಿಂತನೆ ಇದ್ದು. ಈ ಕುರಿತು ಆಗತ್ಯ ರೂಪುರೇಷೆಗಳನ್ನು ಮುಂದೆ ರೂಪಿಸಿ ಪ್ರಕಟಿಸುವುದಾಗಿ ತಿಳಿಸಿದ ಮನುಕುಮಾರ್, ಈ ಕೊಡವ ಸಮಾಜಕ್ಕಾಗಿ ದುಡಿದ ಹಿರಿಯ ಚೇತನರಿಗೆ, ಸಮಾಜವನ್ನು ಮುನ್ನಡೆಸಿದವರನ್ನು, ಸಮಾಜಕ್ಕೆ ನೆರವು ನೀಡಿದ ದಾನಿಗಳು ಮತ್ತು ಸರಕಾರಕ್ಕೆ ನಾವು ಋಣಿಯಾಗಿದ್ದೇವೆ. ಇಂದು ನಮ್ಮ ಸಮಾಜವು 2,370 ಸದಸ್ಯರನ್ನು ಹೊಂದಿದ್ದು ಮುಂದೆ ಉತ್ತಮ ಸಮಾಜಮುಖಿ ಕೆಲಸಗಳನ್ನು ಮಾಡುವ ಉದ್ದೇಶವನ್ನು ಹೊಂದಿದ್ದು, ಈ ನೂರರ ಸಂಭ್ರಮಾಚರಣೆಗೆ ಕೊಡವ ಜನಾಂಗದವರು ಕೊಡವ ಅಭಿಮಾನಿಗಳು ಕೈಜೋಡಿಸಿ ಸಹಕರಿಸುವಂತೆ ಕೋರುವುದಾಗಿ ಹೇಳಿದರು.

ಕೊಡವ ಸಮಾಜದ ವತಿಯಿಂದ ತ್ರಿವೇಣಿ ಶಾಲೆಯ ಅಭಿವೃದ್ಧಿಗೆ ನೂತನ ಕಟ್ಟಡಕ್ಕೆ ಸೂಕ್ತ ಸ್ಥಳ ಗುರುತಿಸಿ ಕಟ್ಟಡ ನಿರ್ಮಾಣ ಮಾಡಲಾಗುವುದು. ಈಗಾಗಲೇ ಈ ಶಾಲೆಯಲ್ಲಿ ಎಲ್.ಕೆ.ಜಿ ಯಿಂದ ಹತ್ತನೇ ತರಗತಿವರಗೆ ವಿದ್ಯಾರ್ಥಿಗಳಿದ್ದು ಶಾಲೆಗೆ ಉತ್ತಮ ಫಲಿತಾಂಶ ಪಡೆದಿದೆ. ಉತ್ತಮ ಪರಿಣಿತ ಶಿಕ್ಷಕ ವೃಂದ ಹಾಗೂ ಆಡಳಿತ ಮಂಡಳಿ ಇದರ ಜವಾಬ್ದಾರಿ ನೋಡಿಕೊಳ್ಳುತ್ತಿದೆ, ಪ್ರಸ್ತುತ 350 ವಿದ್ಯಾರ್ಥಿಗಳಿದ್ದು, ಈ ಸಾಲಿನಲ್ಲಿ 400 ವಿದ್ಯಾರ್ಥಿಗಳ ಸೇರ್ಪಡೆ ಸಾಧ್ಯತೆ ಇರುವುದಾಗಿ ತಿಳಿಸಿದರಲ್ಲದೆ. ನೂರು ವರ್ಷ ಪೂರೈಸಿದ ಹಿನ್ನೆಲೆಯ ನೆನಪಿಗಾಗಿ ಹೊಸ ಶಾಲೆ ಕಟ್ಟಡ ನಿರ್ಮಾಣ ಈಗಿನ ಕಟ್ಟಡವನ್ನು ನವೀಕರಿಸುವ ಉದ್ದೇಶ ಹೊಂದಲಾಗಿದೆ ಎಂದು ಮನುಕುಮಾರ್ ತಿಳಿಸಿದರು.

ಗೋಷ್ಠಿಯಲ್ಲಿ ಸಮಾಜದ ಉಪಾಧ್ಯಕ್ಷ ಕುಯ್ಯಮಂಡ ಕಿರಣ್, ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್, ಮರಣ ನಿಧಿ ಕಾರ್ಯದರ್ಶಿ ಮಾದೇಯಂಡ ಸಂಪಿ ಪೂಣಚ್ಚ, ಕ್ರೀಡಾ ಕಾರ್ಯದರ್ಶಿ ಅಮ್ಮಣಿಚಂಡ ಸುಬ್ರಮಣಿ, ನಿರ್ದೇಶಕ ಬಾಚೀರ ಜಗದೀಶ್, ತಾತಂಡ ಕಬೀರ್, ಚೇಮಿರ ಅರ್ಜುನ ಮತ್ತಿತರರು ಉಪಸ್ಥಿತರಿದ್ದರು.

ಸಾಂಕ್ರಾಮಿಕ ರೋಗ ಹರಡದಂತೆ ಜಾಗೃತಿ ಮೂಡಿಸಿ

ಅಧಿಕಾರಿಗಳಿಗೆ ಡಿಸಿ ಡಾ.ಬಿ.ಸಿ.ಸತೀಶ ಸೂಚನೆ



ಮಡಿಕೇರಿ, ಮೇ 29– ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಅಗತ್ಯ ಮುನ್ನೆಚ್ಚರ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಅವರು ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಸಂಬಂಧ ಮಾಹಿತಿ ಪಡೆದು ಅವರು ಮಾತನಾಡಿದರು. ಡೆಂಗ್ಯೂ, ಚಿಕೂನ್ ಗುನ್ಯ, ಮಲೇರಿಯ ಮತ್ತಿತರ ಸಾಂಕ್ರಾಮಿಕ ರೋಗ ತಡೆಯುವಲ್ಲಿ ಹೆಚ್ಚಿನ ಅರಿವು ಮೂಡಿಸಬೇಕು. ಶಾಲೆಗಳು, ಕಚೇರಿಗಳು, ಇತರೆ ಎಲ್ಲೆಡೆ ನೀರಿನ ಟ್ಯಾಂಕ್‌ನ್ನು ಆರು ತಿಂಗಳಿಗೊಮ್ಮೆ ಸ್ವಚ್ಛಗೊಳಿಸುವಂತಾಗಬೇಕು ಎಂದು ಜಿಲ್ಲಾಧಿಕಾರಿ ಸಲಹೆ ಮಾಡಿದರು.

ಈ ಬಗ್ಗೆ ಮಾಹಿತಿ ನೀಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ಅವರು ಕಳೆದ ಮೂರು ತಿಂಗಳಲ್ಲಿ 25 ಡೆಂಗ್ಯೂ ಪ್ರಕರಣಗಳು ವರದಿಯಾಗಿದ್ದು, ಎಲ್ಲರೂ ಆರೋಗ್ಯವಾಗಿದ್ದಾರೆ ಎಂದರು. ಮನೆಯ ಸುತ್ತಮುತ್ತ ಪರಿಸರ ಶುಚಿತ್ವ ಕಾಪಾಡಬೇಕು. ನೀರು ನಿಲ್ಲದಂತೆ ಎಚ್ಚರ ವಹಿಸಬೇಕು ಎಂದು ತಿಳಿಸಿದರು.

ಸಾಂಕ್ರಾಮಿಕ ರೋಗಗಳ ನಿಯಂತ್ರಣ ಸಂಬಂಧಿಸಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ ಡಾ.ಶ್ರೀನಿವಾಸ್ ಅವರು ಮಾಹಿತಿ ನೀಡಿದರು. ರಾಷ್ಟ್ರೀಯ ಅತಿಸಾರ ಭೇದಿಯ ನಿಯಂತ್ರಣ ಪಾಕ್ಷಿಕ ಕಾರ್ಯಕ್ರಮ ಸಂಬಂಧಿಸಿದಂತೆ ಮಾಹಿತಿ ನೀಡಿದ ಆರ್‌ಸಿಎಚ್ ಅಧಿಕಾರಿ ಡಾ.ಗೋಪಿನಾಥ್ ಅವರು, ಚಿಕ್ಕಮಕ್ಕಳಲ್ಲಿ ಅತಿಸಾರ ಭೇದಿ ನಿಯಂತ್ರಿಸುವುದು ಮತ್ತು ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸಬೇಕಿದೆ ಎಂದರು.

ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನ ರಹಿತ ಶಾಲೆಗಳು ಕೈತೊಳೆಯುವ ವೈಜ್ಞಾನಿಕ ವಿಧಾನ ತಿಳಿಸುವ ಪೋಸ್ಟರ್ ಮತ್ತು ಗೋಡೆ ಬರಹಗಳನ್ನು ಶಾಲೆಯಲ್ಲಿ ಅಳವಡಿಸುವುದು, ಕೈ ತೊಳೆಯುವ ಮಹತ್ವ ಮತ್ತು ಅದರ ಲಾಭಗಳ ಬಗ್ಗೆ ಮಾಹಿತಿ ನೀಡಿದರು.

ಜಿಪಂ ಸಿಇಒ ಡಾ.ಎಸ್.ಆಕಾಶ್ ಮಾತನಾಡಿ, ಶಿಶು ಮರಣ ತಡೆಯುವಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು. ಆರೋಗ್ಯದ ಕಡೆ ಹೆಚ್ಚಿನ ಮಹತ್ವ ನೀಡುವಲ್ಲಿ ಗಮನಹರಿಸಬೇಕು. ಆ ನಿಟ್ಟಿನಲ್ಲಿ ಜಾಗೃತಿ ಮೂಡಿಸುವಂತೆ ನಿರ್ದೇಶನ ನೀಡಿದರು.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕರಾದ ಡಾ.ಕಳ್ಳಿಚಂಡ ಕಾರ್ಯಪ್ಪ, ಜಿಲ್ಲಾ ಸರ್ಜನ್ ಡಾ.ನಂಜುಂಡಯ್ಯ, ತಾಲೂಕು ವೈದ್ಯಾಧಿಕಾರಿಗಳಾದ ಡಾ.ಯತಿರಾಜ್, ಡಾ.ಚೇತನ್, ಡಾ.ಅನಿಲ್ ಧವನ್, ಡಾ.ಸೋಮಶೇಖರ್ ಮತ್ತು ಡಾ.ಕುಸ್ವಂತ್ ಕೋಳಿಬೈಲು ಇತರರು ಹಲವು ಮಾಹಿತಿ ನೀಡಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾ ದೇವಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕರಾದ ಸಿ.ರಂಗಧಾಮಯ್ಯ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಪುಟ್ಟರಾಜು, ಬಿಸಿಎಂ ಇಲಾಖೆ ಅಧಿಕಾರಿ ಎನ್.ಮಂಜುನಾಥ್, ಇತರರು ಇದ್ದರು.

ಶಾಲಾ ಪ್ರಾರಂಭೋತ್ಸವ

ಕೂಡುಮಂಗಳೂರು ಸರ್ಕಾರಿ ಪ್ರೌಢಶಾಲೆಗೆ: ಎತ್ತಿನಗಾಡಿಯಲ್ಲಿ ಶಾಲೆಗೆ ಬಂದ ಚಿಣ್ಣರು



ಕುಶಾಲನಗರ, ಮೇ 29– ಸೋಮವಾರ ಆರಂಭವಾದ ಪ್ರಸಕ್ತ ಸಾಲಿನ ಶಾಲಾ ಪ್ರಾರಂಭೋತ್ಸವದ ಸಂದರ್ಭದಲ್ಲಿ ಕೂಡುಮಂಗಳೂರು ಸರ್ಕಾರಿ ಪ್ರೌಢಶಾಲೆಗೆ ಮಕ್ಕಳು ಎತ್ತಿನ ಗಾಡಿಯಲ್ಲಿ ಆಗಮಿಸುವ ಮೂಲಕ ಗಮನ ಸೆಳೆದರು.

ಶಾಲಾ ಪ್ರಾರಂಭೋತ್ಸವದ ಮೊದಲ ದಿನ ಶಿಕ್ಷಕರು ಶಾಲೆಗೆ ಮಕ್ಕಳನ್ನು ಭವ್ಯವಾಗಿ ಸ್ವಾಗತಿಸಿ ಸಿಹಿ ವಿತರಿಸಿದರು. ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಶಾಲೆಯನ್ನು ತಳಿರು ತೋರಣ ಕಟ್ಟಿ ಸಿಂಗರಿಸಲಾಗಿತ್ತು. ಜಾನಪದ ಸಂಸ್ಕೃತಿಯ ಪ್ರತೀಕವಾದ ಎತ್ತಿನ ಗಾಡಿಯನ್ನು ಏರಿದ ಮಕ್ಕಳು ಸರ್ಕಾರಿ ಶಾಲೆಗೆ ಹೋಗೋಣ ಬನ್ನಿ, ಸರ್ಕಾರಿ ಶಾಲೆ ನಮ್ಮ ಹೆಮ್ಮೆ, ಸರ್ಕಾರಿ ಶಾಲೆ ನಮ್ಮೂರ ಶಾಲೆ, ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸೋಣ ಬನ್ನಿ, 'ಶಿಕ್ಷಣವೇ ಶಕ್ತಿ' ಎಂಬಿತ್ಯಾದಿ ಘೋಷಣೆಗಳ ಫಲಕಗಳನ್ನು ಹಿಡಿದು ಎತ್ತಿನ ಗಾಡಿಯ ಮೂಲಕ ಸಂಭ್ರಮದಿಂದ ಶಾಲೆಗೆ ಆಗಮಿಸಿದರು.

ಗ್ರಾಮದ ಮುಖ್ಯರಸ್ತೆ ಬಳಿಯಿಂದ ಆರಂಭಗೊಂಡ ಮಕ್ಕಳ ಎತ್ತಿನ ಗಾಡಿಗೆ ಚಾಲನೆ ನೀಡಿದ ಗ್ರಾಮ ಹಿರಿಯರೂ ಆದ ಕೃಷಿಕ ಕೆ.ಎಸ್.ರಾಜಾಚಾರಿ, ಪ್ರತಿಯೊಬ್ಬರೂ ಮಕ್ಕಳ ಶಿಕ್ಷಣಕ್ಕೆ ಸಹಕರಿಸಬೇಕು ಎಂದರು. ಕೃಷಿಕ ಕೆ.ಆರ್.ನಾಗರಾಜ್ ಸಾರಥ್ಯದಲ್ಲಿ ಸಾಗಿದ ಎತ್ತಿನ ಗಾಡಿಯ ಮೂಲಕ ಗ್ರಾಮದ ಬೀದಿಯಲ್ಲಿ ಸಾಗಿದ ಮಕ್ಕಳು, ಮಕ್ಕಳನ್ನು ಶಾಲೆಗೆ ದಾಖಲಿಸಿ ಶಿಕ್ಷಣ ಕೊಡಿಸಿ ಎಂದು ಮನವಿ ಮಾಡಿದರು.

ಶಾಲಾ ಅಂಗಳಕ್ಕೆ ಎತ್ತಿನ ಗಾಡಿಯ ಮೂಲಕ ಆಗಮಿಸಿದ ಮಕ್ಕಳನ್ನು ಶಾಲಾ ಮುಖ್ಯ ಶಿಕ್ಷಕ ಟಿ.ಜಿ.ಪ್ರೇಮಕುಮಾರ್ ಮತ್ತು ಶಿಕ್ಷಕ ವೃಂದ ಹೂ ಹಾಗೂ ಪುಸ್ತಕ ನೀಡುವ ಮೂಲಕ ಸ್ವಾಗತಿಸಿದರು. ನಂತರ ಮಾತನಾಡಿದ ಅವರು, ಸರ್ಕಾರ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಬಿಸಿಯೂಟ ಸೌಲಭ್ಯದೊಂದಿಗೆ ವಿವಿಧ ಸವಲತ್ತುಗಳನ್ನು ನೀಡುವ ಮೂಲಕ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವ ಮೂಲಕ ಅವರಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಮನವಿ ಮಾಡಿದರು.

ತಮ್ಮ ಶಾಲೆಗೆ ಕಳೆದ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.94 ಫಲಿತಾಂಶ ಬಂದಿದ್ದು, ಮಕ್ಕಳು ಉತ್ತಮ ಸಾಧನೆ ಮಾಡಿದ್ದಾರೆ ಎಂದರು. ಮಕ್ಕಳಿಗೆ ಉಚಿತ ಪಠ್ಯಪುಸ್ತಕ ವಿತರಿಸಿದ ಎಸ್‌ಡಿಎಂಸಿ ಅಧ್ಯಕ್ಷ ಎಸ್.ಎನ್. ಪುಟ್ಟಸ್ವಾಮಿ, ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು. ಎಸ್ ಡಿ ಎಂ ಸಿ ಸದಸ್ಯ ಜವರಯ್ಯ, ಹಿರಿಯ ಕೃಷಿಕ ಕೆ.ಎಸ್.ರಾಜಾಚಾರಿ, ಶಿಕ್ಷಕರಾದ ಕೆ.ಗೋಪಾಲಕೃಷ್ಣ, ಎಂ.ಟಿ.ದಯಾನಂದ ಪ್ರಕಾಶ್, ಬಿ.ಡಿ.ರಮ್ಯ, ಎಸ್.ಎಂ.ಗೀತಾ, ಬಿ.ಎಸ್.ಅನ್ನಿಲಾ ರೇಖಾ, ಪೋಷಕರು ಇದ್ದರು.

ಮಕ್ಕಳಿಗೆ ಸಿಹಿ ವಿತರಣೆ: ಶಾಲೆಯಲ್ಲಿ ಮಕ್ಕಳಿಗೆ ಮಧ್ಯಾಹ್ನ ಪಾಯಸದ ಸಿಹಿಯೊಂದಿಗೆ ಬಿಸಿಯೂಟ ವಿತರಿಸಲಾಯಿತು. ನಂತರ ಶಿಕ್ಷಕರು ಮತ್ತು ಮಕ್ಕಳು ಶಾಲಾ ಸ್ವಚ್ಛತಾ ಕಾರ್ಯ ಕೈಗೊಂಡರು.

ಸಹಾರ ತಂಡಕ್ಕೆ ಕೊಡಗು ಮುಸ್ಲಿಂ ಫುಟ್ಬಾಲ್ ಕಪ್



ಸಿದ್ದಾಪುರ, ಮೇ 29– ಸಹಾರ ಯೂಥ್ ಕ್ಲಬ್ ಇವರ ಆಶ್ರಯದಲ್ಲಿ ಚೆನ್ನಯ್ಯನಕೋಟೆ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ 4ನೇ ವರ್ಷದ ಕೊಡಗು ಮುಸ್ಲಿಂ ಕಪ್ ಫುಟ್ಬಾಲ್ ಅಂತಿಮ ಫೈನಲ್ ಪಂದ್ಯಾಟದಲ್ಲಿ 2–0 ಗೋಲ್‌ಗಳಿಂದ ಅಮ್ಮತ್ತಿಯ ಗೋಲ್ಡನ್ ಈಗಲ್ಸ್ ತಂಡವನ್ನು ಮಣಿಸಿ ಚೆನ್ನಯ್ಯನ ಕೋಟೆಯ ಸಹಾರ ಯೂಥ್ ಕ್ಲಬ್ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಆರು ದಿನಗಳ ಕಾಲ ನಡೆದ ಪಂದ್ಯಾವಳಿಯಲ್ಲಿ ಒಟ್ಟು 72 ತಂಡಗಳು ಭಾಗವಹಿಸಿದ್ದು ಅತ್ಯುತ್ತಮ ಆಟಗಾರ ಪ್ರಶಸ್ತಿಯನ್ನು ಸಹಾರ ತಂಡದ ಜುನೈದ್, ಉತ್ತಮ ಗೋಲ್ ಕೀಪರ್ ಸಹಾರ ತಂಡದ ಅಮೀರ್, ಅತೀ ಹೆಚ್ಚು ಗೋಲು ಬಾರಿಸಿದ ಪ್ರಶಸ್ತಿಯನ್ನು ಅಮ್ಮತ್ತಿ ತಂಡದ ರಹೀಸ್ ಪಡೆದುಕೊಂಡರು

ಸಮಾರೋಪ ಸಮಾರಂಭದಲ್ಲಿ ಕೊಡಗು ಮುಸ್ಲಿಂ ಕಪ್‌ನ ಸಂಸ್ಥಾಪಕ ಆಸೀಫ್ ಮಾತ ನಾಡಿ, ಪ್ರತಿಭಾವಂತ ಕ್ರೀಡಾಪಟುಗಳನ್ನು ಬೆಳೆಸುವ ಉದ್ದೇಶದಿಂದ ಈ ಕ್ರೀಡಾಕೂಟವನ್ನು ನಾಲ್ಕು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು ಈ ವರ್ಷ ಚೆನ್ನಯ್ಯನ ಕೋಟೆಯಲ್ಲಿ ಸೌಹಾರ್ದತೆಯಿಂದ ಅದ್ದೂರಿಯಾಗಿ ಆಯೋಜಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು ಕೊಡಗು ಜಿಲ್ಲಾ ಮುಸ್ಲಿಂ ಕಪ್ ಫುಟ್ಬಾಲ್ ಅಧ್ಯಕ್ಷ ಸಲೀಂ, ಹಾಗೂ ಅಬ್ದುಲ್ ರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಮುಖ್ಯ ಅತಿಥಿಗಳಾಗಿ ಸಾಗರ್ ಸಂಘದ ಸ್ಥಾಪಕ ಎಚ್.ಎ ಮುಸ್ತಫ, ಗ್ರಾಮ ಪಂಚಾಯಿತಿ ಸದಸ್ಯರಾದ ರಾಜೇಶ್, ವಿಜು, ಸರ್ವಸಾಹಾಯಿ ಅಧ್ಯಕ್ಷ ಅಬ್ದುಲ್ ರೆಹಮಾನ್, ಕಿಶೋರ್ ಕುಮಾರ್, ಇಬ್ರಾಹಿಂ, ರದೀಶ್, ರವೀಂದ್ರ ಭಾವೆ, ಸಹಾರ ಯೂಥ್ ಕ್ಲಬ್ ನ ಉರೈಸ್, ಕಾರ್ಯದರ್ಶಿ ಅಬ್ದುಲ್ ಮುಜೀಬ್, ಶಬೀರ್, ಆಸೀಫ್, ನಿಶಾದ್, ಮುಂತಾದವರು ಪಾಲ್ಗೊಂಡಿದ್ದರು.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಮೇ 29– ಪೊನ್ನಂಪೇಟೆ 66/11 ಕೆವಿ ವಿದ್ಯುತ್ ಉಪ ಕೇಂದ್ರದಿಂದ ಹೊರ ಹೋಗುವ ಎಫ್1 ನಲ್ಲೂರು, ಎಫ್2 ಬಾಳೆಲೆ, ಎಫ್2 ರಾಜಾಪುರ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಮೇ, 30 ಮತ್ತು 31 ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಇರಲಿದೆ.

ಆದ್ದರಿಂದ ನಲ್ಲೂರು, ಬೆಸಗೂರು, ಪೊನ್ನಪ್ಪಸಂತೆ, ಬಾಳೆಲೆ, ರಾಜಾಪುರ, ಮಲ್ಲೂರು, ನಿಟ್ಟೂರು, ಕೊಟ್ಟಗೇರಿ, ಬಿಳೂರು, ದೇವನೂರು ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಸೆಸ್ಕ್ ಕಾರ್ಯ ನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.

ಚಾಮರಾಜನಗರ ಜಿಲ್ಲಾಸ್ಪತ್ರೆ ಎಂಬ ನರಕ!

▸ ಮನೆಯಿಂದ ಟೇಬಲ್ ಫ್ಯಾನ್ ತಂದು ಬಳಸುತ್ತಿರುವ ರೋಗಿಗಳು
▸ ಗಬ್ಬೆದ್ದು ನಾರುತ್ತಿರುವ ಶೌಚಾಲಯ ▸ ಎಲ್ಲೆಲ್ಲೂ ಅಶುಚಿತ್ವ ತಾಂಡವ





"ಆಸ್ಪತ್ರೆಯಲ್ಲಿ ಸ್ವಚ್ಛತೆ ಇಲ್ಲ. ಇದನ್ನ ನೋಡಿಕೊಳ್ಳುವವರು ಯಾರೂ ಇಲ್ಲ. ಈಗ ಇದು ವೈದ್ಯಕೀಯ ಕಾಲೇಜು (ಸಿಮ್ಸ್) ಅಧೀನದಲ್ಲಿದೆ. ಇದನ್ನು ಡಿಎಚ್‌ಓಗೆ ವಹಿಸಿಕೊಡಬೇಕೆಂದರು ಆಗಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಆಸ್ಪತ್ರೆ ರಿಪೇರಿಗೆ ಒಂದು ರೂಪಾಯಿ ಅನುದಾನ ಕೊಟ್ಟಿಲ್ಲ. ಜವಾಬ್ದಾರಿಯಿಂದ ನೋಡಿಕೊಳ್ಳುವವರು ಇಲ್ಲ. ಡಾಕ್ಟರ್‌ಗಳ ನಡುವೆ ತಾರತಮ್ಯವಿದೆ. ಹೊಸ ಸರ್ಕಾರ ಬಂದಿದೆ. ಆದಷ್ಟು ಎಲ್ಲವನ್ನು ಸರಿ ಮಾಡುತ್ತೇವೆ.

- ಸಿ. ಪುಟ್ಟರಂಗಶೆಟ್ಟಿ, ಶಾಸಕರು.

"ಮಳೆ, ಗಾಳಿಯಿಂದ ಕೆಲವು ಫ್ಯಾನ್‌ಗಳು ಬಂದ್ ಆಗಿದ್ದವು. ನಿನ್ನೆ, ಮೊನ್ನೆಯಿಂದ ಫ್ಯಾನ್ ರಿಪೇರಿ ಕಾರ್ಯ ನಡೆದಿದೆ. ಹಳೆಯ ಕಟ್ಟಡ ಆದ್ದರಿಂದ ಸಮಸ್ಯೆ ಆಗಿದೆ. ನಾವು ಸಾಧ್ಯವಾದ ಮಟ್ಟಿಗೆ ಉತ್ತಮ ಸೇವೆ ಕೊಡುತ್ತಿದ್ದೇವೆ. ಬೇಸಿಗೆ ಆದ್ದರಿಂದ ತಾಪಮಾನ ಹೆಚ್ಚಾಗಿದೆ. ಹೀಗಾಗಿ ಕೆಲವರು ಫ್ಯಾನ್ ತಂದಿದ್ದಾರೆ. ಈಗ ಯಾವುದೇ ಸಮಸ್ಯೆ ಇಲ್ಲ.

-ಡಾ. ಕೃಷ್ಣಪ್ರಸಾದ್, ಜಿಲ್ಲಾ ಶಸ್ತ್ರ ಚಿಕಿತ್ಸಕ.

● ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಮೇ 29– ಚಾಮರಾಜನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಫ್ಯಾನ್‌ಗಳು ತಿರುಗುತ್ತಿಲ್ಲ. ಇದರಿಂದ ರೋಗಿಗಳು ಹಾಗೂ ಅವರ ಸಂಬಂಧಿಕರು ಬಿಸಿಲ ತಾಪ ತಡೆಯಲಾರದೇ ಟೇಬಲ್ ಫ್ಯಾನ್ ಜೊತೆಗೆ ಆಸ್ಪತ್ರೆಗೆ ಬರುತ್ತಿರುವುದು ಸಾಮಾನ್ಯವಾಗಿದೆ.

ಗರ್ಭಿಣಿಯರು ಹಾಗೂ ಅವರ ಸಂಬಂಧಿಕರು ಆಸ್ಪತ್ರೆಯಲ್ಲಿ ಬಿಸಿಲ ಝಳಕ್ಕೆ ಹೈರಾಣಾಗುತ್ತಿದ್ದಾರೆ. ಹೀಗಾಗಿ, ಸ್ವಂತ ಹಣ ದಿಂದ ಫ್ಯಾನ್‌ಗಳನ್ನು ಖರೀದಿಸಿ ಆಸ್ಪತ್ರೆ ಯಲ್ಲಿ ಬಳಸುತ್ತಿದ್ದಾರೆ. ಆಸ್ಪತ್ರೆಯಲ್ಲಿ ಅಳವಡಿಸಿರುವ ಯಾವ ಫ್ಯಾನ್ ಕೂಡಾ ಕಾರ್ಯನಿರ್ವಹಿಸುತ್ತಿಲ್ಲ. ವೈದ್ಯರು, ಸಿಬ್ಬಂದಿಯ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ರೋಗಿಗಳ, ಸಂಬಂಧಿಕರು ಹೇಳಿದ್ದಾರೆ. ಹೊರಗಿನಿಂದ ಸುಂದರವಾಗಿ ಕಾಣುವ ಆಸ್ಪತ್ರೆಯ ಒಳ ಹೊಕ್ಕರೆ ಸಮಸ್ಯೆಗಳ ಸರಮಾಲೆ ದರ್ಶನವಾಗುತ್ತದೆ. ಕೆಲವು ವಾರ್ಡ್‌ಗಳಲ್ಲಿ ಶೌಚಾಲಯಗಳು ಗಬ್ಬು ನಾರುತ್ತಿದೆ. ಕಾರಿಡಾರ್‌ಗಳಲ್ಲಿಯೂ ಸ್ವಚ್ಛತೆ ಕಾಣಿಸುವುದಿಲ್ಲ.



ಫ್ಯಾನ್‌ಗೂ ಪರದಾಟ: ಜಿಲ್ಲಾಸ್ಪತ್ರೆಯಲ್ಲಿ ಬಹುತೇಕ ಎಲ್ಲಾ ವಾರ್ಡ್‌ಗಳಲ್ಲಿಯೂ ಫ್ಯಾನ್‌ಗಳು ಕೆಟ್ಟು ನಿಂತಿವೆ. ಇದರಿಂದ ಬೇಸಿಗೆಯ ಬಿಸಿಲಿನ ತಾಪದಿಂದ ಬಸವಳಿಯುತ್ತಿರುವ ರೋಗಿಗಳು ಚಿಕಿತ್ಸೆಗೆ ಬರುವಾಗಲೇ ತಮ್ಮ ಮನೆಯಿಂದಲೇ ಟೇಬಲ್ ಫ್ಯಾನ್‌ಗಳನ್ನು ತಂದು ವಿಶ್ರಾಂತಿ ಪಡೆಯುತ್ತಿದ್ದಾರೆ.



ಆಸ್ಪತ್ರೆಯಲ್ಲಿ ಯಾವ ಫ್ಯಾನ್ ಕೂಡ ಕಾರ್ಯನಿರ್ವಹಿಸದಿರುವುದನ್ನು ವೈದ್ಯರು, ಸಿಬ್ಬಂದಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ರೋಗಿಗಳ ಸಂಬಂಧಿಕರು ದೂರಿದ್ದಾರೆ. ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಒಂದು ವೈರಲ್ ಆಗಿದ್ದು, ವಿಡಿಯೋದಲ್ಲಿ ಆಸ್ಪತ್ರೆಯ ವಾರ್ಡ್‌ನಲ್ಲಿದ್ದ ರೋಗಿಗಳು ಫ್ಯಾನ್ ಇಲ್ಲದೇ ಪರದಾಡುತ್ತಿದ್ದಾರೆ. ಸೆಕೆಯ ಅರ್ಭಟ ತಾಳಲಾರದೇ ರೋಗಿಗಳು ಸ್ವಂತ ಹಣದಿಂದ ಫ್ಯಾನ್‌ಗಳನ್ನು ಆರಿಸಿಕೊಳ್ಳುತ್ತಿರುವ ದಯನೀಯ ಸ್ಥಿತಿ ಕಂಡುಬಂದಿದೆ.

ವಾರ್ಡ್ ಮಾತ್ರವಲ್ಲ ಆಸ್ಪತ್ರೆಯ ಮೆಟ್ಟಲುಗಳು, ರಿಸೆಪ್ಷನ್‌ನಲ್ಲಿ ಫ್ಯಾನ್ ಹಾಕಿ ಕೂತಿರುವ ಫೋಟೋ ಹಾಗೂ ವಿಡಿಯೋಗಳು ವೈರಲ್ ಆಗಿದೆ.

ಆಸ್ಪತ್ರೆಗೆ ಶಾಸಕರ ಭೇಟಿ



ಜಿಲ್ಲಾಸ್ಪತ್ರೆಯಲ್ಲಿ ಫ್ಯಾನ್ ತಿರುಗದೆ ರೋಗಿಗಳ ಪರದಾಟ ವಿಚಾರ ತಿಳಿದು ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿದ ಶಾಸಕ ಸಿ. ಪುಟ್ಟರಂಗಶೆಟ್ಟಿ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಕೃಷ್ಣಪ್ರಸಾದ್, ಡಿಎಚ್‌ಓ ಡಾ. ವಿಶ್ವೇಶ್ವರಯ್ಯ ಜೊತೆಗೆ ಎಲ್ಲಾ ವಾರ್ಡ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಶಾಸಕರೇ ಸ್ವತಃ ಫ್ಯಾನ್ ಸ್ವಿಚ್ ಆನ್ ಮಾಡಿದಾಗ ಫ್ಯಾನ್ ತಿರುಗದೆ ಇರುವುದನ್ನು ಕಂಡು ಸಿಬ್ಬಂದಿಯನ್ನು ತೀವ್ರ ತರಾಟೆ ತೆಗೆದುಕೊಂಡರು. ಬಳಿಕ ಆಸ್ಪತ್ರೆಯ ಎಲೆಕ್ಟ್ರಿಷಿಯನ್‌ನನ್ನು ಕರೆದು ನಿನಗೆ ಎಷ್ಟು ಸಂಬಳ ಕೊಡ್ತಾರೆ, ಏನ್ ಕೆಲಸ ಮಾಡ್ತಿಯ ಎಂದು ತರಾಟೆಗೆ ತೆಗೆದುಕೊಂಡರು. ಬಳಿಕ ಡಾ. ಕೃಷ್ಣಪ್ರಸಾದ್‌ಗೂ ತಾಕೀತು ಮಾಡಿ ಏನ್ ಜವಾಬ್ದಾರಿ ನಿಮ್ಮದು, ಯಾರ್ ಉಸ್ತುವಾರಿ ವಹಿಸಿಕೊಂಡಿದಿರಿ ಈ ಆಸ್ಪತ್ರೆದು ಫ್ಯಾನ್ ಸರಿಯಿಲ್ಲ, ಕ್ಲೀನಿಂಗ್ ಇಲ್ಲ ಏನಿದು ವ್ಯವಸ್ಥೆ ಎಂದು ಪ್ರಶ್ನಿಸಿದರು.

ದಿಕ್ಕು ತಪ್ಪಿಸುವ ಮಾಹಿತಿ ನೀಡದಂತೆ ಅಧಿಕಾರಿಗಳಿಗೆ ಶಾಸಕ ಕೃಷ್ಣಮೂರ್ತಿ ತಾಕೀತು

ಕೊಳ್ಳೇಗಾಲ ಸಿಡಿಪಿಓ ನಾಗೇಶ್‌ಗೆ ತರಾಟೆ



ಕೊಳ್ಳೇಗಾಲ, ಮೇ 29– ಅಂಗನವಾಡಿಗೆ ಕಾರ್ಯಕರ್ತೆ ಮತ್ತು ಸಹಾಯಕಿಯರನ್ನು ನೇಮಿಸಿಕೊಳ್ಳುವ ವಿಚಾರದಲ್ಲಿ ತರಾತುರಿಯಲ್ಲಿ ಅರ್ಜಿ ಆಹ್ವಾನಿಸಿ, ಕೆಲವು ಖಾಲಿ ಹುದ್ದೆಗಳನ್ನು ಮರೆಮಾಚಿದ ಹಾಗೂ ಈ ಕುರಿತು ಅರ್ಜಿ ಆಹ್ವಾನಿಸದಂತೆ ಸೂಚಿಸಿದ್ದರೂ ಅರ್ಜಿ ಆಹ್ವಾನಿಸಿದ ಸಿಡಿಪಿಓ ನಾಗೇಶ್ ವಿರುದ್ಧ ಶಾಸಕ ಎ.ಆರ್. ಕೃಷ್ಣಮೂರ್ತಿ ಗರಂ ಆದರು.

ತಾಲೂಕು ಪಂಚಾಯ್ತಿ ಸಭಾಂಗಣದಲ್ಲಿ ಕರೆಯಲಾಗಿದ್ದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ನಾನು ಹೇಳಿದ್ದು, ನಿಮಗೆ ಅರ್ಥ ಆಗಲ್ವಾ, ಅಂಗನವಾಡಿ ಹುದ್ದೆಗೆ ಅರ್ಜಿ ಆಹ್ವಾನದಲ್ಲಿ ಲೋಪವಾಗಬಾರದು, ಪರಿಶೀಲಿಸಿದ ಬಳಿಕ ಅರ್ಜಿ ಆಹ್ವಾನಿಸಿ ಎಂದು ಸೂಚಿಸಿದ್ದರೂ ಸಹಾ ಅರ್ಜಿ ಆಹ್ವಾನಿಸಿದ್ದು, ಎಷ್ಟು ಸರಿ? ಎಂದು ಪ್ರಶ್ನಿಸಿದರು. ಸರ್ಕಾರಿ ಶಾಲೆಗಳಲ್ಲಿ ಈ ಹಿಂದೆ ಕರ್ತವ್ಯ ನಿರ್ವಹಿಸಿದ್ದ ಅತಿಥಿ ಶಿಕ್ಷಕರ ಪೈಕಿ ಅತ್ಯುತ್ತಮ ರೀತಿ ಕರ್ತವ್ಯ ನಿರ್ವಹಿಸಿರುವವರನ್ನೇ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಮುಂದುವರೆಸಿ. ಬಿಸಿಯೂಟದಲ್ಲಿ ಲೋಪವಾಗದಂತೆ ನೋಡಿಕೊಳ್ಳಿ. ಪುಸ್ತಕ, ಯುನಿಫಾರಂ ವಿತರಣೆಯಲ್ಲಿ ಲೋಪವಾಗಬಾರದು, ಹನೀರಾವರಿಯಲ್ಲಿ ಲೋಪವಾಗಿರುವ ಕುರಿತು ಸಾಕಷ್ಟು ದೂರುಗಳಿದ್ದು, ಸಂಬಂಧಪಟ್ಟ ಅಧಿಕಾರಿಗಳು ದಾಖಲೆ ಸಮೇತ ವರದಿ ಸಲ್ಲಿಸಿ ಎಂದು ಸೂಚಿಸಿದರು. ಕೊಂಗಲ ಕೆರೆ ಕಾಮಗಾರಿಗೆ ಉಪಯೋಗಕ್ಕೆ ಬಾರದ ಕಲ್ಲುಗಳನ್ನು ಕಟ್ಟಿ ಏರಿ ನಿರ್ಮಾಣ ಮಾಡಲಾಗುತ್ತಿದೆ,

ಇಲ್ಲಿನ ಫಲವತ್ತಾದ ಮಣ್ಣು ರೈತರ ಜಮೀನಿಗೆ ಹೋಗಬೇಕು, ಅದನ್ನು ಬಿಟ್ಟು ಇಲ್ಲಿನ ಮಣ್ಣುಮಾರಾಟವಾಗುತ್ತಿರುವ ಕುರಿತು ಸಾಕಷ್ಟು ದೂರುಗಳಿಗೆ, ಈ ಸಂಬಂಧ ಅಧಿಕಾರಿಗಳೇ ಹೊಣೆ ಹೊರ ಬೇಕಾಗುತ್ತದೆ ಎಂದು ಎಚ್ಚರಿಸಿದರು. ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ರಾಜಶೇಖರ್ ಮಾತನಾಡಿ, ಕೊಳ್ಳೇಗಾಲ ಉಪವಿಭಾಗೀಯ ಆಸ್ಪತ್ರೆಯಲ್ಲಿ ಅಗತ್ಯ ಆಪರೇಷನ್ ಕೈಗೊಳ್ಳಲಾಗುತ್ತಿದೆ. ಹನೂರು, ಯಳಂದೂರು ಭಾಗದಿಂದಲೂ ಇಲ್ಲಿಗೆ ಹೆಚ್ಚಿನ ರೋಗಿಗಳು ಬರುತ್ತಿದ್ದು, ರೋಗಿಗಳ ಸಂಖ್ಯೆಗೆ ನಿಯಂತ್ರಣವಿಲ್ಲದಾಗಿದೆ. ಅರವಳಿಕೆ ತಜ್ಞರು ಒಬ್ಬರೇ ಇರುವುದರಿಂದ ಸಮಸ್ಯೆಯಾಗಿದೆ ಎಂದರು.

6.23 ಕೋಟಿ ಕಾಮಗಾರಿ ಪ್ರಾರಂಭವಾಗಬೇಕಿದೆ. ಈಗಾಗಲೇ 13 ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಕೆಆರ್‌ಐಡಿಎಲ್ ಅಧಿಕಾರಿ ಚಿಕ್ಕಲಿಂಗಯ್ಯ ಸಭೆಗೆ ಮಾಹಿತಿ ನೀಡಿದರು. ಇಓ ಮಹೇಶ್, ತಹಸಿಲ್ದಾರ್ ಮಂಜುಳ, ಬಿಇಓ ಚಂದ್ರಪಾಟೀಲ್, ರಂಗಸ್ವಾಮಿ, ಗಂಗಾಧರ್, ನಾಗೇಶ್, ಪ್ರದೀಪ್, ಭಾಸ್ಕರ್, ಆನಂದಮೂರ್ತಿ ಇನ್ನಿತರರು ಇದ್ದರು.

ಜೂ. 1 ರಂದು ಪರಿಸರ ಕುರಿತು ಶಾಲಾ ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆ

ಚಾಮರಾಜನಗರ, ಮೇ 29– ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕಿರಿಯ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳಿಗಾಗಿ ಪರಿಸರ ಕುರಿತು ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆಯನ್ನು ಜೂನ್ 1 ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದೆ.

ಈ ವರ್ಷದ ಘೋಷಣಾ ವಾಕ್ಯವು ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರಗಳು ಎಂಬುದಾಗಿದೆ. ಸ್ಪರ್ಧಿಗಳಿಗೆ ಡ್ರಾಯಿಂಗ್ ಶೀಟ್ ಮಾತ್ರ ನೀಡಲಾಗುವುದು. ಚಿತ್ರಕಲೆಗೆ ಬೇಕಾಗುವ ಬಣ್ಣ ಇನ್ನಿತರೆ ವಸ್ತುಗಳನ್ನು ವಿದ್ಯಾರ್ಥಿಗಳೇ ತರಬೇಕು. ಆಸಕ್ತಿಯುಳ್ಳವರು ಸ್ಥಳದಲ್ಲಿಯೇ ಹೆಸರು ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ವಿವರಗಳಿಗಾಗಿ ಪರಿಸರ ಅಧಿಕಾರಿ ಪಿ.ಕೆ. ಉಮಾಶಂಕರ್ (ಮೊ.ಸಂ 9448160267), ಉಪ ಪರಿಸರ ಅಧಿಕಾರಿ ಡಾ. ಎಂ. ಶೃತಿ (ಮೊ.ಸಂ 9986729289), (ಕಚೇರಿ ದೂ.ಸಂ 08226–223846) ಹಾಗೂ ಸ್ಥಳೀಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ (ಬಿ.ಇ.ಓ) ಅವರನ್ನು ಸಂಪರ್ಕಿಸುವಂತೆ ಪರಿಸರ ಅಧಿಕಾರಿ ಪಿ.ಕೆ. ಉಮಾಶಂಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಭಗೀರಥ ಫೌಂಡೇಶನ್‌ನಿಂದ ಶ್ರೀ ಭಗೀರಥ ಮಹರ್ಷಿ ಜಯಂತಿ ಆಚರಣೆ

ಶಾಸಕ ಸಿ.ಪುಟ್ಟರಂಗಶೆಟ್ಟರನ್ನು ಸಚಿವರನ್ನಾಗಿ ಮಾಡಲು ಪಿ.ಲಿಂಗರಾಜು ಆಗ್ರಹ



ಚಾಮರಾಜನಗರ, ಮೇ 29– ಸತತ ನಾಲ್ಕುಬಾರಿ ಗೆಲುವು ಸಾಧಿಸಿರುವ ಉಪ್ಪಾರ ಸಮುದಾಯದ ಏಕೈಕ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರನ್ನು ಸಚಿವರನ್ನಾಗಿ ಮಾಡಬೇಕು ಎಂದು ಕಾಂಗ್ರೆಸ್ ವರಿಷ್ಠರನ್ನು ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಪಿ.ಲಿಂಗರಾಜು ಒತ್ತಾಯಿಸಿದರು.

ನಗರದ ಚೆನ್ನೀಪುರದ ಮೋಳೆಯಲ್ಲಿ ಶ್ರೀಭಗೀರಥ ಫೌಂಡೇಶನ್ ಹಾಗೂ ಶ್ರೀಭಗೀರಥ ಸ್ವ–ಸಹಾಯ ಸಂಘದ ವತಿಯಿಂದ ನಡೆದ ಶ್ರೀಭಗೀರಥ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಭಗೀರಥರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಅಪಾರ ಜನಪ್ರಿಯತೆಯಿಂದ ಪುಟ್ಟರಂಗಶೆಟ್ಟರು ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಸತತ ನಾಲ್ಕು ಬಾರಿಯೂ ಜಯಭೇರಿ ಬಾರಿಸಿದರು. ಅವರಿಗೆ ಮಂತ್ರಿ ಅವಕಾಶ ಕೊನೆಯವರೆಗೂ ಇತ್ತು. ಕೊನೆಗಳಿಗೆಯಲ್ಲಿ ಅವರನ್ನು ಮಂತ್ರಿಸ್ಥಾನದಿಂದ ಕೈ ಬಿಡಲಾಗಿದೆ. ಇದು ಸಮುದಾಯಕ್ಕೆ ತುಂಬಾ ನೋವು ಉಂಟು ಮಾಡಿದೆ. ಆದರಿಂದ ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಆಸ್ತಿ: ಉಪ್ಪಾರ ಸಮುದಾಯಕ್ಕೆ ಶಿಕ್ಷಣ ಆಸ್ತಿಯಾಗಿರುವುದರಿಂದ ಉಪ್ಪಾರ ಸಮುದಾಯ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಭಗೀರಥರ ಕಠಿಣ ಪ್ರಯತ್ನದಂತೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ಪಡೆಯಬೇಕು. ಕಂದಾಚಾರಗಳಿಂದ ದೂರವಿರಬೇಕು. ಸಂಘಟಿತರಾಗಬೇಕು ಎಂದರು. ಸನ್ಮಾನ ಸ್ವೀಕರಿಸಿದ ಪರಿಸರ ಪ್ರೇಮಿ ಸಿ.ಎಂ.ವೆಂಕಟೇಶ್, ಮಾತನಾಡಿ, ಶ್ರೀಭಗೀರಥ ಫೌಂಡೇಶನ್ ಹಾಗೂ ಶ್ರೀಭಗೀರಥ ಸ್ವ–ಸಹಾಯ ಸಂಘದಿಂದ ಸಮುದಾಯ ಆರ್ಥಿಕವಾಗಿ ಸಬಲರಾಗಬಹುದು ಎಂದರು.

ಸಾಧಕರಿಗೆ ಸನ್ಮಾನ: ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಉಪ್ಪಾರ ಸಮುದಾಯ ಪರಿಸರ ಪ್ರೇಮಿ ಸಿ.ಎಂ.ವೆಂಕಟೇಶ್, ಹೈಕೋರ್ಟ್ ವಕೀಲರಾದ ಆರ್.ರಂಗಸ್ವಾಮಿ, ಶಿಕ್ಷಕ ರಂಗಸ್ವಾಮಿ, ಹರದನಹಳ್ಳಿ ಸೆಸ್ಕಾಂ ಜೆಇ ವಸಂತಕುಮಾರ್, ಪ್ರಗತಿಪರ ರೈತ ಮಹದೇವಶೆಟ್ಟಿ ಬ್ಯಾಡಮೂಡ್ಲು ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಹದೇವಶೆಟ್ಟಿ, ವಕೀಲರಾದ ಲೋಕೇಶ್, ನಾಗರಾಜು, ಎ.ಪಿ.ನಾಗೇಶ್, ಗೋವಿಂದರಾಜು, ಕೃಷ್ಣ, ಮಹದೇವಶೆಟ್ಟಿ ಇತರರಿದ್ದರು.

ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 29– ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2023–24ನೇ ಸಾಲಿನ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಎಲೆಕ್ಟ್ರೀಷಿಯನ್, ಫಿಟ್ಟರ್ ವೃತ್ತಿಗಳಿಗೆ ವೆಬ್‌ಸೈಟ್ www.cite.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಆಸಕ್ತ ಅಭ್ಯರ್ಥಿಗಳು ಸಿಟಿಎಸ್ ಯೋಜನೆಯಡಿಯಲ್ಲಿರುವ ತಾಂತ್ರಿಕ ವೃತ್ತಿಗಳಿಗೆ ಸ್ವತಹ ಅಥವಾ ಸಂಸ್ಥೆಗೆ ಬಂದು ಜೂನ್ 9ರವರೆಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಸಂಸ್ಥೆಯ ಪ್ರಾಚಾರ್ಯರ ಮೊ.ಸಂ 9448322941 ಸಂಪರ್ಕಿಸುವಂತೆ ತೆರಕಣಾಂಬಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಪ್ರಮುಖ ಖಾತೆಗಳ ಬಂಪರ್

ಸಚಿವರ ಖಾತೆ ಹಂಚಿಕೆ ಅಧಿಕೃತ ಪಟ್ಟಿ

ಸಿದ್ದರಾಮಯ್ಯ	: ಹಣಕಾಸು, ಐಟಿ–ಬಿಟಿ, ಗುಪ್ತಚರ, ಯಾರಿಗೂ ಹಂಚಿಕೆಯಾಗದ ಉಳಿದ ಖಾತೆಗಳು
ಡಿ.ಕೆ.ಶಿವಕುಮಾರ್	: ಜಲ ಸಂಪನ್ಮೂಲ, ಬೆಂಗಳೂರು ಅಭಿವೃದ್ಧಿ
ಡಾ.ಜಿ.ಪರಮೇಶ್ವರ್	: ಗೃಹ
ಹೆಚ್.ಕೆ.ಪಾಟೀಲ್	: ಕಾನೂನು ಮತ್ತು ಸಂಸದೀಯ ವ್ಯವಹಾರ, ಪ್ರವಾಸೋದ್ಯಮ
ಕೆ.ಹೆಚ್.ಮುನಿಯಪ್ಪ	: ಆಹಾರ ಮತ್ತು ನಾಗರಿಕ ಸರಬರಾಜು
ರಾಮಲಿಂಗಾರೆಡ್ಡಿ	: ಸಾರಿಗೆ, ಮುಜರಾಯಿ
ಎಂ.ಬಿ.ಪಾಟೀಲ್	: ಬೃಹತ್ ಹಾಗೂ ಮಧ್ಯಮ ಕೈಗಾರಿಕೆ
ಕೆ.ಜೆ.ಜಾರ್ಜ್	: ಇಂಧನ
ದಿನೇಶ್ ಗುಂಡೂರಾವ್	: ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹೆಚ್.ಸಿ.ಮಹದೇವಪ್ಪ	: ಸಮಾಜಕಲ್ಯಾಣ
ಸತೀಶ್ ಜಾರಕಿಹೊಳಿ	: ಲೋಕೋಪಯೋಗಿ
ಕೃಷ್ಣ ಬೈರೇಗೌಡ	: ಕಂದಾಯ
ಪ್ರಿಯಾಂಕ್ ಖರ್ಗೆ	: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಶಿವಾನಂದ ಪಾಟೀಲ್	: ಜವಳಿ, ಸಕ್ಕರೆ
ಜಮೀರ್ ಅಹಮದ್ ಖಾನ್	: ವಸತಿ, ಅಲ್ಪಸಂಖ್ಯಾತರ ಕಲ್ಯಾಣ
ಶರಣಬಸಪ್ಪ ದರ್ಶನಾಪುರ್	: ಸಣ್ಣ ಕೈಗಾರಿಕೆ
ಈಶ್ವರ್ ಖಂಡ್ರೆ	: ಅರಣ್ಯ ಮತ್ತು ಪರಿಸರ
ಚಲುವರಾಯಸ್ವಾಮಿ	: ಕೃಷಿ
ಎಸ್.ಎಸ್.ಮಲ್ಲಿಕಾರ್ಜುನ	: ಗಣಿ ಮತ್ತು ಭೂ ವಿಜ್ಞಾನ
ರಹೀಂ ಖಾನ್	: ಪೌರಾಡಳಿತ, ಹಜ್
ಸಂತೋಷ್ ಲಾಡ್	: ಕಾರ್ಮಿಕ
ಡಾ.ಶರಣಪ್ರಕಾಶ್ ಪಾಟೀಲ್	: ವೈದ್ಯಕೀಯ ಶಿಕ್ಷಣ
ಆರ್.ಬಿ.ತಿಮ್ಮಾಪುರ	: ಅಬಕಾರಿ
ಕೆ.ವೆಂಕಟೇಶ್	: ಪಶುಸಂಗೋಪನೆ, ರೇಷ್ಮೆ
ಶಿವರಾಜ್ ತಂಗಡಗಿ	: ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ
ಡಿ.ಸುಧಾಕರ್	: ಯೋಜನೆ
ಬಿ.ನಾಗೇಂದ್ರ	: ಯುವಜನ ಸೇವಾ ಕ್ರೀಡೆ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ
ಕೆ.ಎನ್.ರಾಜಣ್ಣ	: ಸಹಕಾರ
ಭೈರತಿ ಸುರೇಶ್	: ನಗರಾಭಿವೃದ್ಧಿ
ಲಕ್ಷ್ಮೀ ಹೆಬ್ಬಾಳ್ಕರ್	: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ಮಂಕಾಳ್ ವೈದ್ಯ	: ಮೀನುಗಾರಿಕೆ ಮತ್ತು ಬಂದರು
ಮಧು ಬಂಗಾರಪ್ಪ	: ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ
ಡಾ.ಎಂ.ಸಿ.ಸುಧಾಕರ್	: ಉನ್ನತ ಶಿಕ್ಷಣ
ಎನ್.ಎಸ್.ಬೋಸರಾಜ್	: ಸಣ್ಣ ನೀರಾವರಿ ಮತ್ತು ವಿಜ್ಞಾನ & ತಂತ್ರಜ್ಞಾನ

ಕೆಲ ಸಚಿವರಿಗೆ ಕೊಠಡಿ ಹಂಚಿಕೆ ವಿವರ

ಕೃಷ್ಣ ಬೈರೇಗೌಡ	– ವಿಧಾನಸೌಧದ 244, 245 ಕೊಠಡಿ
ಹೆಚ್.ಕೆ.ಪಾಟೀಲ್	– ವಿಧಾನಸೌಧದ 314, 314ಎ ಕೊಠಡಿ
ಕೆ.ವೆಂಕಟೇಶ್	– ವಿಧಾನಸೌಧದ 329, 329ಎ ಕೊಠಡಿ
ಡಾ.ಹೆಚ್.ಸಿ.ಮಹದೇವಪ್ಪ	– ವಿಧಾನಸೌಧದ 330, 330ಎ ಕೊಠಡಿ
ಕೆ.ಎನ್.ರಾಜಣ್ಣ	– ವಿಧಾನಸೌಧದ 339, 339ಎ ಕೊಠಡಿ
ಶರಣಬಸಪ್ಪ ದರ್ಶನಾಪುರ	– ವಿಧಾನಸೌಧದ 328, 328ಎ ಕೊಠಡಿ
ಸಂತೋಷ್ ಲಾಡ್	– ವಿಧಾನಸೌಧದ 342, 342ಎ ಕೊಠಡಿ
ಭೈರತಿ ಸುರೇಶ್	– ವಿಧಾನಸೌಧದ 316, 316ಎ ಕೊಠಡಿ
ಬಿ.ನಾಗೇಂದ್ರ	– ವಿಧಾನಸೌಧದ 343, 343ಎ ಕೊಠಡಿ
ಲಕ್ಷ್ಮೀ ಹೆಬ್ಬಾಳ್ಕರ್	– ವಿಧಾನಸೌಧದ 301, 301ಎ ಕೊಠಡಿ
ಡಾ.ಎಂ.ಸಿ.ಸುಧಾಕರ್	– ವಿಕಾಸಸೌಧದ 344, 345 ಕೊಠಡಿ
ರಹೀಂ ಖಾನ್	– ವಿಕಾಸಸೌಧದ 38, 39 ಕೊಠಡಿ

ಬಳ್ಳಾರಿ ಮೂಲದ 10 ಮಂದಿ ಸಾವು

ಮೈಸೂರಿನ ಲಾಡ್ಜ್‌ವೊಂದರಲ್ಲಿ ವಾಸ್ತವ್ಯ ಹೂಡಿ ಮೇ 28ರಂದು ಮೈಸೂರು ಸುತ್ತಮುತ್ತಲಿನ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ ನಂತರ ಇಂದು ಬೆಳಗ್ಗೆ ಇನ್ನೋವಾ ಟ್ಯಾಕ್ಸಿ ಬುಕ್ ಮಾಡಿಕೊಂಡು ಬಿಳಿಗಿರಿರಂಗನ ಬೆಟ್ಟಕ್ಕೆ ತೆರಳಿದ್ದಾರೆ. ಬಿಳಿಗಿರಿ ರಂಗನಾಥ ಸ್ವಾಮಿ ದರ್ಶನ ಪಡೆದು ಅಲ್ಲಿನ ಅರಣ್ಯ ಸೌಂದರ್ಯವನ್ನು ಸವಿದು ಮೈಸೂರಿಗೆ ಹಿಂತಿರುಗುತ್ತಿದ್ದರು. ಇಂದು ಸಂಜೆ 5 ಗಂಟೆಗೆ ರೈಲಿನಲ್ಲಿ ಬಳ್ಳಾರಿಗೆ ತೆರಳಲು ಟಿಕೆಟ್ ಬುಕ್ ಆಗಿತ್ತು. ವಿಧಿಯಾಟವೆಂದರೆ ಇನ್ನೋವಾ ಕಾರು (ಕೆಎ–02, ಎಡಿ–5182) ಮೂಗೂರು ದಾಟಿ ತಿ.ನರಸೀಪುರದತ್ತ ವೇಗವಾಗಿ ಬರುತ್ತಿದ್ದಾಗ ಕುರುಬೂರು ಗ್ರಾಮದ ಪಿಂಜರಾಪೋಲ್ ಬಳಿಯ ತಿರುವಿನಲ್ಲಿ ಇನ್ನೋವಾ ಚಾಲಕ ಅತೀ ವೇಗವಾಗಿ ನಿರ್ಲಕ್ಷ್ಯತನದಿಂದ ರಸ್ತೆಯ ಬಲಭಾಗದಲ್ಲಿ ಬರುತ್ತಿದ್ದಂತೆಯೇ, ಅಷ್ಟೇ ವೇಗವಾಗಿ ಖಾಸಗಿ ಬಸ್ (ಕೆಎ–55, 2061) ಎದುರುಗೊಂಡಿದೆ. ತಕ್ಷಣ ನಿಯಂತ್ರಿಸಲಾಗದೇ ಬಸ್‌ಗೆ ಇನ್ನೋವಾ ಅಪ್ಪಳಿಸಿದೆ. ಅಪಘಾತದ ದೃಶ್ಯ ಬಸ್‌ನ ಡ್ಯಾಶ್‌ಬೋರ್ಡ್‌ನಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ರಸ್ತೆಯ ರಾಂಗ್ ಸೈಡ್ ಬಲ ಭಾಗದಲ್ಲಿದ್ದು, ಬಸ್ ಕಾಣುತ್ತಲೇ ಎಡಕ್ಕೆ ತಿರುಗುವಷ್ಟರಲ್ಲಿ ಬಸ್‌ಗೆ ಅಪ್ಪಳಿಸಿದೆ. ಅಪಘಾತವಾಗುತ್ತಲೇ ಬಸ್ ಕೂಡ ನಿಯಂತ್ರಣ ತಪ್ಪಿ ರಸ್ತೆಯ ಬಲಭಾಗದ ಅಂಚಿಗೆ ಹೋಗಿ ನಿಂತಿದೆ.

ಅಪಘಾತದ ರಭಸಕ್ಕೆ ಇನ್ನೋವಾ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಇದರಲ್ಲಿದ್ದ ಚಾಲಕ ಸೇರಿ 10 ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದು, ಕೆಲ ಮೃತದೇಹಗಳು ರಸ್ತೆಯಲ್ಲಿ ಬಿದ್ದಿದ್ದರೆ, ಒಂದು ಮೃತದೇಹ ಕಾರಿನ ಬಾಗಿಲ ಬಳಿ ನೇತಾಡುತ್ತಿತ್ತು. ಮತ್ತೆ ಕೆಲ ಶವಗಳು ಕಾರಿನಲ್ಲೇ ಸಿಲುಕಿದ್ದವು. ರಸ್ತೆಯಲ್ಲಿ ರಕ್ತ ಚೆಲ್ಲಾಡಿತ್ತು. ಬಸ್ ಪ್ರಯಾಣಿಕರು ಮತ್ತು ಸ್ಥಳೀಯರು ತೀವ್ರವಾಗಿ ಗಾಯಗೊಂಡು ನರಳುತ್ತಿದ್ದ ಮೂವರನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಗೆ ರವಾನಿಸಿದ್ದರು. ಅಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ರವಾನಿಸಲಾಗಿದೆ. ಅದೇ ವೇಳೆ ಬಸ್ಸಿನಲ್ಲಿದ್ದ ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ವಿದ್ಯಾರ್ಥಿನಿ ಭಾನು ಎಂಬಾಕೆ ತೀವ್ರವಾಗಿ ಗಾಯಗೊಂಡು ತಿ.ನರಸೀಪುರ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದ ನಂತರ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ದಾಖಲಾಗಿದ್ದಾಳೆ.

ವಿಷಯ ತಿಳಿಯುತ್ತಿದ್ದಂತೆಯೇ ಮೈಸೂರು ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್ಪಿ ನಂದಿನಿ, ತಿ.ನರಸೀಪುರ ಠಾಣೆಯ ಪ್ರಭಾರ ಇನ್ಸ್‌ಪೆಕ್ಟರ್ ಹಾಗೂ ತಲಕಾಡು ಠಾಣೆ ಇನ್ಸ್‌ಪೆಕ್ಟರ್ ವಿಶ್ವನಾಥ್, ಸಿಬ್ಬಂದಿಗಳನ್ನೊಳಗೊಂಡು ಸ್ಥಳಕ್ಕೆ ದೌಡಾಯಿಸಿದರು. ಕಾರಿನಲ್ಲಿ ಸಿಲುಕಿದ್ದ ಮೃತದೇಹಗಳನ್ನು ಹೊರ ತೆಗೆಯಲು ಅಗ್ನಿ ಶಾಮಕ ದಳದ ಸಿಬ್ಬಂದಿಯನ್ನು ಕರೆಸಿಕೊಳ್ಳಲಾಗಿತ್ತು. ಅವರು ಗ್ಯಾಸ್ ಕಟ್ಟರ್‌ನಿಂದ ಕಾರಿನ ಕೆಲ ಭಾಗಗಳನ್ನು ತುಂಡರಿಸಿ ಮೃತದೇಹಗಳನ್ನು ಹೊರ ತೆಗೆದರು. ಇವರಿಗೆ ಸ್ಥಳೀಯರು ಕೂಡ ಸಹಕಾರ ನೀಡಿದರು. ಅಷ್ಟರಲ್ಲಿ ಆಂಬುಲೆನ್ಸ್‌ಗಳಲ್ಲಿ ಆಗಮಿಸಿದ್ದ ಮೈಸೂರು ಮತ್ತು ತಿ.ನರಸೀಪುರ ವೈದ್ಯಕೀಯ ಸಿಬ್ಬಂದಿ ಮೃತದೇಹಗಳನ್ನು ಮೈಸೂರು ಮೆಡಿಕಲ್ ಕಾಲೇಜು ಶವಾಗಾರಕ್ಕೆ ರವಾನಿಸಿದರು.

ಸರ್ಕಾರದಿಂದ ಮಾರ್ಗಸೂಚಿ

ಸಿದ್ಧವಾಗಿರಿಸಲು ನಿರ್ವಾಹಕರನ್ನು ಕೇಳಲಾಗಿದೆ. 244 ಕೆಲಸದ ದಿನಗಳು ಹೊಸ ಶಾಲಾ ವರ್ಷಕ್ಕಾಗಿ, ವರ್ಷವಿಡೀ ಸುಗಮ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಶೈಕ್ಷಣಿಕ ಮಾರ್ಗಸೂಚಿಯನ್ನು ಹೊರತಂದಿದೆ.

2023–24ರ ಶೈಕ್ಷಣಿಕ ವರ್ಷದಲ್ಲಿ ಶಾಲೆಗಳು ಒಟ್ಟು 244 ದಿನ ಕಾರ್ಯನಿರ್ವಹಿಸಲಿದೆ. ಮೇ 31ರಿಂದ ಶಾಲೆಗಳು ಅಕ್ಟೋಬರ್ 7 ರವರೆಗೆ ಕಾರ್ಯನಿರ್ವಹಿಸುತ್ತವೆ; ಅಕ್ಟೋಬರ್ 8 ರಿಂದ ಅಕ್ಟೋಬರ್ 24 ರವರೆಗೆ ದಸರಾ ರಜೆಯಿರುತ್ತದೆ. ಎರಡನೇ ಅವಧಿಯು ಅಕ್ಟೋಬರ್ 25 ರಂದು ಪ್ರಾರಂಭವಾಗಿ ಏಪ್ರಿಲ್ 10, 2024 ರವರೆಗೆ ನಡೆಯಲಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸುತ್ತೋಲೆಯಲ್ಲಿ ತಿಳಿಸಿದ್ದಾರೆ. ಜೂನ್ 1 ರಿಂದ ಪಠ್ಯಕ್ರಮದ ಬೋಧನೆ ಪ್ರಾರಂಭವಾಗಲಿದೆ. ನಾಳೆಯೊಳಗೆ ಹೊಸ ಶೈಕ್ಷಣಿಕ ವರ್ಷಕ್ಕೆ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಮತ್ತು ಸಮವಸ್ತ್ರವನ್ನು ಕಡ್ಡಾಯವಾಗಿ ವಿತರಿಸಲು ಶಾಲೆಗಳಿಗೆ ಸೂಚನೆ ನೀಡಲಾಗಿದೆ. ಬಾಕಿ ಇರುವ ವಿದ್ಯಾರ್ಥಿಗಳಿಗೆ ಆಧಾರ್ ಪರಿಶೀಲನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ತಿಳಿಸಲಾಗಿದೆ.

ತಲಾ 2 ಲಕ್ಷ ರೂ. ಪರಿಹಾರ

ಶಾಂತಿ ಕೋರುತ್ತೇನೆ. ದುರ್ಘಟನೆಯಲ್ಲಿ ಮೃತಪಟ್ಟವರ ಕುಟುಂಬಕ್ಕೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ ಎರಡು ಲಕ್ಷ ರೂಪಾಯಿ ಪರಿಹಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ.

ಮೋದಿ ಸಂತಾಪ: ಪರಿಹಾರ ಘೋಷಣೆ

ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ನನ್ನ ಸಾಂತ್ವನ ತಿಳಿಸುತ್ತೇನೆ. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲು ಪ್ರಾರ್ಥಿಸುತ್ತೇನೆ" ಎಂದು ಟ್ವೀಟ್ ಸಂದೇಶದಲ್ಲಿ ತಿಳಿಸಲಾಗಿದೆ. "ಮೈಸೂರು ದುರಂತದಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬ ಸದಸ್ಯರಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ 2 ಲಕ್ಷ, ಗಾಯಾಳುಗಳಿಗೆ 50,000 ರೂ. ಪರಿಹಾರ ನೀಡಲಾಗುವುದು" ಎಂದು ಟ್ವೀಟ್‌ನಲ್ಲಿ ಮಾಹಿತಿ ನೀಡಲಾಗಿದೆ.

ಜನರ ಪರವಾಗಿ ಕೆಲಸ ಮಾಡಿ; ಕಾಮಗಾರಿ ನಿಲ್ಲಿಸಬೇಡಿ

ಪಾಲಿಕೆ ಅಧಿಕಾರಿಗಳಿಗೆ ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ಸೂಚನೆ



ಮೈಸೂರು, ಮೇ 29(ಎಂಟಿವೈ)– ಜನರ ಬೇಡಿಕೆಗೆ ಅನುಗುಣವಾಗಿ ಅಭಿವೃದ್ಧಿ ಕಾರ್ಯ ನಡೆಸುವುದಕ್ಕೆ ಅಧಿಕಾರಿಗಳು ದಕ್ಷತೆ ಪ್ರದರ್ಶಿಸಬೇಕು ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಸೂಚನೆ ನೀಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಚಾಮರಾಜ ಕ್ಷೇತ್ರದ ಅಭಿವೃದ್ಧಿ ಕುರಿತಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ನಂತರ ಮಾತನಾಡಿದ ಶಾಸಕರು, ಚಾಮರಾಜ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳು ತ್ವರಿಗತಿಯಲ್ಲಿ ನಡೆಸಬೇಕು. ಜನರ ಬೇಡಿಕೆಗೆ ಅನುಗುಣವಾಗಿ ವೇಗದ ಪ್ರಗತಿಗೆ ಪಾಲಿಕೆಯ ಎಲ್ಲಾ ವಿಭಾಗದ ಅಧಿಕಾರಿಗಳು, ಸಿಬ್ಬಂದಿಗಳು ಕಾರ್ಯನಿರ್ವಹಿಸಬೇಕು. ಯಾವ ಅಧಿಕಾರಿಗಳಿಗೆ ಕೆಲಸ ಮಾಡಲು ಸಾಧ್ಯವಿಲ್ಲವೋ, ಅಂತಹವರು ಕೆಲಸದ ಒತ್ತಡವಿಲ್ಲದ ಇಲಾಖೆಗೆ ವರ್ಗಾವಣೆ ಮಾಡಿಸಿಕೊಳ್ಳಿ. ನಾನು ಜನರ ಪರವಾಗಿ ಕೆಲಸ ಮಾಡುವಂತೆ ಸೂಚಿಸುತ್ತೇನೆ. ಅದನ್ನು ಆದೇಶ ಎಂದು ಪರಿಗಣಿಸದೇ, ಮನವಿ ಎಂದು ಭಾವಿಸಿ ಕೆಲಸ ಮಾಡಿ. ನನಗೆ ಏನು ತಿಳಿದಿಲ್ಲ ಎಂದುಕೊಳ್ಳಬೇಡಿ. ನನಗೆ ಕ್ಷೇತ್ರದ ಜನರ ಹಿತಕಾಯುವುದು ಮುಖ್ಯ. ಹಾಗಾಗಿ ಉತ್ತಮವಾಗಿ ಕೆಲಸ ಮಾಡಬೇಕು ಎಂದರು.

ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಮಾಡಲಿ ಎಂದು ಜನ ನಮ್ಮನ್ನು ಆರಿಸಿ ವಿಧಾನ ಸಭೆಗೆ ಕಳುಹಿಸಿದ್ದಾರೆ. ಜನರು ಇಟ್ಟಿರುವ ವಿಶ್ವಾಸ ಉಳಿಸಿಕೊಳ್ಳಬೇಕು. ಮುಂದಿನ 5 ವರ್ಷ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ವೇಗ ನೀಡಬೇಕು. ನಿರ್ಲಕ್ಷ್ಯ ಮಾಡದೆ ಕೆಲಸ ಮಾಡಿ. ನಿಮಗೆ ನಾನು ಸಹಕಾರ ನೀಡುತ್ತೇನೆ ಪಾಲಿಕೆಯಲ್ಲಿ ಯುವ ಅಧಿಕಾರಿಗಳ ಸಂಖ್ಯೆಯೇ ಹೆಚ್ಚಾಗಿದೆ. ನಿಮ್ಮಲ್ಲಿರುವ ಹೊಸ ಆಲೋಚನೆಯೊಂದಿಗೆ ಅಭಿವೃದ್ಧಿ ಕಾರ್ಯಕ್ಕೆ ವೇಗದ ಸ್ಪರ್ಶ ನೀಡಬೇಕು. ಅಭಿವೃದ್ಧಿ ವಿಚಾರದಲ್ಲಿ ಪಕ್ಷಭೇದ ಮಾಡದೆ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಕ್ಷೇತ್ರದಲ್ಲಿ ಏನಾದರೂ ಸಮಸ್ಯೆ ಇದ್ದರೆ ನನ್ನ ಗಮನಕ್ಕೆ ತನ್ನಿ ರಾಜ್ಯದಲ್ಲಿಯೂ ನಮ್ಮದೇ ಸರಕಾರ ಇದೆ. ಬಗೆಹರಿಸುವ ಪ್ರಯತ್ನ ಮಾಡುತ್ತೇನೆ. ಅದನ್ನು ಬಿಟ್ಟು ಬೇಜವಾಬ್ದಾರಿ, ನಿರ್ಲಕ್ಷ್ಯತೆಯಿಂದ ಕೆಲಸ ಮಾಡುವುದನ್ನು ಸಹಿಸಲಾಗುವುದು, ಅಂತಹವರು ಪಾಲಿಕೆ ಬಿಟ್ಟು ಬೇರೆಡೆ ತೆರಳಬಹುದು. ಬದ್ಧತೆಯಿಂದ ಕಾರ್ಯ ನಿರ್ವಹಿಸುವವರು ನನ್ನೊಂದಿಗೆ ಇಲ್ಲಿ ಇರಬಹುದು ಎಂದು ತಿಳಿಸಿದರು.

ಕಾಮಗಾರಿ ಅರ್ಧಕ್ಕೆ ನಿಲ್ಲಿಸಬಾರದು: ಯಾವುದೇ ಪ್ರದೇಶದಲ್ಲಾದರೂ ಸರಿ ಅನುದಾನದ ಕೊರತೆ ಮುಂದಿಟ್ಟುಕೊಂಡು ಅರೆಬರೆ ಕಾಮಗಾರಿ ನಡೆಸಬಾರದು. ಮೊದಲ ಹಂತದಲ್ಲಿ ಅರ್ಧ, ಮತ್ತೊಂದು ಹಂತದಲ್ಲಿ ಇನ್ನರ್ಧ ಕಾಮಗಾರಿ ನಡೆಸಬಾರದು. ಕೆಲವು ಕಡೆ ಚರಂಡಿ ಕಾಮಗಾರಿ ಮಾಡಲಾಗಿದೆ. ಆದರೆ, ಮಾಡಿದ ಚರಂಡಿಗೆ ಸ್ಲಾಬ್ ಹಾಕಿ ಮುಚ್ಚಲು ಮತ್ತೊಂದು ಟೆಂಡರ್ ಕರೆಯುವುದಕ್ಕೆ ಕಾಯುತ್ತಿರುವುದು ಕಂಡುಬಂದಿದೆ. ಚರಂಡಿ ಮುಚ್ಚದಿದ್ದರೆ ವಾಹನ ಸವಾರರು, ಸೈಕಲ್ ಸವಾರರು, ವಿದ್ಯಾರ್ಥಿಗಳು, ದಾರಿಹೋಕರು ಆಕಸ್ಮಿಕವಾಗಿ ಬಿದ್ದರೆ ಯಾರು ಹೊಣೆ? ಇನ್ನಾದರೂ ಕಾಮಗಾರಿ ನಡೆಸುವುದಾದರೆ ಪೂರ್ಣ ಪ್ರಮಾಣದ ಕಾಮಗಾರಿ ನಡೆಸಬೇಕು. ಅನುದಾನ ಇಲ್ಲದಿದ್ದರೆ, ಬೇರೆ ಅನುದಾನದ ವರ್ಗಾಯಿಸಿ ಕಾಮಗಾರಿ ಪೂರ್ಣಗೊಳಿಸುವ ಪರಿಪಾಠ ಅನುಸರಿಸುವಂತೆ ಸಲಹೆ ನೀಡಿದರು.

ಮೈಸೂರಿನ ಕೆಲವೆಡೆ ರಸ್ತೆ ದುರಸ್ತಿ ಹಾಗೂ ಚರಂಡಿ ಕಾಮಗಾರಿ ನಡೆಸುವ ವೇಳೆ ವೈಜ್ಞಾನಿಕವಾಗಿ ಕಾಮಗಾರಿ ಪೂರ್ಣಗೊಳಿಸದೇ ಇರುವುದು ಕಂಡುಬಂದಿದೆ. ರಸ್ತೆಗಳಲ್ಲಿ ಹಳ್ಳಗಳಿವೆ. ಅದನ್ನು ದುರಸ್ತಿ ಮಾಡಿಲ್ಲ. ಪೈಪ್‌ಲೈನ್ ಅಳವಡಿಕೆಗೆ ತೆಗೆದಿದ್ದ ಗುಂಡಿಯನ್ನು ಸರಿಯಾಗಿ ಮುಚ್ಚಿಲ್ಲ. ಕೆಲವೆಡೆ ರಸ್ತೆ ಮೇಲೆ ಮಣ್ಣಿನ ಉಬ್ಬು ಇದ್ದರೆ, ಮತ್ತೆ ಕೆಲವೆಡೆ ಗುಂಡಿ ಬಿದ್ದಿವೆ. ಇದನ್ನು ತುರ್ತಾಗಿ ಸರಿಪಡಿಸುವಂತೆ ಆದೇಶಿಸಿದರು.

ನರ್ಮ್ ಯೋಜನೆ ಮನೆಗಳ ದುರಸ್ತಿ: ಚಾಮರಾಜ ಕ್ಷೇತ್ರದ ವಿವಿಧೆಡೆಯಿರುವ ನರ್ಮ್ ಯೋಜನೆಯಡಿ ನಿರ್ಮಿಸಿರುವ 894 ಮನೆಗಳಲ್ಲಿ ಬಹುತೇಕ ಮನೆಗಳಿಂದ ನೀರು ಸೋರುತ್ತಿರುವ ದೂರು ಕೇಳಿಬಂದಿದೆ. ಚರಂಡಿ ನೀರು ಸೋರಿಕೆಯಾಗುತ್ತಿದೆ. ಮಳೆ ನೀರು ಚಾವಣಿಯಿಂದ ಸೋರುತ್ತಿದೆ. ಈ ಹಿನ್ನೆಲೆಯಲ್ಲಿ ಒಂದು ಬಾರಿ ದುರಸ್ತಿ ಮಾಡಿಸಬೇಕು. ಮನೆಗಳ ಮಾಲೀಕರೊಂದಿಗೆ ಸಭೆ ನಡೆಸಿ, ಇದೊಂದು ಬಾರಿ ಪಾಲಿಕೆಯಿಂದ ದುರಸ್ತಿ ಮಾಡಿಸಿಕೊಡುತ್ತೇವೆ. ಮುಂದೆ ನಿಮ್ಮ ಮನೆಯನ್ನು ನೀವೆ ನಿರ್ವಹಣೆ ಮಾಡಬೇಕು ಎಂದು ಸೂಚಿಸುವಂತೆ ಶಾಸಕರು ಸಲಹೆ ನೀಡಿದರು.

ಗುತ್ತಿಗೆದಾರರಿಗೆ ನೋಟಿಸ್ ನೀಡಿ

ಚಾಮರಾಜ ಕ್ಷೇತ್ರದಲ್ಲಿ ವಿವಿಧೆಡೆ ನಡೆಯುತ್ತಿರುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳ ಮಾಹಿತಿ ಪಡೆದ ಶಾಸಕರು, ಕೆಲವೆಡೆ ಕಾಮಗಾರಿ ವಿಳಂಬವಾಗಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು.

ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸದೇ ನಿರ್ಲಕ್ಷಿಸುವ ಗುತ್ತಿಗೆದಾರರಿಗೆ ನೋಟಿಸ್ ನೀಡಿ ಎಚ್ಚರಿಕೆ ನೀಡಬೇಕು. ಮೈಸೂರು ನಗರದಲ್ಲಿ ನಿಗದಿತ ಕಾಲಾವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸದ ಗುತ್ತಿಗೆದಾರರಿಗೆ ಯಾವುದೇ ಮುಲಾಜಿಲ್ಲದೇ ನೋಟಿಸ್ ನೀಡುವ ಮೂಲಕ ಎಚ್ಚರಿಕೆ ನೀಡಬೇಕು. ಆದಷ್ಟು ಬೇಗ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. –ಶಾಸಕ ಕೆ.ಹರೀಶ್‌ಗೌಡ

ಆರೋಗ್ಯ ಕಾಪಾಡುವುದು ಮುಖ್ಯ: ಮೈಸೂರಿನ ಹೃದಯಭಾಗದಲ್ಲಿರುವ ಚಾಮರಾಜ ಕ್ಷೇತ್ರದಲ್ಲಿ ಆರೋಗ್ಯ, ಶಿಕ್ಷಣ, ಸ್ವಚ್ಛತೆ ಕಾಪಾಡುವುದಕ್ಕೆ ಆದ್ಯತೆ ನೀಡಬೇಕು. ಕುಡಿಯುವ ನೀರು ಪೂರೈಕೆ ಅಡಚಣೆಯಾದಂತೆ ನೋಡಿಕೊಳ್ಳಬೇಕು. ಹಲವೆಡೆ ಬೀದಿ ದೀಪ ಇಲ್ಲದೆ ಕಗ್ಗತಲು ಆವರಿಸಿದೆ. ಈ ಎಲ್ಲಾ ನಾಗರೀಕ ಸಮಸ್ಯೆಗೆ ಸ್ಪಂದಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಹೆಚ್ಚುವರಿ ಆಯುಕ್ತ ರೂಪಾ, ಆರೋಗ್ಯಾಧಿಕಾರಿ ಡಾ.ನಾಗರಾಜು, ಕಂದಾಯ ವಿಭಾಗ ಉಪ ಆಯುಕ್ತ ದಾಸೇಗೌಡ, ವಾಣಿ ವಿಲಾಸ ನೀರು ಸರಬರಾಜು ವಿಭಾಗದ ಇಇ ಸುವರ್ಣ, ಎಸ್‌ಇ ಮಹೇಶ್ ಸೇರಿದಂತೆ ಚಾಮರಾಜ ಕ್ಷೇತ್ರದ ವಲಯ ಕಚೇರಿಗಳ ಎಲ್ಲಾ ಸಹಾಯಕ ಆಯುಕ್ತರು, ಅಭಿವೃದ್ಧಿ ಅಧಿಕಾರಿಗಳು ಮತ್ತು ಎಂಜಿನಿಯರ್‌ಗಳು ಪಾಲ್ಗೊಂಡಿದ್ದರು.

ಕಬಿನಿ ನೀರು ಪೂರೈಸುವ ಕಾಮಗಾರಿ; ಶಾಸಕ ಟಿ.ಎಸ್.ಶ್ರೀವತ್ಸ ಪರಿಶೀಲನೆ



ಮೈಸೂರು, ಮೇ 29(ಆರ್‌ಕೆ)– ಕಬಿನಿಯಿಂದ ಮೈಸೂರಿಗೆ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವಂತೆ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ, ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೇಯರ್ ಶಿವಕುಮಾರ್ ಅವರೊಂದಿಗೆ ನಂಜನಗೂಡು ತಾಲೂಕು, ಹಲ್ಲಹಳ್ಳಿ ರಸ್ತೆಯಲ್ಲಿರುವ ಬಿದರಗೂಡು ಬಳಿ ಕಬಿನಿ ನದಿಯಿಂದ ನೀರೆತ್ತುವ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದ ಅವರು ಘಟಕದಲ್ಲಿ ಕೈಗೊಂಡಿರುವ ಕಾಮಗಾರಿಯ ಪ್ರಗತಿ ಪರಿಶೀಲಿಸಿದರು. ಪಂಪಿಂಗ್ ಸ್ಟೇಷನ್, ವಿತರಣಾ ಜಾಲದ ಘಟಕದಲ್ಲಿ ಕೈಗೊಂಡಿರುವ ಕಾಮಗಾರಿಯ ಪ್ರಗತಿ ಪರಿಶೀಲಿಸಿದರು.

ಕಬಿನಿಯಿಂದ 120 ಎಂಎಲ್‌ಡಿಯಷ್ಟು ನೀರು ಸರಬರಾಜು ಮಾಡಲುದ್ದೇಶಿಸಿದ್ದು, ಕೆಲಸವನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಕೊಳವೆ ಮಾರ್ಗ ಪಂಪಿಂಗ್ ಸ್ಟೇಷನ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದರೂ ಅಂತಿಮ ಹಂತದ ಕೆಲಸ ಮುಗಿಸಿ ನೀರೆತ್ತುವ ಕಾರ್ಯಾಚರಣೆಗೆ ಚಾಲನೆ ನೀಡಬೇಕು ಎಂದು ತಿಳಿಸಿದರು.

ಕೆಆರ್‌ಎಸ್, ಮೇಳಾಪುರಗಳಿಂದ ಮೈಸೂರು ನಗರಕ್ಕೆ ಸರಬರಾಜಾಗುತ್ತಿರುವ ನೀರು ಎಲ್ಲಾ ಬಡಾವಣೆಗಳಿಗೂ ಸಮರ್ಪಕವಾಗಿ ತಲುಪಿಸಲು ಸಾಲದಾಗಿರುವ ಕಾರಣ ಕಬಿನಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಅದರಿಂದ ಮೈಸೂರಿನ ದಕ್ಷಿಣ ಭಾಗದ ವಸತಿ ಬಡಾವಣೆಗಳು ಹಾಗೂ ಹಾದು ಬರುವ ಮಾರ್ಗದ ಗ್ರಾಮಗಳಿಗೂ ಕುಡಿಯುವ ನೀರು ಪೂರೈಸಬಹುದಾಗಿದೆ ಎಂದು ತಿಳಿಸಿದರು.

ಉಪಮೇಯರ್ ಡಾ. ಎಂ.ರೂಪಾ, ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಸೂಪರಿಂಟೆಂಡೆಂಟ್ ಇಂಜಿನಿಯರ್ ಎಸ್. ಮಹೇಶ್, ವಾಣಿ ವಿಲಾಸ ವಾಟರ್ ವರ್ಕ್ಸ್ ಎಕ್ಸ್‌ಕ್ಯೂಟಿವ್ ಇಂಜಿನಿಯರ್ ಸುವರ್ಣ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಗ್ರಾಹಕ ಸಂರಕ್ಷಣಾ ಕಾಯ್ದೆ ಕುರಿತು ಫೋನ್–ಇನ್ ನೇರ ಪ್ರಸಾರ ಕಾರ್ಯಕ್ರಮ

ಮೈಸೂರು, ಮೇ 29– ಕರ್ನಾಟಕ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ವತಿಯಿಂದ "ಗ್ರಾಹಕ ಸಂರಕ್ಷಣಾ ಕಾಯ್ದೆ 2019"ರ ಕುರಿತು ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಜೂ.01 ರಂದು ರಾತ್ರಿ 8 ರಿಂದ 8.30 ಗಂಟೆಯವರೆಗೆ ಆಕಾಶವಾಣಿಯಲ್ಲಿ ಫೋನ್–ಇನ್ ನೇರ ಪ್ರಸಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ಯಾವುದೇ ಪ್ರಶ್ನೆಗಳಿದ್ದಲ್ಲಿ ದೂ.ಸಂ.080–22370477/22370488/22370499ಕ್ಕೆ ಕರೆ ಮಾಡಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿರುತ್ತದೆ. ಹಾಗೆಯೇ ಗ್ರಾಹಕರು ತಮ್ಮ ಪ್ರಶ್ನೆಗಳನ್ನು ಇ–ಮೇಲ್ consumergrievances.queries@gmail.com ಮೂಲಕ ಮೇ 31 ರೊಳಗೆ ಕಳುಹಿಸಬಹುದು.

ಪದ್ಮ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 29– 2024ನೇ ಸಾಲಿನ ಪದ್ಮ ಪ್ರಶಸ್ತಿಗಳಾದ ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳನ್ನು ಪ್ರಕಟಿಸಲಾಗುತ್ತಿದ್ದು, ಆನ್‌ಲೈನ್ ಮೂಲಕ ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ https://awards.gov.in ನಲ್ಲಿ ಮೇ 1 ರಿಂದ ನಾಮನಿರ್ದೇಶನಗಳು, ಶಿಫಾರಸುಗಳನ್ನು ಸಲ್ಲಿಸಲು ಆರಂಭವಾಗಿದ್ದು ಸೆಪ್ಟೆಂಬರ್ 15 ಕೊನೆಯ ದಿನಾಂಕವಾಗಿರುತ್ತದೆ. ಆನ್‌ಲೈನ್ ಮೂಲಕ ಸ್ವೀಕರಿಸಿದ ನಾಮನಿರ್ದೇಶನಗಳು, ಶಿಫಾರಸುಗಳನ್ನು ಮಾತ್ರ ಪರಿಗಣಿಸಲಾಗುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೋರಾಟನಿರತ ಮಹಿಳಾ ಕುಸ್ತಿಪಟುಗಳ ಬಂಧಿಸಿದ ಕ್ರಮ ಖಂಡಿಸಿ

ಮೈಸೂರಲ್ಲಿ ಸಿಐಟಿಯು ಪ್ರತಿಭಟನೆ



ಮೈಸೂರು,ಮೇ 29(ಪಿಎಂ)– ಮಹಿಳಾ ಕುಸ್ತಿ ಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಹಾಗೂ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಬಂಧನಕ್ಕೆ ಒತ್ತಾಯಿಸಿ ಹಾಗೂ ದೆಹಲಿಯ ನೂತನ ಸಂಸತ್ ಭವನದ ಎದುರು ಹೋರಾಟನಿರತ ಮಹಿಳಾ ಕುಸ್ತಿಪಟುಗಳನ್ನು ಬಂಧಿಸಿದ ಕ್ರಮವನ್ನು ಖಂಡಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಎಲ್‌ಐಸಿ ವಿಭಾಗೀಯ ಕಚೇರಿ ಎದುರಿನ ಮಿಲೇನಿಯಂ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ದೇಶಕ್ಕೆ ಕೀರ್ತಿ ಮತ್ತು ಗೌರವ ತಂದ ಹೆಣ್ಣು ಮಕ್ಕಳನ್ನು ಬೀದಿಯಲ್ಲಿ ಎಳೆದಾಡಿ ಅವಮಾನಿಸಲಾಗಿದೆ. ಕೇಂದ್ರ ಬಿಜೆಪಿ ಸರ್ಕಾರದ ಇಂತಹ ಹೇಯ ಕೃತ್ಯ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಖ್ಯಾತ ಮಹಿಳಾ ಕುಸ್ತಿ ಪಟುಗಳಿಗೆ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಸೇರಿದಂತೆ ಇನ್ನಿತರ ಸಿಬ್ಬಂದಿ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂಬುದು ಅತ್ಯಂತ ಆಘಾತಕಾರಿ ಹಾಗೂ ದೇಶವೇ ತಲೆತಗ್ಗಿಸುವಂತಹ ವಿಚಾರ. 'ಬೇಟಿ ಬಚಾವೋ, ಬೇಟಿ ಪಡಾವೋ' ಎಂದು ಪ್ರಚಾರ ಮಾಡುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಆರೋಪಿ ಬ್ರಿಜ್ ಭೂಷಣ್ ಶರಣ್ ಸಿಂಗ್ ರಕ್ಷಣೆಗೆ ನಿಂತಿದ್ದು, ಇದು ನಾಚಿಕೆಗೇಡಿನ ಸಂಗತಿ ಎಂದು ಕಿಡಿಕಾರಿದರು.

ದೂರಿನ ಆಧಾರದಲ್ಲಿ ಕಾನೂನು ಕ್ರಮ ಜರುಗಿಸಿ, ನೊಂದ ಮಹಿಳಾ ಕುಸ್ತಿ ಪಟುಗಳಿಗೆ ರಕ್ಷಣೆ ನೀಡಬೇಕಾದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ತನ್ನ ಪೊಲೀಸ್ ಪಡೆಗಳನ್ನು ಬಳಸಿ, ನ್ಯಾಯಕ್ಕಾಗಿ ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳ ಮೇಲೆಯೇ ದಮನಕಾರಿ ಕ್ರಮಗಳನ್ನು ಅನುಸರಿಸುತ್ತಿದೆ. ಭಾನುವಾರ ನ್ಯಾಯಕ್ಕಾಗಿ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದ ಕುಸ್ತಿಪಟುಗಳ ಮೇಲೆ ಅತ್ಯಂತ ಹೇಯವಾಗಿ ಪೊಲೀಸರ ಮೂಲಕ ಹಲ್ಲೆ ನಡೆಸಲಾಗಿದೆ. ಇತ್ತೀಚೆಗಷ್ಟೇ ದೆಹಲಿ ಪೊಲೀಸರು ಕುಡಿದು ಪ್ರತಿಭಟನಾಕಾರರ ಮೇಲೆ ದೌರ್ಜನ್ಯ ನಡೆಸಿದ್ದರು ಎಂದು ಆರೋಪಿಸಿದರು. ಸಿಐಟಿಯು ರಾಜ್ಯಾಧ್ಯಕ್ಷ ಎಸ್.ವರಲಕ್ಷ್ಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಕಾರ್ಯದರ್ಶಿಗಳಾದ ಸುನಂದಾ, ಮಹಾಂತೇಶ್, ಜಿಲ್ಲಾಧ್ಯಕ್ಷ ಜಿ.ಜಯರಾಂ, ಪ್ರಧಾನ ಕಾರ್ಯದರ್ಶಿ ಎನ್.ಕೆ.ಬಾಲಾಜಿರಾವ್, ಮುಖಂಡರಾದ ಅಣ್ಣಪ್ಪ, ಬಲರಾಂ, ಶ್ರೀಕಾಂತ್, ಬಸವಯ್ಯ, ಮೆಹಬೂಬ್ ಪಾಷಾ, ಜಯಚಂದ್ರ, ಲೋಕೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡದ್ದರು.

ಜೂನ್ ತಿಂಗಳಿಡೀ ಪರಿಸರ ಮಾಸಾಚರಣೆ

ಬಿಎಐ ಮೈಸೂರು ಕೇಂದ್ರದ ವತಿಯಿಂದ ವೈವಿಧ್ಯಮಯ ಕಾರ್ಯಕ್ರಮಗಳು

ಮೈಸೂರು,ಮೇ 29(ಪಿಎಂ)– ವಿಶ್ವ ಪರಿಸರ ದಿನಾಚರಣೆ (ಪ್ರತಿ ವರ್ಷ ಜೂ.5) ಪ್ರಯುಕ್ತ ಪ್ರತಿ ವರ್ಷದಂತೆ ಈ ಬಾರಿಯೂ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಮೈಸೂರು ಕೇಂದ್ರದ ವತಿಯಿಂದ ಜೂನ್ ತಿಂಗಳಿಡೀ ಪರಿಸರ ಮಾಸಾಚರಣೆ ಹಮ್ಮಿಕೊಂಡಿದ್ದು, ಪರಿಸರ ಸಂರಕ್ಷಣೆಗೆ ಪೂರಕವಾದ ವೈವಿಧ್ಯಮಯ ಕಾರ್ಯಕ್ರಮಗಳು ಇಡೀ ತಿಂಗಳು ನಡೆಯಲಿವೆ. ಜೂ.1ರಂದು ಇದರ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬಿಎಐ ಮೈಸೂರು ಕೇಂದ್ರದ ಅಧ್ಯಕ್ಷ ನಾಗರಾಜ್ ವಿ.ಬೈರಿ, ಈ ಬಾರಿ 'ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರಗಳು' ಶೀರ್ಷಿಕೆಯಡಿ ಪರಿಸರ ಮಾಸಾಚರಣೆ ಹಮ್ಮಿಕೊಂಡಿದ್ದೇವೆ ಕಳೆದ 10 ವರ್ಷಗಳಿಂದ ನಮ್ಮ ಸಂಘಟನೆ ಪರಿಸರದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಪರಿಸರ ಸಂರಕ್ಷಣೆಯೊಂದಿಗೆ ಅಭಿವೃದ್ಧಿ ಎಂಬ ಪರಿಕಲ್ಪನೆಯಲ್ಲಿ ನಮ್ಮ ಸಂಘಟನೆ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಪರಿಸರ ಮಾಸಾಚರಣೆ ಸಂಘಟನಾ ಸಮಿತಿ ಅಧ್ಯಕ್ಷ ಎ.ಎಸ್.ಯೋಗಾನರಸಿಂಹ ಮಾತನಾಡಿ, ಜೂ.1ರಂದು ಸಂಜೆ 6.30ಕ್ಕೆ ವಿಶ್ವೇಶ್ವರನಗರದ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್‌ನ (ಎಂಬಿಸಿಟಿ ಸಭಾಂಗಣ)



ಸಭಾಂಗಣದಲ್ಲಿ ಪರಿಸರ ಮಾಸಾಚರಣೆಯ ಉದ್ಘಾಟನಾ ಸಮಾರಂಭ ಹಮ್ಮಿಕೊಂಡಿದ್ದು, ಮುಖ್ಯ ಅತಿಥಿಯಾಗಿ ಕಾರ್ಲ್ ಜೀಸ್ ಕಾಂಸೆರ್ವೇಸನ್ ಪ್ರಶಸ್ತಿ ಮತ್ತು ವೈಟ್ಲಿ ಪ್ರಶಸ್ತಿ ಪುರಸ್ಕೃತ ವನ್ಯಜೀವಿ ಸಂರಕ್ಷಕ ವಿಜ್ಞಾನಿ ಸಂಜಯ್ ಗುಬ್ಬಿ ಭಾಗವಹಿಸಲಿದ್ದಾರೆ. ಮೈಸೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸೈಕ್ಲೋಥಾನ್ ಸ್ಪರ್ಧೆ: ಜೂ.13ರಂದು ಎಂಬಿಸಿಟಿ ಸಭಾಂಗಣದಲ್ಲಿ ಬೆಳಗ್ಗೆ 10ಕ್ಕೆ ಪರಿಸರ ಸ್ನೇಹಿ ಗೃಹಬಳಕೆ ಸಾಮಗ್ರಿಗಳ ಉಪಯೋಗದ ಬಗ್ಗೆ ಗೃಹಿಣಿಯರಿಗೆ ಮಾಹಿತಿ ಕಾರ್ಯಾಗಾರ ಆಯೋಜಿಸಲಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 89700 70101 ಸಂಪರ್ಕಿಸಬಹುದು. ಜೂ.17ರಂದು ಬೆಳಗ್ಗೆ 10ಕ್ಕೆ ಬಿಎಐ, ಕ್ರೆಡಾಯ್ ಮತ್ತು ಐಜಿಬಿಸಿ ಸದಸ್ಯರು ಮತ್ತು ಅವರ ಕುಟುಂಬದವರಿಗೆ ಹಸಿರು ಸಂಪತ್ತು ಅನ್ವೇಷಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜೂ.18ರಂದು ಬೆಳಗ್ಗೆ 7ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ಬಳಿಯಿಂದ ನಾಗರಿಕರಿಗಾಗಿ ಸೈಕ್ಲೋಥಾನ್ ಸ್ಪರ್ಧೆ ಏರ್ಪಡಿಸಲಾಗಿದೆ. ಸ್ಪರ್ಧೆಗೆ ಪ್ರವೇಶ ಉಚಿತವಿದ್ದು, ಹೆಚ್ಚಿನ ಮಾಹಿತಿಗೆ ಮೊ.ಸಂ. 99455 17198 ಸಂಪರ್ಕಿಸಬಹುದು ಎಂದು ಹೇಳಿದರು.

ಜೂ.21ರಂದು ಬೆಳಗ್ಗೆ 7ಕ್ಕೆ ಎಂಬಿಸಿಟಿ ಸಭಾಂಗಣದಲ್ಲಿ ಯೋಗ ದಿನ ಕಾರ್ಯಕ್ರಮ ಹಮ್ಮಿಕೊಳ್ಳ ಲಾಗಿದೆ. ಜೂ.25ರಂದು ಬೆಳಗ್ಗೆ 10ಕ್ಕೆ ಎಂಬಿಸಿಟಿ ಸಭಾಂಗಣದಲ್ಲಿ ಶಾಲಾ ಮಕ್ಕಳಿಗೆ ಪರಿಸರ ಸಂರಕ್ಷಣೆ ಕುರಿತು ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗೆ ಮೊ.ಸಂ.90360 19604 ಸಂಪರ್ಕಿಸಬಹುದು. ಜೂ.29ರಂದು ಮಡಿಕೇರಿಯ ಕೋಟೆಬೆಟ್ಟದಲ್ಲಿ ಚಾರಣ (ಬಿಎಐ ಸದಸ್ಯರು ಮತ್ತು ಕುಟುಂಬದವರಿಗೆ ಮಾತ್ರ) ನಡೆಸಲಾಗುವುದು ಎಂದರು.

'ಮೈಗ್ರೀನ್' ವಸ್ತು ಪ್ರದರ್ಶನ

ಜೂ.5ರಂದು ದಡದಹಳ್ಳಿಯಲ್ಲಿ ಗಿಡ ನೆಡುವ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂತೆಯೇ ಜೂ.11ರಂದು ಬೋಗಾದಿ ಮುಖ್ಯ ರಸ್ತೆ ಬಳಿ ಮತ್ತು ಜೂ.24ರಂದು ಶ್ರೀರಾಂಪುರದಲ್ಲಿ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜೂ.10 ಮತ್ತು 11ರಂದು ಬೆಳಗ್ಗೆ 10ರಿಂದ ರಾತ್ರಿ 8.30ರವರೆಗೆ ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ 'ಮೈಗ್ರೀನ್' ಶೀರ್ಷಿಕೆಯಡಿ ಪರಿಸರ ಸ್ನೇಹಿ ಕಟ್ಟಡ ಸಾಮಗ್ರಿಗಳ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಇಲ್ಲಿಗೆ ಪ್ರವೇಶ ಉಚಿತವಿದೆ ಎಂದರು.

ಸಮಾರೋಪ: 12 ಕಲಾವಿದರನ್ನು ಒಳಗೊಂಡ ತಂಡ ಮೈಸೂರಿನ ಪ್ರಮುಖ ಸ್ಥಳಗಳಲ್ಲಿ ಮೂರು ಪ್ರದರ್ಶನ ನೀಡಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ. ಜೂ.30ರಂದು ಸಂಜೆ 6.30ಕ್ಕೆ ಎಂಬಿಸಿಟಿ ಸಭಾಂಗಣದಲ್ಲಿ ಪರಿಸರ ಮಾಸಾಚರಣೆಯ ಸಮಾರೋಪ ಸಮಾರಂಭ ಆಯೋಜಿಸಲಾಗಿದೆ ಎಂದು ತಿಳಿಸಿದರು. ಬಿಎಐ ಮೈಸೂರು ಕೇಂದ್ರದ ಕಾರ್ಯದರ್ಶಿ ಕೆ.ಎಸ್.ಬಾಲಾಜಿ, ಉಪಾಧ್ಯಕ್ಷ ವಿ.ಶ್ರೀನಾಥ್, ಪರಿಸರ ಮಾಸಾಚರಣೆ ಸಂಘಟನಾ ಸಮಿತಿ ಕಾರ್ಯದರ್ಶಿ ವಿ.ಗುರುದತ್ ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ

ಮಳೆ ಸಂತ್ರಸ್ತರಿಗೆ ಪರಿಹಾರ ನೀಡಲು ತ್ವರಿತ ವರದಿ ನೀಡಿ

ಅಧಿಕಾರಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ಸೂಚನೆ



ಹೆಚ್.ಡಿ.ಕೋಟೆ, ಮೇ 29– ತಾಲೂಕಿನಲ್ಲಿ ಇತ್ತೀಚೆಗೆ ಸುರಿದ ಧಾರಾಕಾರ ಮಳೆಯಿಂದಾಗಿ ಮನೆ, ಫಸಲು ಹಾಗೂ ಜಾನುವಾರುಗಳನ್ನು ಕಳೆದುಕೊಂಡ ಸಂತ್ರಸ್ತರಿಗೆ ಸೂಕ್ತ ಪರಿಹಾರ ನೀಡಲು ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ತ್ವರಿತವಾಗಿ ವರದಿ ನೀಡಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ಸೂಚಿಸಿದರು.

ಪಟ್ಟಣದ ಮಿನಿ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಸೋಮವಾರ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು. ಸಭೆಯಲ್ಲಿ ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ ಮಾತನಾಡಿ, ಇತ್ತೀಚೆಗೆ ಸುರಿದ ಭಾರೀ ಬಿರುಗಾಳಿ ಮಳೆಗೆ ತಾಲೂಕಿನಲ್ಲಿ 28 ಮನೆಗಳು, 150 ಹೆಕ್ಟೇರ್ ಬಾಳೆ ಬೆಳೆ ಹಾನಿಯಾಗಿದೆ. ಅಲ್ಲದೇ 6 ಜಾನುವಾರುಗಳು ಸಾವನ್ನಪ್ಪಿವೆ. ಇದರಿಂದ ಕೋಟ್ಯಾಂತರ ರೂ. ನಷ್ಟ ಸಂಭವಿಸಿದ್ದು, ಅಂತರಸಂತೆ ಹಾಗೂ ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಹೆಚ್ಚು ಮಳೆಯಾಗಿದೆ ಎಂದು ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಅನಿಲ್ ಚಿಕ್ಕಮಾದು, ಅಧಿಕಾರಿಗಳು ಕೂಡಲೇ ಹಾನಿಗೊಳಗಾದ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ನೀಡಬೇಕು. ಇದರಿಂದ ಸಂಕಷ್ಟಕೊಳಗಾದವರಿಗೆ ಪರಿಹಾರ ವಿತರಿಸಲು ಸಹಾಯವಾಗುತ್ತದೆ ಎಂದರು.

ಈ ಹಿಂದಿನ ಆಡಳಿತಾವಧಿಯಲ್ಲಿ ಕೆಲ ಅಧಿಕಾರಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದೀರಾ. ಮತ್ತೆ ಕೆಲವು ಅಧಿಕಾರಿಗಳು ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡಿಲ್ಲ. ಮುಂದಿನ ದಿನಗಳಲ್ಲಿ ಈ ಬಗ್ಗೆ ಎಚ್ಚೆತ್ತುಕೊಳ್ಳದ್ದಿದರೇ ಅಂತಹ ಅಧಿಕಾರಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ ನಮ್ಮ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವುದರಿಂದ ಹೆಚ್ಚು ಅನುದಾನ ತಂದ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಬೇಕಿದೆ. ಹೀಗಾಗಿ ಪ್ರತಿಯೊಂದು ಇಲಾಖೆ ಅಧಿಕಾರಿಗಳು ತಮ್ಮ ಇಲಾಖೆ ವ್ಯಾಪ್ತಿಯಲ್ಲಿ ಆಗಬೇಕಾದ ಕೆಲಸಗಳ ಬಗ್ಗೆ ಮಾಹಿತಿ ನೀಡಬೇಕು ಎಂದರು.

ನಮ್ಮ ಪಕ್ಷ ಚುನಾವಣಾ ಪೂರ್ವದಲ್ಲಿ ನೀಡಿದ್ದ ಭರವಸೆಯಂತೆ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಲಿದೆ. ಅಧಿಕಾರಿಗಳು ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಬೇಕು. ತಪ್ಪಿದರೆ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದರು.

ಕ್ಷೇತ್ರದ ಜನತೆ ನನ್ನ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಹೀಗಾಗಿ ಅವರ ನಿರೀಕ್ಷೆಗೆ ತಕ್ಕಂತೆ ನಾನು ಮತ್ತು ಅಧಿಕಾರಿಗಳು ತಾಲೂಕಿನ ಅಭಿವೃದ್ಧಿಗಾಗಿ ಕೆಲಸ ಮಾಡಬೇಕಾಗಿದೆ. ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಅಧಿಕಾರಿಗಳು ನನ್ನೊಂದಿಗೆ ಕ್ಷೇತ್ರದ ಪ್ರತಿ ಗ್ರಾಮಗಳಿಗೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಆಲಿಸುವ ಮೂಲಕ ಅವರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಕೆಲಸ ಮಾಡಬೇಕು ಎಂದರು.

ಕಬಿನಿ ಜಲಾಶಯ ನಿರ್ಮಾಣ ಸಂದರ್ಭ ಮುಳುಗಡೆಗೊಂಡ ಗ್ರಾಮಗಳ ಪುನರ್ವಸತಿ ಗ್ರಾಮಗಳಿಗೆ ಮೂಲ ಸೌಲಭ್ಯ ಒದಗಿಸಲು ವಿಶೇಷ ಅನುದಾನ ತರಲು ನೀಲನಕ್ಷೆ ತಯಾರಿಸುವಂತೆ ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು. ತಾಲೂಕಿನಲ್ಲಿ ಕಾಡುಪ್ರಾಣಿಗಳ ಹಾವಳಿಯಿಂದ ರೈತರ ಫಸಲು ನಾಶವಾಗುತ್ತಿದೆ. ಸಂಬಂಧಪಟ್ಟ ಅರಣ್ಯಾಧಿಕಾರಿಗಳು ಕಾಡುಪ್ರಾಣಿಗಳ ಹಾವಳಿ ತಪ್ಪಿಸಲು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದರು.

ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಮೂಲ ಸೌಕರ್ಯದ ಕೊರತೆ ಇದೆ. ಈ ಬಗ್ಗೆ ವೈದ್ಯಾಧಿಕಾರಿಗಳು ಹೆಚ್ಚು ಗಮನ ಹರಿಸಿ ಸಂಪೂರ್ಣ ವಿವರ ನೀಡಬೇಕು. ಆಸ್ಪತ್ರೆಗೆ ಬರುವ ರೋಗಿಗಳಿಗೆ ವೈದ್ಯರು ಗುಣಮಟ್ಟದ ಚಿಕಿತ್ಸೆ ನೀಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ತಹಸೀಲ್ದಾರ್ ಪಿ.ಎಸ್.ಮಹೇಶ್, ತಾಪಂ ಇಓ ಜೆರಾಲ್ಡ್ ರಾಜೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಸೋಮಣ್ಣ, ಕೃಷಿ ಅಧಿಕಾರಿ ರಂಗಸ್ವಾಮಿ, ಎಇಇ ಗೋವಿಂದ ನಾಯಕ, ಜನಾರ್ಧನ್, ನಾಗರಾಜು, ರಾಮೇಗೌಡ, ಬಿಇಓ ಉದಯಕುಮಾರ್, ಪುರಸಭೆ ಮುಖ್ಯಾಧಿಕಾರಿ ಸುರೇಶ್, ರೇಷ್ಮೆ ಇಲಾಖೆ ಅಧಿಕಾರಿ ಮಂಜುನಾಥ್, ಸಿಡಿಪಿಓ ಆಶಾ, ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿ ಶಶಿಕಲಾ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ಪರಿಶಿಷ್ಟ ವರ್ಗಗಳ ಇಲಾಖೆ ಅಧಿಕಾರಿ ನಾರಾಯಣಸ್ವಾಮಿ, ಎಇಓ ರಂಗಸ್ವಾಮಿ ಇನ್ನಿತರರಿದ್ದರು.

> ಹ್ಯಾಂಡ್‌ಪೋಸ್ಟ್‌ನಿಂದ ಹೆಬ್ಬಾಳದವರೆಗೆ ಹಾಗೂ ಹ್ಯಾಂಡ್‌ಪೋಸ್ಟ್‌ನಿಂದ ಸರಗೂರುವರೆಗೆ ಜೋಡಿ ರಸ್ತೆ ನಿರ್ಮಾಣ, ತುಂಬಸೋಗೆ ಬಳಿ ಹೊಸ ಸೇತುವೆ ನಿರ್ಮಾಣಕ್ಕೆ ಕ್ರಿಯಾಯೋಜನೆ ತಯಾರಿಸಿ. ಅಧಿಕಾರಿಗಳು ಕ್ಷೇತ್ರದಲ್ಲಿ ಕೈಗಾರಿಕೆ ನಿರ್ಮಾಣಕ್ಕೆ ಜಾಗ ಗುರ್ತಿಸಿ. ಕೋಟೆ, ಸರಗೂರು ತಾಲೂಕಿನ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಿಕೊಡುವ ನಿಟ್ಟಿನಲ್ಲಿ ಉದ್ಯೋಗ ಮೇಳ ಕೈಗೊಳ್ಳಿ.
> –ಅನಿಲ್ ಚಿಕ್ಕಮಾದು, ಶಾಸಕ.



ನರಸೀಪುರ ತಾಲೂಕು ಕುರುಬೂರು ಬಳಿ ಸೋಮವಾರ ಭೀಕರ ಅಪಘಾತ ನಡೆದ ಸ್ಥಳಕ್ಕೆ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಭೇಟಿ ನೀಡಿ, ಅಧಿಕಾರಿಗಳಿಂದ ಮಾಹಿತಿ ಪಡೆದರು.

ಮತದಾರರಿಗೆ ಶಾಸಕ ಹರೀಶ್‌ಗೌಡ ಕೃತಜ್ಞತೆ



ಹುಣಸೂರು, ಮೇ 29– ನಮ್ಮ ತಂದೆ ಆಡಳಿತಾವಧಿಯಲ್ಲಿದ್ದ ಮೌಲ್ಯಯುತ ರಾಜಕಾರಣ ಇತ್ತೀಚಿನ ಅವಧಿಯಲ್ಲಿ ಮರೀಚಿಕೆಯಾಗಿತ್ತು. ಆದರೆ ಈ ಬಾರಿಯ ಚುನಾವಣೆ ಬಳಿಕ ತಾಲೂಕಿನಲ್ಲಿ ಮೌಲ್ಯಯುತ ಹಾಗೂ ನ್ಯಾಯಸಮ್ಮತ ರಾಜಕಾರಣ ಮುಂದುವರೆದಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ದೊಡ್ಡಹೆಜ್ಜೂರು ಆಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಇಲ್ಲಿನ ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಭೇಟಿ ನೀಡಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಅವರು, ಜೀವನದಲ್ಲಿ ಕೃತಜ್ಞತೆ ಎಂಬುದು ಅತೀ ಮುಖ್ಯ. ಚುನಾವಣೆಯಲ್ಲಿ ಜನಬಲ ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ ನನ್ನ ಗೆಲುವಿಗೆ ಕಾರಣರಾದ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನ ಅಧಿಕಾರವಧಿಯಲ್ಲಿ ಜನಪರ, ಅಭಿವೃದ್ಧಿಪರ ಆಡಳಿತ ನೀಡುತ್ತೇನೆ. ತಾಲೂಕು ಮಟ್ಟದ ಅಧಿಕಾರಿಗಳು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಬೇಕು. ಇಲ್ಲದಿದ್ದರೇ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಈ ವೇಳೆ ಜಿಪಂ ಮಾಜಿ ಸದಸ್ಯ ಕಟ್ಟನಾಯಕ, ಗ್ರಾಪಂ ಅಧ್ಯಕ್ಷ ಸುಭಾಷ್, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್, ಗ್ರಾಪಂ ಮಾಜಿ ಅಧ್ಯಕ್ಷ ದಾರಾ ಮಹೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪೇಗೌಡ, ಸೊಸೈಟಿ ಅಧ್ಯಕ್ಷ ಹನುಮ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ ಬೀರಪ್ಪ, ರಾಜೇಗೌಡ, ವೆಂಕಟೇಶ್, ನಟರಾಜ್, ನಾಗೇಶ್, ರವಿ, ಹರೀಶ್, ಕುಮಾರ್ ಮತ್ತಿತರರಿದ್ದರು.

ಮಕ್ಕಳಿಗೆ ಸಿಹಿ ವಿತರಿಸಿ ಶಾಲೆ ಪ್ರಾರಂಭ



ನಂಜನಗೂಡು, ಮೇ 29– ಶಾಲೆ ಪ್ರಾರಂಭ ಹಿನ್ನೆಲೆಯಲ್ಲಿ ನಗರದ ಕನಕದಾಸ ಸಾರ್ವಜನಿಕ ವಿದ್ಯಾಸಂಸ್ಥೆಯಲ್ಲಿ ಆರತಿ ಬೆಳಗಿ, ಗುಲಾಬಿ ಹೂ, ಸಿಹಿ ವಿತರಿಸುವ ಮೂಲಕ ಮಕ್ಕಳನ್ನು ಸಂಭ್ರಮದಿಂದ ಬರಮಾಡಿಕೊಳ್ಳಲಾಯಿತು.

ಇದೇ ವೇಳೆ ಶಾಲಾವರಣವನ್ನು ಆಕರ್ಷಕ ರಂಗೋಲಿ, ತಳಿರು ತೋರಣಗಳಿಂದ ಶೃಂಗರಿಸಲಾಗಿತ್ತು. ಶಿಕ್ಷಕರು ಸಹ ವಿದ್ಯಾರ್ಥಿಗಳನ್ನು ಸಂತೋಷದಿಂದ ಬರಮಾಡಿಕೊಂಡರು. ವಿದ್ಯಾರ್ಥಿಗಳು ಸಹ ಉತ್ಸಾಹದಿಂದ ಶಾಲೆಗೆ ಹಾಜರಾದರು.

ಕನಕದಾಸ ಸಾರ್ವಜನಿಕ ಟ್ರಸ್ಟ್ ಅಧ್ಯಕ್ಷ ಬಿ.ಎಂ.ರಾಮು ಮಾತನಾಡಿ, ಶಿಕ್ಷಕರು ಶಾಲೆಗಳಲ್ಲಿ ಉತ್ತಮ ಕಲಿಕೆ ವಾತಾವರಣ ನಿರ್ಮಾಣ ಮಾಡಬೇಕು ಎಂದ ಅವರು ಶಾಲಾ ಪ್ರಾರಂಭೋತ್ಸವ ಅಂಗವಾಗಿ ಭಯಮುಕ್ತ ವಾತಾವರಣ ಸೃಷ್ಟಿಸಿ ಮಕ್ಕಳನ್ನು ಮೆರವಣಿಗೆ ಮೂಲಕ ಸ್ವಾಗತಿಸಲಾಗಿದೆ. ಶಿಕ್ಷಕರು ಸಹ ವಿದ್ಯಾರ್ಥಿಗಳ ಕಲಿಕೆಗೆ ಸಹಕರಿಸಿ ಅವರಲ್ಲಿರುವ ಪ್ರತಿಭೆ ಪ್ರೋತ್ಸಾಹಿಸಬೇಕು ಎಂದರು.

ಇದೇ ವೇಳೆ ಟ್ರಸ್ಟ್ ಕಾರ್ಯದರ್ಶಿ ಹುಚ್ಚಯ್ಯ, ಸದಸ್ಯರಾದ ನೀಲಿಸಿದ್ದು, ಬಸವೇಗೌಡ, ನಂಜಯ್ಯ, ಕೆ.ಎಂ.ಚಂದ್ರಶೇಖರ್, ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ, ಶಾಲಾ ಮುಖ್ಯೋಪಾಧ್ಯಾಯ ಮಂಜು ಪ್ರಸಾದ್, ಶಿಕ್ಷಕರಾದ ನಯಾಜ್ ಪಾಷ, ಶಿಕ್ಷಕಿಯರು ಇದ್ದರು.

ನಾಳೆ ಹೆಳವರಹುಂಡಿ ಬಳಿ ಕೃತಜ್ಞತಾ ಸಮಾರಂಭ



ತಿ.ನರಸೀಪುರ, ಮೇ 29– ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ನೀಡಿದ ತಿ.ನರಸೀಪುರ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಸಲು ಮೇ.31ರಂದು ಮಧ್ಯಾಹ್ನ 12 ಗಂಟೆಗೆ ಪಟ್ಟಣದ ಹೊರವಲಯ ಹೆಳವರಹುಂಡಿ ಬಳಿ ಕೃತಜ್ಞತಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್ ತಿಳಿಸಿದರು.

ಸೋಮವಾರ ಪಟ್ಟಣದ ಹೆಳವರಹುಂಡಿ ಬಳಿ ಸಮಾರಂಭ ನಡೆಯುವ ಸ್ಥಳ ಪರಿಶೀಲಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರುವ ಸಂದರ್ಭ ಕ್ಷೇತ್ರದ ಜನರು ನಮ್ಮ ಕೈ ಹಿಡಿದು ಮಹದೇವಪ್ಪ ಅವರಿಗೆ ಮತ್ತೆ ಅಧಿಕಾರ ನೀಡಿರುವುದರಿಂದ ಅವರಿಗೆ ಗೌರವ ಸಲ್ಲಿಸಲು ಕೃತಜ್ಞತಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದರು.

ಸಮಾರಂಭದಲ್ಲಿ ನೂತನ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಹಾಗೂ ವರುಣ ಕ್ಷೇತ್ರದ ನಿಕಟಪೂರ್ವ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಹಲವು ಜನಪ್ರತಿನಿಧಿಗಳು ಹಾಗೂ ಕಾಂಗ್ರೆಸ್ ಮುಖಂಡರು ಭಾಗವಹಿಸಲಿದ್ದಾರೆ. ಕ್ಷೇತ್ರದ ಕಾರ್ಯಕರ್ತರು ಸೇರಿದಂತೆ ಮತದಾರ ಪ್ರಭುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ನಮ್ಮ ಕೃತಜ್ಞತೆಗೆ ಭಾಜನರಾಗಬೇಕು ಎಂದು ಮನವಿ ಮಾಡಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಬಸವರಾಜು, ತಾಪಂ ಮಾಜಿ ಸದಸ್ಯ ರಾಮಲಿಂಗಯ್ಯ, ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ಸಾಮಾಜಿಕ ಜಾಲತಾಣದ ಸಂಚಾಲಕ ನವಾಜ್ ಖಾನ್, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಪಿಎಸಿಸಿಎಸ್ ಅಧ್ಯಕ್ಷ ಎಂ.ಪರಶಿವಮೂರ್ತಿ, ಪಪಂ ಮಾಜಿ ಸದಸ್ಯ ರಾಘವೇಂದ್ರ,ಟೌನ್ ಅಧ್ಯಕ್ಷ ಅಂದಾನಿಗೌಡ, ಮುಖಂಡರಾದ ಲಕ್ಷ್ಮೀನಾರಾಯಣ, ಎಂ.ಬಿ.ಸಾಗರ್, ಸಂದೇಶ ಸ್ವಾಮಿನಾಥಗೌಡ, ಜೆ.ಅನೂಪ್ ಗೌಡ, ಸುನೀಲ್, ಮೂಗೂರು ರಘು, ಮೂರ್ತಿ, ಕೋಳಿಮಲ್ಲನಹುಂಡಿ ಕೃಷ್ಣ, ಸಬೀಲ್ ಹಾಗೂ ಇನ್ನಿತರರಿದ್ದರು.

ಭಾರೀ ಮಳೆ: ಕೊಚ್ಚಿ ಹೋದ ತಂಬಾಕು ಸಸಿಗಳು

ಹಿರೀಕ್ಯಾತನಹಳ್ಳಿ, ಮೇ 29– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಹರವೆ–ಚಿಟ್ಟೆ ಕ್ಯಾತನಹಳ್ಳಿ ಗ್ರಾಮದ ಸುತ್ತಮುತ್ತ ಸುರಿದ ಭಾರೀ ಮಳೆಗೆ ತಗ್ಗು ಪ್ರದೇಶದ ಹೊಲ ಗದ್ದೆ ಬಯಲಿನಲ್ಲಿ ಬೆಳೆದಿದ್ದ ತಂಬಾಕು ಗಿಡಗಳು ಕೊಚ್ಚಿ ಹೋಗಿವೆ.



ತಾಲೂಕಿನ ಗಾವಡಗೆರೆ ಹೋಬಳಿಯಾದ್ಯಂತ ದಿನ ಬಿಟ್ಟು ದಿನ ಸುರಿಯುತ್ತಿರುವ ಭಾರೀ ಮಳೆಗೆ ಹೊಲಗದ್ದೆ ಬಯಲಿನಲ್ಲಿ ನಾಟಿ ಮಾಡಿದ್ದ ತಂಬಾಕು ಸಸಿಗಳು ನೀರಿನಲ್ಲಿ ಕೊಚ್ಚಿ ಹೋಗಿದೆ ಎಂದು ಚಿಟ್ಟೆಕ್ಯಾತನಹಳ್ಳಿ ಗ್ರಾಮದ ರೈತ ಮಹೇಂದ್ರ ತಿಳಿಸಿದ್ದಾರೆ.

ತಂಬಾಕು ನಾಟಿ ಮಾಡಿದ ಕೆಲವು ದಿನಗಳ ಬಳಿಕ ಮಳೆ ಬಿದ್ದರೆ ಸಮಸ್ಯೆಯಾಗುವುದಿಲ್ಲ. ಸಸಿ ನಾಟಿ ಮಾಡುತ್ತಿದ್ದಂತೆ ಮಳೆ ಬಂದಲ್ಲಿ ಬೇರು ಬಿಡದ ಕಾರಣ ನೀರಿನಲ್ಲಿ ಕೊಚ್ಚಿ ಹೋಗುತ್ತದೆ. ಸಸಿಗಳಿಗೆ ಒಂದು ಸುತ್ತಿನ ರಸಗೊಬ್ಬರ ನೀಡಿದ್ದು, ರಸಗೊಬ್ಬರ ಸಹ ಕೊಚ್ಚಿ ಹೋಗಿದೆ ಎಂದು ತಂಬಾಕು ಬೆಳೆಗಾರ ಮಹದೇವ್ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಇನ್ನು ಭಾರೀ ಗಾಳಿಗೆ ಚಿಟ್ಟೆಕ್ಯಾತನಹಳ್ಳಿ ಗ್ರಾಮದ ಮಹೇಶ್ ಎಂಬುವರ ಮನೆ ಮೇಲ್ಛಾವಣಿ ಹಾರಿಹೋಗಿದೆ.



ಬನ್ನೂರು ಸಮೀಪದ ಬೀಡನಹಳ್ಳಿ ಗ್ರಾಮದ ಅಂಬರೀಶ್ ಅಭಿಮಾನಿ ಬಳಗ ಹಾಗೂ ಮೈಸೂರು ಜಿಲ್ಲಾ ಅಭಿಮಾನಿ ಸಂಘದ ಸಹಯೋಗದಲ್ಲಿ ನಟ ಡಾ.ಅಂಬರೀಶ್ ಅವರ 71ನೇ ಹುಟ್ಟುಹಬ್ಬದ ಅಂಗವಾಗಿ ಗೋಶಾಲೆಗೆ ಪಶು ಆಹಾರ ನೀಡಲಾಯಿತು. ಈ ವೇಳೆ ಅಂಬರೀಶ್ ಅಭಿಮಾನಿ ಬಳಗದ ಅಧ್ಯಕ್ಷ ನಂದೀಶ್, ಪ್ರಸನ್ನ, ಅಂಬರೀಶ್, ಬಸುರಾಜು, ರವಿ, ವೆಂಕಟೇಶ್, ಜಗದೀಶ್, ನಂಜುಂಡ, ಯಶ್, ಮಾಲಿಂಗ ಸೇರಿದಂತೆ ಇತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಡೇರ್‌ಡೆವಿಲ್ ಮುಸ್ತಫಾ (ಕ): ಬೆ.10.05ಕ್ಕೆ, ಸಂ.6.50ಕ್ಕೆ, ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಮ.1.10ಕ್ಕೆ, ಜೆರ್ಸಿ ನಂಬರ್ 10 (ಕ): ಸಂ.4.05ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.10ಕ್ಕೆ.
ಸ್ಕ್ರೀನ್ 3	ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, ಪಿಚ್ಚೈಕಾರನ್2 (ತ): ಮ.1.20ಕ್ಕೆ, ಸಂ.4.25ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ರಾ.7.30ಕ್ಕೆ, ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ): ಸಂ.9.55ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.9.30ಕ್ಕೆ, ಪಿಚ್ಚೈಕಾರನ್ 2(ತ): ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್


ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ರಾಘವೇಂದ್ರ ಸ್ಟೋರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸೈರನ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಏಲಿಯನ್ಸ್ –2042 (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅಂತ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಸ್ಟಡಿ (ತೆ)	4 ಪ್ರದರ್ಶನಗಳು
ರಾಜ್‌ಕಮಲ್	
ಕೇರಳ ಸ್ಟೋರಿ (ಹಿಂ)	4 ಪ್ರದರ್ಶನಗಳು
ಸಂಗಂ	
ಅಂತ (ಕ)	2 ಪ್ರದರ್ಶನಗಳು
ಲಿಡೋ	
ಪಿಎಸ್–2 (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಸ್ಟಡಿ (ತೆ)	4 ಪ್ರದರ್ಶನಗಳು
ಪ್ರಭಾ	
ಸುಮನ್ (ಕ)	4 ಪ್ರದರ್ಶನಗಳು



ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹಾಗೂ ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್ ಅವರನ್ನು ಮೈಸೂರಿನ ತಮ್ಮ ನಿವಾಸದಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಆತ್ಮೀಯವಾಗಿ ಸನ್ಮಾನಿಸಿದರು.

ಪೊಲೀಸ್ ಠಾಣೆ ಎದುರಿನ ಮನೆಯಲ್ಲೇ ಕಳ್ಳರ ಕೈಚಳಕ

ನಂಜನಗೂಡು, ಮೇ 29– ದುಷ್ಕರ್ಮಿಗಳು ಮನೆ ಬಾಗಿಲು ಮೀಟಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ನಗರದಲ್ಲಿ ಭಾನುವಾರ ರಾತ್ರಿ ನಡೆದಿದೆ.

ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ಎದುರಿನ ಡಾ.ವೈದ್ಯ ಅವರ ಮನೆಯ ಹಿಂಬಾಗಿಲನ್ನು ಮೀಟಿ ಒಳನುಗ್ಗಿದ ಕದೀಮರು 300 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ. ಪಟ್ಟಣ ಠಾಣೆ ಎಸ್‌ಐ ಚಂದ್ರಶೇಖರ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ರಾವಂದೂರಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ



ರಾವಂದೂರು, ಮೇ 29– ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಮತ್ತು ಸದ್ಭತ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಟ್ರಸ್ಟ್ ಅಧ್ಯಕ್ಷ ಮಂಜುನಾಥ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ನಾವು ಸಮತೋಲನ ಆಹಾರ ಸೇವಿಸದೇ, ದುಶ್ಚಟಗಳಿಗೆ ಒಳಗಾಗಿ ಅನಾರೋಗ್ಯಕ್ಕೆ ಒಳಗಾಗುತ್ತಿದ್ದೇವೆ. ಅದರಲ್ಲಿ ಕಣ್ಣಿನ ಸಮಸ್ಯೆಯು ಒಂದಾಗಿದ್ದು, ದೃಷ್ಟಿಯಲ್ಲಿ ಏರುಪೇರು ಕಂಡು ಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು ಎಂದು ಸಲಹೆ ನೀಡಿದ ಅವರು, ನಮ್ಮ ಟ್ರಸ್ಟ್ ವತಿಯಿಂದ ಬಡವರಿಗೆ ಉಚಿತವಾಗಿ ಕಣ್ಣಿನ ತಪಾಸಣೆ ಮಾಡಿಸಿ ಉತ್ತಮ ಚಿಕಿತ್ಸೆ ಕೊಡಿಸಲಾಗುತ್ತಿದೆ ಎಂದರು.

ಇದೇ ವೇಳೆ ರಾವಂದೂರು ಸೇರಿದಂತೆ ಅಕ್ಕಪಕ್ಕದ ನೂರಾರು ಗ್ರಾಮಸ್ಥರು ಕಣ್ಣಿನ ತಪಾಸಣೆಗೆ ಒಳಗಾದರು.

ಡಾ.ದರ್ಶನ್, ಮೋಹನ್, ಉಷಾ, ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯರು ಹಾಗೂ ಕಾರ್ಯದರ್ಶಿ ಆದರ್ಶ್ ಸೇರಿದಂತೆ ಹಾಜರಿದ್ದರು.

ಶರಣರ ಆದರ್ಶಗಳು ಮನೆ–ಮನೆಗೆ ತಲುಪಲಿ

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯ



ನಂಜನಗೂಡು, ಮೇ 29– ಶರಣರ ಆದರ್ಶಗಳು ಮನೆ–ಮನೆಗೆ ತಲುಪುವಂತಾಗಬೇಕು ಎಂದು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಸುತ್ತೂರು ಶ್ರೀ ಕ್ಷೇತ್ರದಲ್ಲಿ 2 ದಿನಗಳ ಕಾಲ ನಡೆದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಪದಾಧಿಕಾರಿಗಳ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ರಾಜ್ಯಾದ್ಯಂತ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ, ಶರಣರ ವಚನಗಳ ತಿರುಳನ್ನು ಜನರಿಗೆ ಮುಟ್ಟಿಸುವ ಸತ್ಕಾರ್ಯ ಮಾಡುತ್ತಿದೆ. ಕಾಲ ಬದಲಾದಂತೆ ಅದಕ್ಕೆ ಅನುಗುಣವಾಗಿ ಪೂರಕವಾದ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಯುವಕರಿಗೆ ಮಾರ್ಗದರ್ಶನ ಮಾಡುವುದು ಅಗತ್ಯವಿದೆ. ಯಾವುದೇ ಕೆಲಸ ಕಾರ್ಯಗಳನ್ನು ಮಾಡಬೇಕಾದರೆ ಶ್ರದ್ಧೆ, ಪ್ರಾಮಾಣಿಕತೆ ಹಾಗೂ ಬದ್ಧತೆ ಇರಬೇಕು. ಒಂದು ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಲೋಪದೋಷಗಳಾಗದಂತೆ ಎಚ್ಚರಿಕೆ ವಹಿಸಬೇಕು. ಯಾವುದೇ ಕಾರ್ಯಕ್ರಮಗಳನ್ನು ನಡೆಸಬೇಕಾದರೆ ಸೂಕ್ಷ್ಮ ವಿಚಾರಗಳನ್ನು ಗಮನಿಸಬೇಕು ಹಾಗೂ ಶಿಸ್ತಿನಿಂದ ನಡೆಯುವಂತೆ ನೋಡಿಕೊಳ್ಳಬೇಕು ಎಂದರು.

ಈ ರೀತಿಯ ಕಾರ್ಯಾಗಾರಗಳಲ್ಲಿ ಪರಸ್ಪರ ವಿಚಾರ ವಿನಿಮಯದಿಂದ ಅನುಭವಗಳನ್ನು ಹಂಚಿಕೊಳ್ಳಬಹುದು. ಪೂಜ್ಯ ರಾಜೇಂದ್ರ ಶ್ರೀಗಳವರ ಆಶಯಗಳು ಧಾರ್ಮಿಕ ದತ್ತಿಯು ಆಯೋಜಿಸುವ ಕಾರ್ಯಕ್ರಮಗಳ ಮುಖಾಂತರ ಈಡೇರುತ್ತಿವೆ. ತಾನು ಏನನ್ನೂ ತಿಳಿದಿಲ್ಲ. ಕಡಿಮೆ ತಿಳಿದುಕೊಂಡಿದ್ದೇನೆ ಎಂದರೆ ಜೀವನವು ಸುಖಮಯವಾಗಿರುತ್ತದೆ. ವಿಚಾರಗಳನ್ನು ಹೆಚ್ಚು ಹೆಚ್ಚು ತಿಳಿದುಕೊಳ್ಳುವ ಮನಸ್ಸು ಪ್ರತಿಯೊಬ್ಬರಿಗೂ ಇರಬೇಕು ಎಂದು ನುಡಿದರು.

ಪರಿಷತ್ ಅಧ್ಯಕ್ಷ ಅಪ್ಪಾರಾವ್ ಅಕ್ಕೋಣೆ ಮಾತನಾಡಿ, ರಾಜ್ಯಾದ್ಯಂತ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಸಕ್ರಿಯ ಚಟುವಟಿಕೆಗಳಿಂದ ಕೂಡಿರಬೇಕು. ಪದಾಧಿಕಾರಿಗಳು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು. ನಿರಂತರವಾಗಿ ಇಂಥ ಕಾರ್ಯಾಗಾರಗಳನ್ನು ಏರ್ಪಡಿಸುವ ಮೂಲಕ ಸುತ್ತೂರು ಮಠವು ಅನನ್ಯ ಸೇವೆ ಒದಗಿಸುತ್ತಿದೆ. ಈ ಕಾರ್ಯಾಗಾರವು ಯಶಸ್ವಿಯಾಗಿ ಜರುಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಪ್ರೊ.ಸಿ.ನಾಗಣ್ಣ, ಶ್ರೀಜಂಬುನಾಥ ಕಂಚ್ಯಾಣಿ, ಪ್ರೊ.ಮೊರಬದ ಮಲ್ಲಿಕಾರ್ಜುನ, ಮ.ಗು.ಸದಾನಂದಯ್ಯ, ಸುಶೀಲಾ ಸೋಮಶೇಖರ್, ಅಪ್ಪಾರಾವ್ ಅಕ್ಕೋಣೆ, ಡಾ.ಸಿ.ಸೋಮಶೇಖರ್ ಪರಿಣಾಮಕಾರಿಯಾಗಿ ವಿಷಯ ಮಂಡಿಸುವ ಮೂಲಕ ಕಾರ್ಯಾಗಾರವನ್ನು ಯಶಸ್ವಿಗೊಳಿಸಿದರು. ಉಷಾ ಹಿರೇಮಠ್ ಹಾಗೂ ರವೀಶ್ ಕ್ಯಾತನಬೀಡು ಅವರು ಅನಿಸಿಕೆಗಳನ್ನು ಹಂಚಿಕೊಂಡರು.

ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ನಾಗರಾಜಮೂರ್ತಿ ಸ್ವಾಗತ ಕೋರಿದರೆ, ಬೆಳಗಾವಿ ಕದಳಿ ಮಹಿಳಾ ವೇದಿಕೆ ಜಿಲ್ಲಾಧ್ಯಕ್ಷೆ ಪ್ರೇಮಕ್ಕ ಅಂಗಡಿ ವಂದಿಸಿದರು. ಕಾತ್ಯಾಯಿನಿ ಕೋಲಾರ್ ಪ್ರಾರ್ಥನೆ ಸಲ್ಲಿಸಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಶ್ರೀಶೈಲ ಪಟ್ಟಣಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ನನ್ನ ಮೇಲಿನ ಬೇಸರದಿಂದ ಬಿಜೆಪಿ ಸೋಲಿಸಬೇಡಿ...

• ಚಾಮರಾಜ ಕ್ಷೇತ್ರದ ಪರಾಜಿತ ಬಿಜೆಪಿ ಅಭ್ಯರ್ಥಿ ನಾಗೇಂದ್ರ ಮನವಿ • ಬಿಜೆಪಿ ಕುಟುಂಬಕ್ಕೆ ಕೃತಜ್ಞತೆ; ಆತ್ಮಾವಲೋಕನ ಸಭೆಯಲ್ಲಿ ಅತೀವ ಬೇಸರ • ಸಾಕಷ್ಟು ಅಭಿವೃದ್ಧಿ ಮಾಡಿದ್ದರೂ ಸೋತಿದ್ದಕ್ಕೆ ತೀವ್ರ ವಿಷಾದ; ಮತ್ತೆ ಪಕ್ಷ ಸಂಘಟನೆ ಶಪಥ



ಒಬ್ಬಂಟಿ ಎಂಬ ಭಾವ ಮೂಡಿದೆ...

"ಚಾಮರಾಜ ಕ್ಷೇತ್ರದಲ್ಲಿ ನಾಗೇಂದ್ರ ಅವರು ಗೆದ್ದಿದ್ದರೆ ಚೆನ್ನಾಗಿರುತ್ತಿತ್ತು. ವಿಧಾನಸಭೆಯಲ್ಲಿ ನನಗೆ ಒಬ್ಬಂಟಿಯಾದನೆನೋ ಎಂಬ ಭಾವ ಮೂಡುತ್ತಿದೆ. ಕ್ಷೇತ್ರದಲ್ಲಿ ನಾಗೇಂದ್ರ ಇದ್ದರಷ್ಟೇ ಸಂಘಟನೆ ಸಾಧ್ಯವಾಗುವುದು. ಆದ್ದರಿಂದ ಕ್ಷೇತ್ರದ ಕಾರ್ಯಕರ್ತರು ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಸಂಘಟಿತರಾಗಬೇಕು. ಒಟ್ಟಾಗಿ ಕೆಲಸ ಮಾಡಬೇಕು. ಇದಕ್ಕೆ ಪೂರಕವಾಗಿ ಯಾವ ಸಹಕಾರ ಬೇಕಾದರೂ ನನ್ನನ್ನು ಭೇಟಿ ಮಾಡಬಹುದು.

–ಟಿ.ಎಸ್.ಶ್ರೀವತ್ಸ, ಶಾಸಕ

ಶ್ರೀವತ್ಸ ಗೆದ್ದದ್ದು ಬಹಳ ಖುಷಿ ನೀಡಿದೆ...

"ನಾನು ಚಾಮರಾಜ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾದರೂ ಕೆ.ಆರ್.ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಶ್ರೀವತ್ಸ ಅವರಿಗೆ ಮತ ನೀಡಿದ್ದೆ. ಇಂದು ಅವರು ಗೆದ್ದು ಬಂದಿದ್ದಾರೆ. ಅವರ ಗೆಲುವು ಖುಷಿ ನೀಡಿದೆ.

– ಎಲ್.ನಾಗೇಂದ್ರ, ಮಾಜಿ ಶಾಸಕ

ಮೈಸೂರು, ಮೇ 29(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಸೋತಿಲ್ಲ. ಅಭ್ಯರ್ಥಿಗೆ ಮಾತ್ರ ಸೋಲಾಗಿದೆ. ನನ್ನ ಮೇಲೆ ಬೇಸರವಿದ್ದರೆ ದಯವಿಟ್ಟು ಕ್ಷಮಿಸಿ. ಆದರೆ ತಾಯಿಯಂತೆ ಕಾಣುವ ಪಕ್ಷವನ್ನು ಎಂದಿಗೂ ಸೋಲಿಸಬೇಡಿ ಎಂದು ಮಾಜಿ ಶಾಸಕ ಎಲ್.ನಾಗೇಂದ್ರ ಮನವಿ ಮಾಡಿದರು.

ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಸೋಮವಾರ ಆಯೋಜಿಸಿದ್ದ ಚಾಮರಾಜ ಕ್ಷೇತ್ರದ ಸಮಸ್ತ ಬಿಜೆಪಿ ಕುಟುಂಬಕ್ಕೆ ಕೃತಜ್ಞತೆ ಹಾಗೂ ಆತ್ಮಾವಲೋಕನ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಚುನಾವಣೆಗಿಂತಲೂ ಹೆಚ್ಚಿನ ಮತಗಳನ್ನು ಕ್ಷೇತ್ರದ ಜನತೆ ನೀಡಿದ್ದಾರೆ. ಇದಕ್ಕಾಗಿ ಕಾರ್ಯಕರ್ತರು ಹಗಲಿರುಳು ಕೆಲಸ ಮಾಡಿದ್ದಾರೆ. ಆದರೆ ನನ್ನ ಮೇಲೆ ಬೇಸರವಿದ್ದ ಕೆಲವರು ನನ್ನ ವಿರುದ್ಧವಾಗಿ ಕೆಲಸ ಮಾಡಿದ್ದರ ಪರಿಣಾಮ ಕೆಲವೇ ಮತಗಳ ಅಂತರದಲ್ಲಿ ಸೋಲಾಗಿದೆ. ಈ ಸೋಲಿನ ಹೊಣೆಯನ್ನು ನಾನೇ ಹೊರುತ್ತೇನೆ ಎಂದರು.

ದೇಶದಲ್ಲಿ ಹಿಂದುತ್ವವನ್ನು ಕಾಪಾಡುವುದಕ್ಕಾಗಿಯೇ ಬಿಜೆಪಿ ಇರುವುದು. ಇದಕ್ಕಾಗಿ ಬಿಜೆಪಿ ಕಾರ್ಯಕರ್ತರು ನಿರಂತರವಾಗಿ ದುಡಿಯುತ್ತಿದ್ದಾರೆ. ಆದರೆ ನನ್ನ ಮೇಲೆ ಬೇಸರವಿದ್ದ ಕೆಲವರು ವಿರುದ್ಧವಾಗಿ ಕೆಲಸ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಲ್ಲಿ ಕ್ಷಮೆ ಕೇಳುತ್ತೇನೆ. ನನಗೆ ಸೋಲಾಗಿರುವ ಬೇಸರಕ್ಕಿಂತ ಪಕ್ಷಕ್ಕೆ ಸೋಲಾಗಿರುವುದು ಹೆಚ್ಚು ನೋವು ತಂದಿದೆ. ಪಕ್ಷ ಒಡೆಯುವ ಕೆಲಸ ಮಾಡಬೇಡಿ ಎಂದು ಮನವಿ ಮಾಡಿದರಲ್ಲದೆ ಕ್ಷೇತ್ರದಲ್ಲಿ ಹಿಂದೆಂದೂ ಕಾಣದಂತಹ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇ ತಪ್ಪಾ... ನನಗೆ ಮತ ನೀಡಿದವರು, ನನ್ನ ಪರವಾಗಿ ದುಡಿದವರು ಇಂದು ಕಣ್ಣೀರು ಹಾಕುತ್ತಿದ್ದಾರೆ ಎಂದು ಭಾವುಕರಾದರು.

ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಿಪೇಯಿಯವರು ಬಿಜೆಪಿ ಕಾರ್ಯಕರ್ತರು ಸೋಲಿಗೆ ಹೆದರಿ ಬೆನ್ನು ತೋರಿಸುವವರಲ್ಲ ಎಂದು ಹೇಳಿದ್ದಾರೆ. ಅದರಂತೆ ನಾನು ಕೂಡ ಸೋತೆನೆಂದು ಮರೆಯಾಗುವುದಿಲ್ಲ. ನಾಳೆಯಿಂದಲೇ ಕಾರ್ಯಕ್ರಮಗಳನ್ನು ರೂಪಿಸಿ, ಕ್ಷೇತ್ರದ ಜನರ, ಕಾರ್ಯಕರ್ತರ ಕಷ್ಟ–ಸುಖಗಳಲ್ಲಿ ಭಾಗಿಯಾಗುತ್ತೇನೆ. ಸದಾ ನಿಮ್ಮೊಂದಿಗೆ ಇರುತ್ತೇನೆ. ಮತದಾರರಲ್ಲಿ ಧೈರ್ಯ ತುಂಬುವ ಕೆಲಸ ಮಾಡುತ್ತೇನೆ. ಮಂತ್ರಿ ಮಾಡುತ್ತೇವೆಂದು ಕರೆದರೂ ಬಿಜೆಪಿ ಬಿಟ್ಟು ಬೇರ್ಯಾವ ಪಕ್ಷಕ್ಕೂ ಹೋಗುವುದಿಲ್ಲ ಎಂದು ವಾಗ್ದಾನ ನೀಡಿದರು.

ಧೈರ್ಯ ಕಳೆದುಕೊಳ್ಳಬೇಡಿ: ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಸೋಲಾಗಿದೆ ಎಂದು ಧೈರ್ಯ ಕಳೆದುಕೊಳ್ಳಬೇಡಿ. ಮುಂದಿನ ದಿನಗಳಲ್ಲಿ ಮೈಸೂರು ಪಾಲಿಕೆ ಚುನಾವಣೆ ಇದೆ. ಲೋಕಸಭೆ ಚುನಾವಣೆ ಇದೆ. ಕ್ಷೇತ್ರದಿಂದ ಅತ್ಯಧಿಕ ಮತಗಳನ್ನು ಬಿಜೆಪಿ ಅಭ್ಯರ್ಥಿಗೆ ಕೊಡಿಸುವ ಮೂಲಕ ದೇಶದ ಹಿರಿಮೆ–ಗರಿಮೆಯನ್ನು ಪ್ರಪಂಚಕ್ಕೆ ಸಾರುತ್ತಿರುವ ಪ್ರಧಾನಿ ಮೋದಿಯವರ ಕೈ ಬಲಪಡಿಸಬೇಕು. ಹಾಗೆಯೇ ಪಾಲಿಕೆ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲುವ ಮೂಲಕ ಚಾಮರಾಜ ಕ್ಷೇತ್ರ ಬಿಜೆಪಿ ಭದ್ರಕೋಟೆ ಎಂಬುದನ್ನು ಸಾಬೀತು ಪಡಿಸಬೇಕು. ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಎಂದು ಕರೆ ನೀಡಿದರು.

ಪೊರಕೆ ಏಟು: ಗ್ಯಾರಂಟಿ ಕಾರ್ಡ್‌ಗಳನ್ನು ಹಂಚಿ ಮತದಾರರನ್ನು ವಂಚಿಸಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಬಣ್ಣ ಬಯಲಾಗುತ್ತಿದೆ. ಅಧಿಕಾರಕ್ಕೆ ಬಂದ 24 ಗಂಟೆಯೊಳಗೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುತ್ತೇವೆ ಎಂದವರು ಈಗ ಏನೇನೋ ಮಾತನಾಡುತ್ತಿದ್ದಾರೆ. ಇನ್ನೂ ಒಂದಷ್ಟು ದಿನ ಕಳೆದರೆ ಕರೆಂಟ್ ಬಿಲ್, ಬಸ್ ಟಿಕೆಟ್ ಕೇಳಲು ಹೋದವರಿಗೆ ಜನರು ಪೊರಕೆ ಏಟು ನೀಡುತ್ತಾರೆ. ಇಂತಹ ಸಂದರ್ಭದಲ್ಲಿ ನಾವುಗಳು ಜನರ ಪರವಾಗಿ ಹೋರಾಟಕ್ಕೆ ನಿಲ್ಲಬೇಕು. ಭಾಗ್ಯಗಳನ್ನು ಪೂರೈಸಲು ಸರ್ಕಸ್ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದಿಂದ ಯಾವ ಅಭಿವೃದ್ಧಿಯೂ ಸಾಧ್ಯವಿಲ್ಲ. ಅಭಿವೃದ್ಧಿ ಎಂಬುದು ಬಿಜೆಪಿ ಸರ್ಕಾರದ ಅವಧಿಗೆ ಕೊನೆಯಾಗಲಿದೆ ಎಂದು ವ್ಯಂಗ್ಯವಾಡಿದರಲ್ಲದೆ, ಮನೆಮನೆಗೆ ಕಾಂಗ್ರೆಸ್ ನೀಡಿದ ಗ್ಯಾರಂಟಿ ಯೋಜನೆಗಳ ಹಣ ಬಂತಾ ಎಂದು ಬಿಜೆಪಿ ಕಾರ್ಯಕರ್ತರು ಕೇಳುವಂತೆ ನಾಗೇಂದ್ರ ಕರೆ ನೀಡಿದರು.

ಅಭಿವೃದ್ಧಿಯಲ್ಲಿ ಮುಂದೆ: ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಚಾಮರಾಜ ಕ್ಷೇತ್ರದ ಅಭಿವೃದ್ಧಿಗೆ ನಾಗೇಂದ್ರ ಅವರ ಕೊಡುಗೆ ಅಪಾರ. ಅಭಿವೃದ್ಧಿ ವಿಚಾರದಲ್ಲಿ ಸದಾ ಮುಂದಿದ್ದರು. ವಿಧಾನಸೌಧದಲ್ಲಿ ಅವರ ಬಗ್ಗೆ ಬಿಜೆಪಿ ಹಿರಿಯ ನಾಯಕರು ಮಾತನಾಡುತ್ತಾರೆ ಎಂದರೆ ನಾಗೇಂದ್ರ ಅವರ ಕಾರ್ಯವೈಖರಿ ಹೇಗಿತ್ತು ಎಂಬುದು ತಿಳಿಯುತ್ತದೆ. ಮುಖ್ಯಮಂತ್ರಿಗಳಾಗಿದ್ದ ಬಸವರಾಜ ಬೊಮ್ಮಾಯಿಯವರೇ ನಾಗೇಂದ್ರ ನನ್ನ ಕಚೇರಿಗೆ ಬಂದನೆಂದರೆ ಅದು ಅನುದಾನ ಕೇಳುವುದಕ್ಕಾಗಿಯೇ ಎಂದು ಹೇಳಿದ್ದರು. ಪಾಲಿಕೆ ಅಧಿಕಾರಿಗಳು ಕೂಡ ಚಾಮರಾಜ ಕ್ಷೇತ್ರದಲ್ಲಿ ಒಂದೇ ಒಂದು ರಸ್ತೆಯೂ ಡಾಂಬರೀಕರಣವಾಗದೆ ಉಳಿದಿಲ್ಲ ಎನ್ನುತ್ತಾರೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ಅತಿಯಾದ ಆತ್ಮವಿಶ್ವಾಸ: ಇಷ್ಟೆಲ್ಲಾ ಅಭಿವೃದ್ಧಿ ಮಾಡಿದರೂ ಸೋತಿದ್ದೇವೆ ಎಂಬುದಕ್ಕೆ ನಮ್ಮ ಕಾರ್ಯಕರ್ತರಲ್ಲಿದ್ದ ಅತಿಯಾದ ಆತ್ಮವಿಶ್ವಾಸವೇ ಕಾರಣವಾಯಿತಾ ಎಂಬುದನ್ನು ಪರಿಶೀಲನೆ ನಡೆಸಬೇಕಾಗಿದೆ. ಎಲ್ಲಿಯೇ ಹೋದರೂ ನಾಗೇಂದ್ರ ಗೆಲ್ಲಬೇಕಿತ್ತು ಎಂದು ಮಾತನಾಡಿಕೊಳ್ಳುತ್ತಾರೆ. ಇದೆಲ್ಲವನ್ನು ಗಮನಿಸಿದರೆ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಬೇಕು. ಆದರೆ ನಮ್ಮ ಕ್ಷೇತ್ರದ ಅಭ್ಯರ್ಥಿ ಗೆಲ್ಲಬಾರದು ಎಂಬ ಅಭಿಪ್ರಾಯ ಕಾರ್ಯಕರ್ತರ ಮನಸ್ಸಿನಲ್ಲಿದೆ ಎಂಬ ಬಿಜೆಪಿಯ ಹಿರಿಯರೊಬ್ಬರು ಹೇಳಿದ್ದ ಮಾತು ನೆನಪಾಗುತ್ತಿದೆ. ಅಲ್ಲದೆ ಅದು ನಿಜವಾಯಿತೇನೋ ಅನ್ನಿಸುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ ಶ್ರೀವತ್ಸ, ಪಕ್ಷದ ವಿರುದ್ಧವಾಗಿ ಕೆಲಸ ಮಾಡಿದ್ದಾರೆ ಎಂದು ಯಾರ ಮೇಲಾದರೂ ದೂರು ನೀಡಬೇಕು ಎಂದು ಕೊಂಡಿದ್ದರೆ ನನ್ನ ಕಚೇರಿಗೆ ಬಂದು ಬರೆದುಕೊಡಿ. ಮುಂದಿನ ದಿನಗಳಲ್ಲಿ ಅವರನ್ನು ಪಕ್ಷದಿಂದ ದೂರವಿಡುವ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ಗಿರಿಧರ್, ಸೋಮಸುಂದರ್, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶಿವಕುಮಾರ್, ಮುಖಂಡ ಜಯಪ್ರಕಾಶ್(ಜೆಪಿ), ಪಾಲಿಕೆ ಸದಸ್ಯರಾದ ಸಿ.ವೇದಾವತಿ, ಪ್ರಮೀಳಾ ಭರತ್, ರವೀಂದ್ರ, ಸುಬ್ಬಯ್ಯ, ರಂಗಸ್ವಾಮಿ, ಚಿಕ್ಕವೆಂಕಟ್, ಸತೀಶ್, ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಸೋಮಶೇಖರ್‌ರಾಜು, ಮಹಿಳಾ ಮೋರ್ಚಾ ನಗರಾಧ್ಯಕ್ಷೆ ಹೇಮಾ ನಂದೀಶ್, ಯುವ ಮೋರ್ಚಾ ನಗರಾಧ್ಯಕ್ಷ ಎಂ.ಜೆ. ಕಿರಣ್‌ಗೌಡ, ದೇವರಾಜು, ಲೋಕೇಶ್, ದಿನೇಶ್‌ಗೌಡ ಮತ್ತಿತರರಿದ್ದರು.

ಟಿಟಿಡಿಯ ಸಪ್ತಗಿರಿ ಮಾಸಿಕದ ಸಂಪಾದಕೀಯ ಸಲಹಾ ಮಂಡಳಿಗೆ ಡಾ.ಗುರುರಾಜ ಪೋಶೆಟ್ಟಿಹಳ್ಳಿ ಆಯ್ಕೆ



ಮೈಸೂರು: ಆಂಧ್ರ ಪ್ರದೇಶದ ತಿರುಮಲ ತಿರುಪತಿ ದೇವಸ್ಥಾನದ ವತಿಯಿಂದ ಪ್ರಕಟಗೊಳ್ಳುವ ಸಚಿತ್ರ ಆಧ್ಯಾತ್ಮಿಕ ಮಾಸಪತ್ರಿಕೆ 'ಸಪ್ತಗಿರಿ'. ಕಳೆದ 5 ದಶಕಗಳಿಂದ 5 ಭಾಷೆಗಳಲ್ಲಿ ಜಿಜ್ಞಾಸು ಓದುಗ ವೃಂದಕ್ಕೆ ಭಕ್ತಿ ಸಾಹಿತ್ಯ ರಸದೌತಣವನ್ನು ನೀಡುತ್ತಾ ಬಂದಿದೆ. ಕನ್ನಡ ಭಾಷಾ ವಿಭಾಗದ ಸಂಪಾದಕೀಯ ಸಲಹಾ ಮಂಡಳಿ ಸದಸ್ಯರಾಗಿ 2 ವರ್ಷಗಳ (2023–2025) ಅವಧಿಗೆ ಮಾಧ್ಯಮ ಸಮಾಲೋಚಕ, ಸಂಸ್ಕೃತಿ ಚಿಂತಕ, ಬೆಂಗಳೂರಿನ ಪ್ರಣವ ಮೀಡಿಯಾ ಹೌಸ್ ಪ್ರಕಾಶನದ ಡಾ.ಗುರುರಾಜ ಪೋಶೆಟ್ಟಿಹಳ್ಳಿ ನೇಮಕಗೊಂಡಿದ್ದಾರೆ.

ಅಸ್ಸಾಂನಲ್ಲಿ ಭೀಕರ ರಸ್ತೆ ಅಪಘಾತ: 7 ವಿದ್ಯಾರ್ಥಿಗಳು ದುರ್ಮರಣ

ಗುವಾಹಟಿ: ಅಸ್ಸಾಂನ ಗುವಾಹಟಿ ಜಲುಕ್ಬರಿ ಪ್ರದೇಶದಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, 7 ವಿದ್ಯಾರ್ಥಿಗಳು ಸಾವನ್ನಪ್ಪಿ, ಹಲವರಿಗೆ ಗಾಯಗಳಾಗಿರುವ ಘಟನೆ ಭಾನುವಾರ ತಡರಾತ್ರಿ ಸಂಭವಿಸಿದೆ. ಅಜಾರಾ ಪ್ರದೇಶದಿಂದ ವೇಗವಾಗಿ ಬರುತ್ತಿದ್ದ ಕಾರು ಡಿವೈಡರ್ ದಾಟಿ ಎದುರಿನ ಲೇನ್‌ನಲ್ಲಿ ಸಾಗುತ್ತಿದ್ದ ಸರಕು ಸಾಗಣೆ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಕಾರಿನಲ್ಲಿ ಪ್ರಯಾಣಿಸುತ್ತಿದ್ದ 7 ಮಂದಿ ಸಾವನ್ನಪ್ಪಿದ್ದಾರೆ. ಸರಕು ಸಾಗಣೆ ಟ್ರಕ್ ನಲ್ಲಿದ್ದ 6 ಮಂದಿ ಗಾಯಗೊಂಡಿದ್ದಾರೆ. ಮೃತರು ಅಸ್ಸಾಂ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿರುವ ಪೊಲೀಸರು ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಾಂಗ್ರೆಸ್ ಗ್ಯಾರಂಟಿ ಬಗ್ಗೆ ಮಾತನಾಡಲು ಬಿಜೆಪಿಯವರಿಗೆ ನೈತಿಕತೆ ಇಲ್ಲ: ಲಕ್ಷ್ಮಣ್

15 ದಿನದಲ್ಲೇ ಟೇಕಾಫ್ ಆಗಿರುವ ಸಿದ್ದರಾಮಯ್ಯ ಸರ್ಕಾರ ಅಭಿವೃದ್ಧಿಗೆ ಬದ್ಧವಾಗಿದೆ



ಮೈಸೂರು,ಮೇ 29(ಎಂಟಿವೈ)– ಕಾಂಗ್ರೆಸ್ ನೀಡಿದ್ದ ಐದು ಗ್ಯಾರಂಟಿಗಳ ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿ ನಾಯಕರಿಗೆ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರ ಗ್ಯಾರಂಟಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಬದ್ಧವಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ತಿಳಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂದಿನ ಸಚಿವ ಸಂಪುಟ ಸಭೆಯ ಬಳಿಕ 5 ಗ್ಯಾರಂಟಿ ಕಾರ್ಯಕ್ರಮಗಳನ್ನು ಜಾರಿಗೆಗೊಳಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಈ ಹಿಂದೆಯೂ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯನ್ನೆಲ್ಲಾ ಈಡೇರಿಸಿ, ಹೆಚ್ಚುವರಿಯಾಗಿ ಕೆಲವು ಕಾರ್ಯಕ್ರಮವನ್ನು ಜಾರಿಗೊಳಿಸಿದ್ದರು. ಅದೇ ಮಾದರಿಯಲ್ಲಿ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆಯುವ ಮೂಲಕ ಜನರ ವಿಶ್ವಾಸವನ್ನು ಉಳಿಸಿ ಕೊಳ್ಳುತ್ತದೆ. ಕೇವಲ 15 ದಿನಗಳಲ್ಲಿ ನಮ್ಮ ಸರ್ಕಾರ ಟೇಕ್ ಆಫ್ ಆಗಿದೆ. 34 ಮಂತ್ರಿಗಳ ಸರ್ಕಾರ ರಚನೆಯಾಗಿದೆ. ಗ್ಯಾರಂಟಿ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಯಾವುದೇ ಅನುಮಾನಗಳಿಲ್ಲ ಎಂದರು.

ಗ್ಯಾರಂಟಿ ಕಾರ್ಯಕ್ರಮಗಳ ಜಾರಿಗೆ ತರಲು ಗಡುವು ನೀಡಲು ಸಂಸದ ಪ್ರತಾಪಸಿಂಹ ಯಾರು? ಮೊದಲು ಪ್ರಧಾನಿ ಮೋದಿ ಹೇಳಿದ ಮಾತನ್ನು ಉಳಿಸಿಕೊಳ್ಳಲು ಪ್ರತಾಪ ಸಿಂಹ ಪ್ರಯತ್ನಿಸಬೇಕು. 2014ರಲ್ಲಿ ನರೇಂದ್ರ ಮೋದಿ ಅವರು ಪ್ರತಿಯೊಬ್ಬರ ಖಾತೆಗೆ 15 ಲಕ್ಷ ರೂ. ಜಮೆ, ವಾರ್ಷಿಕ 2 ಕೋಟಿ ಉದ್ಯೋಗ, ಪ್ರತಿಯೊಬ್ಬರಿಗೂ ಕುಡಿಯುವ ನೀರಿನ ಯೋಜನೆ, ಮೈಸೂರಲ್ಲಿ ರೈಲ್ವೆ ಟರ್ಮಿನಲ್, ಮೈಸೂರು–ಕುಶಾಲನಗರ ರೈಲ್ವೆ ಯೋಜನೆ, ಮೈಸೂರು ಏರ್‌ಪೋರ್ಟ್ ವಿಸ್ತರಣೆ, ಕಡಕೊಳದಲ್ಲಿ ಕೈಗಾರಿಕೆ ಸ್ಥಾಪನೆ ಕುರಿತು ನೀಡಿದ್ದ ಭರವಸೆಗಳನ್ನು ಇದುವರೆಗೆ ಯಾಕೆ ಈಡೇರಿಸಿಲ್ಲ. ಈ ಸಂಬಂಧ ಜೂ. 1, ಬೆಳಗ್ಗೆ 11 ಗಂಟೆಗೆ ನಿಮ್ಮ ಕಚೇರಿಗೆ ಬರುತ್ತೇನೆ. ಈ ಭರವಸೆಗಳಿಗೆ ಉತ್ತರ ಕೊಡಲೇಬೇಕು ಎಂದು ಆಗ್ರಹಿಸಿದರು.

ಸಮಾಜದಲ್ಲಿ ಶಾಂತಿ ಕದಡಲು ಬೆಂಕಿ ಹಚ್ಚುವುದು ಬಿಟ್ಟರೆ ಪ್ರತಾಪ ಸಿಂಹಗೆ ಬೇರೆ ಏನೂ ಗೊತ್ತಿಲ್ಲ. ಮೈಸೂರಿಗೆ ಅವರ ಕೊಡುಗೆ ಶೂನ್ಯ. ವರುಣ ಕ್ಷೇತ್ರದಲ್ಲಿ ವಿ.ಸೋಮಣ್ಣ ಅವರನ್ನು ಬಲಿಪಶು ಮಾಡಿದರು. ಲಿಂಗಾಯತ ಸಮುದಾಯದ ನಾಯಕರನ್ನು ಬಿಜೆಪಿ ವ್ಯವಸ್ಥಿತವಾಗಿ ಹತ್ತಿಕ್ಕುತ್ತಾ ಬಂದಿದೆ. ಇನ್ನಾದರೂ ವೀರಶೈವ ಲಿಂಗಾಯತ ಸಮುದಾಯ ಬಿಜೆಪಿಯ ಕುತಂತ್ರವನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಜೆಡಿಎಸ್ ಮುಗಿದ ಅಧ್ಯಾಯ: ಜೋಕರ್ ಪಕ್ಷ ಎಂದು ಕರೆಯುವ ಜೆಡಿಎಸ್ ಅನ್ನು ಬಿಜೆಪಿ ಮುಗಿಸಿದೆ. ಅದಕ್ಕೆ ಬಿಜೆಪಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಈ ಬಾರಿ ಜೆಡಿಎಸ್ ಬಹುಮತ ಬರದಿದ್ದರೆ ವಿಸರ್ಜನೆ ಮಾಡುತ್ತೇನೆ ಎಂದು ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದರು. ಇನ್ನು ವಿಸರ್ಜನೆ ಏಕೆ ಮಾಡಿಲ್ಲ? ಮೈ ಕೈ ಪರಚಿಕೊಳ್ಳುವುದನ್ನು ಬಿಟ್ಟು ವಿಸರ್ಜನೆ ಮಾಡಬೇಕು. ಈಗ ಗೆದ್ದಿರುವ 19 ಶಾಸಕರಲ್ಲಿ 10ರಿಂದ 12 ಜನ ಜೆಡಿಎಸ್‌ನಿಂದ ಹೊರ ಹೋಗಲು ಮುಂದಾಗಿದ್ದಾರೆ. ಜೆಡಿಎಸ್ ಕಥೆ ಮುಗಿದಿದೆ. ಜೆಡಿಎಸ್ ಮುಗಿದ ಅಧ್ಯಾಯ ಎಂದರು.

ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಆಟ ಇನ್ನು ಮೈಸೂರಲ್ಲಿ ನಡೆಯುವುದಿಲ್ಲ. ಏನಾದರೂ ಮಾಡಿದರೆ ರೌಡಿ ಶೀಟರ್ ತೆರೆಯಲಾಗುತ್ತದೆ. ಹಿಂದೆ ಆತನ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿತ್ತು. ಆ ದೂರು ಏನಾಗಿದೆ? ಕೂಡಲೇ ಎಫ್‌ಐಆರ್ ದಾಖಲಿಸಿ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹತ್ಯೆಗೆ ಈ ಹಿಂದೆ ಪ್ರಚೋದನಾಕಾರಿ ಹೇಳಿಕೆ ನೀಡಿದ್ದ ಶಾಸಕ ಅಶ್ವಥ್ ನಾರಾಯಣ್ ಅವರನ್ನು ಬಂಧಿಸಬೇಕು. 24 ಗಂಟೆಯಲ್ಲಿ ಡಾ.ಸಿ.ಎನ್. ಅಶ್ವಥ್ ನಾರಾಯಣ್ ಬಂಧಿಸದಿದ್ದರೆ ಐಜಿ ರವರನ್ನು ಭೇಟಿ ಮಾಡಿ, ಕಚೇರಿ ಮುಂದೆ ಪ್ರತಿಭಟನೆ ಮಾಡುತ್ತೇನೆ. ಬಿಜೆಪಿ ಅಧಿಕಾರದಲ್ಲಿದ್ದಾಗ ಮಾಡಿದಂತೆ ಮಾಡಬೇಡಿ. ಯಾರ ಪರವಾಗಿ ಯಾರ ಒತ್ತಾಯಕ್ಕೆ ಕೆಲಸ ಮಾಡುವುದನ್ನು ಬಿಡಿ ಒತ್ತಡಕ್ಕೆ ಒಳಗಾಗಿ ಕೆಲಸ ಮಾಡಬೇಡಿ ಎಂದರು. ಮೈಸೂರು ಗ್ರಾಮಾಂತರ ಜಿಲ್ಲಾ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಕಾಂಗ್ರೆಸ್ ಮುಖಂಡ ಗಿರೀಶ್‌ನಾಯಕ ಇದ್ದರು.